ಶುಕ್ರವಾರ, ಏಪ್ರಿಲ್ 16, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 106 | ಪುಟ 14

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ವೃತ್ತಿಯಲ್ಲಿ ವಿಜ್ಞಾನಿ ಆಗಿರುವ ತೇಜಸ್ ಅವರು ಕೆಲಕಾಲದ ಅಂತರದ ಬಳಿಕ 'ರಿವೈಂಡ್' ಚಿತ್ರದ ಮೂಲಕ ಬೆಳ್ಳಿತೆರೆಗೆ ಬಂದಿದ್ದಾರೆ.



ಆಳ-ಅಗಲ
ದೇಶದಲ್ಲಿ ಕೋವಿಡ್ ಲಸಿಕೆ ಕೊರತೆ?

ದೇಶ, ವಿದೇಶಗಳಿಂದ ಪುಸ್ತಕ ದಾನ 5

'ಬಂಗಾಳದಲ್ಲಿ ಪರಿವರ್ತನೆ ಬೇಕಾಗಿಲ್ಲ' 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
48,804 ▲	14,581 ▲	₹48,270 (ಬೆಂಗಳೂರು)	₹70,200 (ಬೆಂಗಳೂರು)	74.93 ▲

ಮಾಸ್ಕ್ ಧರಿಸದ ರಾಜಕೀಯ, ಧಾರ್ಮಿಕ ಮುಖಂಡರತ್ತ ಮೊದಲು ಕ್ರಮಕೈಗೊಳ್ಳಿ: ಹೈಕೋರ್ಟ್

ರಾಜಕಾರಣಿ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ನಿಯಂತ್ರಣ ಕುರಿತ ಮಾರ್ಗಸೂಚಿ ನಿಯಮಗಳನ್ನು ಉಲ್ಲಂಘಿಸುವ ರಾಜಕೀಯ ಮತ್ತು ಧಾರ್ಮಿಕ ಮುಖಂಡರ ವಿರುದ್ಧ ಮೊದಲ ಹಂತದಲ್ಲಿ ಕ್ರಮ ಜರುಗಿಸಿ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿಪಿ-ಐಜಿಪಿ) ಹೈಕೋರ್ಟ್ ನಿರ್ದೇಶನ ನೀಡಿದೆ.

ಕೋವಿಡ್ ನಿಯಮ ಪಾಲನೆ ಆಗದಿರುವ ಕುರಿತು ಬೆಂಗಳೂರಿನ ಲೆಟ್ಜ್‌ಕಿಟ್ ಫೌಂಡೇಷನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಈ ಆದೇಶದ ಸಾರಾಂಶವನ್ನು ಕೂಡಲೇ ಡಿಜಿಪಿ ಅವರಿಗೆ ರವಾನಿಸಬೇಕು. ಲಿಖಿತ ಆದೇಶದ ಪ್ರತಿಗಾಗಿ ಕಾಯಬಾರದು' ಎಂದೂ ಸರ್ಕಾರದ ಪರ ವಕೀಲರಿಗೆ ಸೂಚನೆ ನೀಡಿತು.

ಮಾಸ್ಕ್ ಧರಿಸದ ಮತ್ತು ಅಂತರ ಕಾಪಾಡದವರ ವಿರುದ್ಧ ಮುಲಾಜಿಲ್ಲದೆ ಎಫ್ಐಆರ್ ದಾಖಲಿಸಿ ಎಂದೂ ಆದೇಶಿಸಿದ ಪೀಠ, ಕೋವಿಡ್ ನಿಯಮ ಉಲ್ಲಂಘನೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಹಿಂಜರಿಯುವ ಪೊಲೀಸರಿಗೂ ಚಾಟಿ ಬೀಸಿತು.

'ಸಾಂಕ್ರಾಮಿಕ ರೋಗಗಳ ನಿಯಂತ್ರಣ ಕಾಯ್ದೆ-2020ಯ ಸೆಕ್ಷನ್ 5ರ ಪ್ರಕಾರ ನಿಯಮ ಪಾಲಿಸದವರ ವಿರುದ್ಧ ಜಾಮೀನು ರಹಿತ ಪ್ರಕರಣ ದಾಖಲಿಸಲು ಅವಕಾಶ ಇದೆ. ಆದರೆ, ಪ್ರಭಾವಿ ರಾಜಕೀಯ ಮುಖಂಡರು ಮತ್ತು ಧಾರ್ಮಿಕ ಮುಖಂಡರು ಎಂಬ ಕಾರಣಕ್ಕೆ ಪ್ರಕರಣ ದಾಖಲಿಸಲು ಪೊಲೀಸರು ಹಿಂದೇಟು ಹಾಕುತ್ತಿದ್ದಾರೆ. ಇಷ್ಟೊಂದು ಕಡಿಮೆ ಸಂಖ್ಯೆಯ ಎಫ್ಐಆರ್ ದಾಖಲಾಗಿರುವುದನ್ನು ಗಮನಿಸಿದರೆ ಅದು ಅರ್ಥವಾಗುತ್ತದೆ' ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿತು.

10ನೇ ಪುಟ ನೋಡಿ



ಮುಖ್ಯಾಂಶಗಳು

- ಅನುಸರಣಾ ವರದಿ ಸಲ್ಲಿಸಲು ಕಟ್ಟಪ್ಪಣೆ
- ರ್‍ಯಾಲಿಗಳಲ್ಲಿ ಭಾಗವಹಿಸಿದ ಪ್ರತಿಯೊಬ್ಬರ ವಿರುದ್ಧ ಕ್ರಮ
- ಮಾದರಿಯಾಗದ ರಾಜಕೀಯ, ಧಾರ್ಮಿಕ ಮುಖಂಡರು

ರಾಜ್ಯ ಕೋವಿಡ್ ಅಂಕಿ-ಅಂಶ

11,09,650 ▲ ಒಟ್ಟು ಸೋಂಕಿತರು (10,94,912 ನಿನ್ನೆಯ ವಿವರ)

96,561 ▲ ಸಕ್ರಿಯ ಪ್ರಕರಣಗಳು

9,99,958 ▲ ಗುಣಮುಖರಾದವರು

13,112 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	14,738	▼
ಗುಣಮುಖ	3,591	▼
ಸಾವು	66	▲

555 ಐಸಿಯುನಲ್ಲಿ ಇರುವವರು

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಜನತಾ ಕರ್ಫ್ಯೂ ಅನಗತ್ಯ– ಸುಧಾಕರ್

ಸೋಂಕಿನ ಪ್ರಮಾಣ ಮಹಾರಾಷ್ಟ್ರದಷ್ಟು ನಮ್ಮಲ್ಲಿ ಇಲ್ಲ. ಹೀಗಾಗಿ, ಅಲ್ಲಿ ವಿಧಿಸಲಾಗಿರುವ ಜನತಾ ಕರ್ಫ್ಯೂವನ್ನು ರಾಜ್ಯದಲ್ಲಿ ಜಾರಿ ಮಾಡುವ ಅಗತ್ಯ ಇಲ್ಲ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಕೋವಿಡ್ ನಿಯಂತ್ರಿಸಲು ಬೇರೆ ರಾಜ್ಯಗಳು ತೆಗೆದುಕೊಂಡಿರುವ ಕಠಿಣ ಕ್ರಮಗಳ ಬಗ್ಗೆಯೂ ಪರಿಶೀಲನೆ ನಡೆಸಿದ್ದೇವೆ. ರಾಜ್ಯದಲ್ಲಿ ಕೋವಿಡ್ ಹೆಚ್ಚಳದ ಅಂದಾಜು, ಕೈಗೊಳ್ಳಬೇಕಾದ ನಿಯಂತ್ರಣಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಸಲಹಾ ಸಮಿತಿಯ ವರದಿ ಕುರಿತು ಮುಖ್ಯಮಂತ್ರಿ ಜೊತೆ ಚರ್ಚಿಸಿ, ಬಿಗಿ ಕ್ರಮ ತೆಗೆದುಕೊಳ್ಳುವ ಬಗ್ಗೆ ನಿರ್ಧರಿಸಲಾಗುವುದು' ಎಂದರು.

ಸಾವಿನ ಪ್ರಮಾಣವನ್ನು ಸೋಂಕಿತರ ಪೈಕಿ ಎಷ್ಟು ಜನ ಮೃತಪಟ್ಟಿದ್ದಾರೆ ಎಂಬುದರ ಆಧಾರದ ಮೇಲೆ ಅಳೆಯಬೇಕು. ನಮ್ಮಲ್ಲಿ ಸದ್ಯ ಶೇ 0.5 ಅಥವಾ ಶೇ 0.6ರಷ್ಟು ಸಾವಿನ ಪ್ರಮಾಣ ಇದೆ. ಇದನ್ನು ಇನ್ನಷ್ಟು ಕಡಿಮೆ ಮಾಡುವ ಗುರಿ ಇದೆ' ಎಂದರು.

ಸರ್ಕಾರಿ ವ್ಯವಸ್ಥೆಯಲ್ಲಿ ಈ ಚುಚ್ಚುಮದ್ದಿನ ಕೊರತೆ ಆಗಿಲ್ಲ. ಕೋವಿಡ್ ವಿಷಯದಲ್ಲಿ ಯಾರೂ ರಾಜಕಾರಣ ಮಾಡಬಾರದು. ಎಲ್ಲರೂ ಸೇರಿ ಹೋರಾಟ ಮಾಡಿದರೆ ಸೋಂಕು ಎದುರಿಸಬಹುದು ಎಂದರು.

ಶುದ್ಧ ನೀರಿನ ಘಟಕ ಅಕ್ರಮ: ಸಮಗ್ರ ವಿಚಾರಣೆ

ವರದಿ ಪರಿಣಾಮ

ಬೆಂಗಳೂರು: ಶುದ್ಧ ಕುಡಿಯುವ ನೀರಿನ ಘಟಕಗಳ ಅಳವಡಿಕೆ ಮತ್ತು ನಿರ್ವಹಣೆಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ವಿಚಾರಣೆ ನಡೆಸಿ, ವರದಿ ನೀಡಲು ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಜಂಟಿ ಸದನ ಸಮಿತಿಯ ಕಾರ್ಯವ್ಯಾಪ್ತಿಯ ಆದೇಶ ಹೊರಡಿಸಲಾಗಿದೆ.

2013ರಿಂದ ಈವರೆಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲು ಅನುಸರಿಸಿದ ಮಾನದಂಡಗಳು, ಅವುಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ವಿಧಿಸಲಾಗಿರುವ ಷರತ್ತುಗಳು ಮತ್ತು ಅನುಸರಿಸಿರುವ ಕ್ರಮಗಳ ಬಗ್ಗೆ ವಿಚಾರಣೆ ನಡೆಸಲಿದೆ.

ಶುದ್ಧ ಕುಡಿಯುವ ನೀರಿನ ಘಟಕಗಳ ಕಾರ್ಯಾಚರಣೆ ಮತ್ತು ಅವುಗಳನ್ನು ನಿರ್ವಹಿಸಿರುವ ವಿವಿಧ ಸಂಘ ಸಂಸ್ಥೆಗಳು /ಗುತ್ತಿಗೆದಾರರನ್ನು ಆಯ್ಕೆ ಮಾಡಿರುವ ವಿಧಾನ ಮತ್ತು ಅವುಗಳ ಕಾರ್ಯವೈಖರಿಯ ಕುರಿತು ಪರಾಮರ್ಶೆ ನಡೆಯಲಿದೆ.

ನೀರಿನ ಘಟಕಗಳ ಸ್ಥಾಪನೆ ಮತ್ತು ನಿರ್ವಹಣೆಗೆ ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ಹಣ ಖರ್ಚಾಗುತ್ತಿರುವ ಬಗ್ಗೆ ಪರಿಶೀಲಿಸುವುದು. ಈಗ ಕಾರ್ಯಾಚರಣೆಯಲ್ಲಿರುವ, ತಾತ್ಕಾಲಿಕ/ ಶಾಶ್ವತವಾಗಿ ಸ್ಥಗಿತಗೊಂಡಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ವಿವರ, ಸ್ಥಗಿತಗೊಳ್ಳಲು ಕಾರಣವಾಗಿರುವ ಅಂಶಗಳು, ಸುಸ್ಥಿತಿಯಲ್ಲಿಡಲು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸದನ ಸಮಿತಿ ವಿಚಾರಣೆ ನಡೆಸಲಿದೆ. ಪ್ರಜಾವಾಣಿ ಈ ಅಕ್ರಮದ ಕುರಿತು ವಿಶೇಷ ವರದಿ ಪ್ರಕಟಿಸಿತ್ತು.

ಚುನಾವಣೆ: ಬಹಿರಂಗ ಪ್ರಚಾರಕ್ಕೆ ತೆರೆ

ಬೆಂಗಳೂರು: ಬೆಳಗಾವಿ ಲೋಕಸಭೆ ಕ್ಷೇತ್ರ, ಮಸ್ಕಿ ಮತ್ತು ಬಸವಕಲ್ಯಾಣ ವಿಧಾನಸಭೆ ಕ್ಷೇತ್ರಗಳಿಗೆ ಶನಿವಾರ (ಏ.17) ಉಪಚುನಾವಣೆ ನಡೆಯಲಿದ್ದು, ಬಹಿರಂಗ ಪ್ರಚಾರಕ್ಕೆ ಗುರುವಾರ ಸಂಜೆ ತೆರೆಬಿದ್ದಿತು.

ಶುಕ್ರವಾರ ಮನೆ ಮನೆಗೆ ತೆರಳಿ ಪ್ರಚಾರ ನಡೆಸಬಹುದಾಗಿದೆ.

ಬಿಜೆಪಿ ಅಭ್ಯರ್ಥಿಗಳ ಪರ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ, ಲಕ್ಷ್ಮಣ ಸವದಿ, ಸಚಿವರಾದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್ ಪ್ರಚಾರ ನಡೆಸಿದರೆ, ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಮುಖಂಡರಾದ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಈಶ್ವರ ಖಂಡ್ರೆ, ಮಲ್ಲಿಕಾರ್ಜುನ ಖರ್ಗೆ ಪ್ರಚಾರ ನಡೆಸಿದರು.

ಬಸವ ಕಲ್ಯಾಣದಲ್ಲಿ ಜೆಡಿಎಸ್ ಅಭ್ಯರ್ಥಿ ಪರ ಎಚ್.ಡಿ.ಕುಮಾರಸ್ವಾಮಿ ಪ್ರಚಾರ ನಡೆಸಿದರು.

ಇದೇ 25ರಂದು ಕೆ–ಸೆಟ್ ಪರೀಕ್ಷೆ

ಮೈಸೂರು: ಮೈಸೂರು ವಿಶ್ವವಿದ್ಯಾಲಯವು ಮುಂದೂಡಿದ್ದ, ಕರ್ನಾಟಕ ರಾಜ್ಯ ಉಪನ್ಯಾಸಕರ ಅರ್ಹತಾ ಪರೀಕ್ಷೆಯು (ಕೆ-ಸೆಟ್) ಏ. 25ರಂದು ನಡೆಯಲಿದೆ.

'ಪರೀಕ್ಷೆ ನಡೆಸುವ ವಿಚಾರವನ್ನು ರಾಜ್ಯ ಸರ್ಕಾರದ ಗಮನಕ್ಕೆ ತರಲಾಗಿದೆ. ಕೋವಿಡ್–19 ಮಾರ್ಗಸೂಚಿ ಪ್ರಕಾರವೇ ಪರೀಕ್ಷೆ ನಡೆಸಲಾಗುವುದು' ಎಂದು ಕೆ–ಸೆಟ್ ಸಂಯೋಜಕ ಪ್ರೊ.ಎಚ್.ರಾಜಶೇಖರ್ ತಿಳಿಸಿದರು.

ಬೆಂಗಳೂರು, ಮೈಸೂರು, ಬೆಳಗಾವಿ, ಬಳ್ಳಾರಿ, ವಿಜಯಪುರ, ದಾವಣಗೆರೆ, ಧಾರವಾಡ, ಕಲಬುರ್ಗಿ, ಮಂಗಳೂರು, ಶಿವಮೊಗ್ಗ ಮತ್ತು ತುಮಕೂರಿನಲ್ಲಿರುವ ನೋಡಲ್ ಕೇಂದ್ರಗಳಲ್ಲಿ 41 ವಿಷಯಗಳಲ್ಲಿ ಪರೀಕ್ಷೆ ನಡೆಯಲಿದೆ. ಮಾಹಿತಿಗೆ http://kset.uni-mysore.ac.in

ಎನ್ಇಇಟಿ–ಪಿಜಿ: ಮುಂದೂಡಿಕೆ

ನವದೆಹಲಿ (ಪಿಟಿಐ): ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು (ಎನ್ಇಇಟಿ-ಪಿಜಿ-2021) ಕೇಂದ್ರ ಸರ್ಕಾರ ಮುಂದೂಡಿದೆ. ದೇಶದಲ್ಲಿ ಕೋವಿಡ್–19 ಉಲ್ಬಣಗೊಳ್ಳುತ್ತಿರುವ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಗುರುವಾರ ತಿಳಿಸಿದ್ದಾರೆ.

'ಏಪ್ರಿಲ್ 18ರಂದು ನಿಗದಿಯಾಗಿದ್ದ ಈ ಪರೀಕ್ಷೆಯ ಮುಂದಿನ ದಿನಾಂಕವನ್ನು ನಂತರ ನಿರ್ಧರಿಸಲಾಗುವುದು' ಎಂದು ಟ್ವೀಟ್ ಮಾಡಿದ್ದಾರೆ.

ಕೋವಿಡ್: ಹತ್ತು ರಾಜ್ಯಗಳಲ್ಲಿ ಗರಿಷ್ಠ

ನವದೆಹಲಿ (ಪಿಟಿಐ): ದೇಶದ ಹತ್ತು ರಾಜ್ಯಗಳಲ್ಲಿ ಕೋವಿಡ್ ಸೋಂಕಿತರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ ಎಂದು ಕೇಂದ್ರದ ಆರೋಗ್ಯ ಸಚಿವಾಲಯ ಗುರುವಾರ ತಿಳಿಸಿದೆ.



ಮಹಾರಾಷ್ಟ್ರ, ಉತ್ತರಪ್ರದೇಶ, ದೆಹಲಿ, ಛತ್ತೀಸಗಡ, ಕರ್ನಾಟಕ, ಮಧ್ಯಪ್ರದೇಶ, ಕೇರಳ, ತಮಿಳುನಾಡು, ಗುಜರಾತ್ ಹಾಗೂ ರಾಜಸ್ಥಾನದಲ್ಲಿ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದೆ. ಹೊಸ ಸೋಂಕಿತರಲ್ಲಿ ಶೇ 80.76ರಷ್ಟು ಮಂದಿ ಈ ಹತ್ತು ರಾಜ್ಯಗಳಿಗೆ ಸೇರಿದವರು ಎಂದು ಸಚಿವಾಲಯ ತಿಳಿಸಿದೆ.

ಗುರುವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಿರುವ 24 ಗಂಟೆಗಳ ಅವಧಿಯಲ್ಲಿ, ದೇಶದಲ್ಲಿ 2,00,739 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಮಹಾರಾಷ್ಟ್ರವೊಂದರಲ್ಲೇ 58,952 ಪ್ರಕರಣಗಳು ದಾಖಲಾಗಿವೆ. ಉತ್ತರಪ್ರದೇಶದಲ್ಲಿ 20,439 ಹಾಗೂ ದೆಹಲಿಯಲ್ಲಿ 17,282 ಪ್ರಕರಣಗಳು ದೃಢಪಟ್ಟಿವೆ. ಈ ಅವಧಿಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆಯಲ್ಲಿ 1.06 ಲಕ್ಷದಷ್ಟು ಏರಿಕೆಯಾಗಿದೆ.

ಮುಂಬೈಯನ್ನು ಹಿಂದಿಕ್ಕಿದ ದೆಹಲಿ

ದೆಹಲಿಯಲ್ಲಿ ಬುಧವಾರ 17,282 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಆ ಮೂಲಕ ದೆಹಲಿಯು ಅತಿ ಹೆಚ್ಚು ಸೋಂಕಿತ ನಗರಗಳ ಪಟ್ಟಿಯಲ್ಲಿ ಮುಂಬೈಯನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೆ ಏರಿದೆ.

ಕಳೆದ 5 ದಿನಗಳಿಂದ ದೆಹಲಿಯಲ್ಲಿ ಸೋಂಕು ವಿಪರೀತ ವೇಗದಲ್ಲಿ ಹರಡುತ್ತಿದ್ದು, ಆರೋಗ್ಯ ಸೇವಾ ಕ್ಷೇತ್ರವು ಭಾರಿ ಸಮಸ್ಯೆ ಎದುರಿಸುವಂತಾಗಿದೆ. 'ನಗರದ ಸ್ಥಿತಿ ಸಂಪೂರ್ಣವಾಗಿ ಹದಗೆಟ್ಟಿದೆ. ಯುವಕರು, ವೃದ್ಧರು, ಲಸಿಕೆ ಪಡೆದಿರುವವರು, ಪಡೆಯದಿರುವವರು ಹೀಗೆ ಪ್ರತಿಯೊಬ್ಬರೂ ಸೋಂಕಿಗೆ ಒಳಗಾಗುತ್ತಿದ್ದಾರೆ' ಎಂದು ಅಪೊಲೊ ಆಸ್ಪತ್ರೆಯ ಹಿರಿಯ ವೈದ್ಯಕೀಯ ಸಲಹೆಗಾರ ಸುರಂಜಿತ್ ಚಟರ್ಜಿ ಹೇಳಿದ್ದಾರೆ.

ವಿದೇಶಿ ಲಸಿಕೆ: 3 ದಿನಗಳಲ್ಲಿ ತೀರ್ಮಾನ

'ವಿದೇಶಿ ನಿರ್ಮಿತ ಕೋವಿಡ್ ಲಸಿಕೆಗಳನ್ನು ಭಾರತದಲ್ಲಿ ತುರ್ತು ಸಂದರ್ಭದಲ್ಲಿ ಬಳಕೆಗೆ ಅನುಮತಿ ನೀಡುವ ವಿಚಾರವಾಗಿ ಮೂರು ದಿನದೊಳಗೆ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಸರ್ಕಾರ ಹೇಳಿದೆ

ವಿದೇಶಿ ಲಸಿಕೆಗಳ ಆಮದಿಗೆ ಸಂಬಂಧಿಸಿದಂತೆ ಒಂದು ನಿಯಂತ್ರಣ ವ್ಯವಸ್ಥೆಯನ್ನು ಕೇಂದ್ರದ ಆರೋಗ್ಯ ಸಚಿವಾಲಯವು ಗುರುವಾರ ಸಿದ್ಧಪಡಿಸಿದೆ. ಅದರಂತೆ, ತುರ್ತು ಸಂದರ್ಭದಲ್ಲಿ ನಿಯಂತ್ರಿತ ಬಳಕೆಗೆ ಸಂಬಂಧಿಸಿದಂತೆ ಲಸಿಕೆ ತಯಾರಿಸುವ ವಿದೇಶಿ ಸಂಸ್ಥೆಗಳು ಸಲ್ಲಿಸಿರುವ ಅರ್ಜಿಗಳನ್ನು ಕೇಂದ್ರದ ಔಷಧ ಮತ್ತು ಗುಣಮಟ್ಟ ನಿಯಂತ್ರಣ ಸಂಸ್ಥೆಯು (ಸಿಡಿಎಸ್‌ಸಿಒ) ಪರಿಶೀಲಿಸುವುದು. ಇದಾದ ನಂತರ, ಭಾರತೀಯ ಔಷಧ ನಿಯಂತ್ರಣ ಮಹಾನಿರ್ದೇಶನಾಲಯವು (ಡಿಸಿಜಿಐ) ಮುಂದಿನ ಪ್ರಕ್ರಿಯೆ ನಡೆಸಿ, ಲಸಿಕೆ ಆಮದು ಪರವಾನಗಿ ನೀಡುವ ಕೆಲಸಕ್ಕೆ ಚಾಲನೆ ನೀಡುವುದು. ಇದೆಲ್ಲವೂ ಮೂರು ದಿನಗಳಲ್ಲಿ ನಡೆಯಲಿದೆ' ಎಂದು ಸರ್ಕಾರ ಹೇಳಿದೆ.

ರಾಜಸ್ಥಾನದಲ್ಲಿ ರಾತ್ರಿ ಕರ್ಫ್ಯೂ

ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ರಾಜಸ್ಥಾನದಲ್ಲಿ ಶುಕ್ರವಾರದಿಂದ 15 ದಿನಗಳ ಅವಧಿಗೆ ರಾತ್ರಿ ಕರ್ಫ್ಯೂ ಜಾರಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಹೇಳಿದ್ದಾರೆ.

ಸಂಜೆ 6 ಗಂಟೆಯಿಂದ ಮರುದಿನ ಮುಂಜಾನೆ 5ಗಂಟೆಯವರೆಗೆ ಕರ್ಫ್ಯೂ ಜಾರಿಯಲ್ಲಿರಲಿದೆ.

ವಾಕಿಂಗ್‌ಗೂ ನಿಷೇಧ

ಮುಂಬೈ: ಮಹಾರಾಷ್ಟ್ರದ ಕೆಲವೆಡೆ ಲಾಕ್‌ಡೌನ್‌ನಂಥ ಕಟ್ಟುನಿಟ್ಟಿನ ನಿರ್ಬಂಧಗಳನ್ನು ವಿಧಿಸಲಾಗಿದ್ದು, ಮುಂಜಾನೆಯ ವಾಕಿಂಗ್, ಜಾಗಿಂಗ್, ಸೈಕ್ಲಿಂಗ್ ಮುಂತಾದ ಚಟುವಟಿಕೆಗಳನ್ನೂ ನಿರ್ಬಂಧಿಸಲಾಗಿದೆ.

ರಾಜ್ಯದಲ್ಲಿ 15ದಿನಗಳ ಕಾಲ ಲಾಕ್‌ಡೌನ್ ಮಾದರಿಯ ನಿಷೇಧಗಳನ್ನು ವಿಧಿಸಲಾಗಿದೆ. ಆದರೆ ಈ ಕುರಿತು ಜನರಲ್ಲಿ ಅನೇಕ ಗೊಂದಲಗಳಿದ್ದವು. ಅದಕ್ಕೆ ಸ್ಪಷ್ಟನೆಯ ರೂಪದಲ್ಲಿ ಸರ್ಕಾರವು ಪ್ರಶ್ನೋತ್ತರ ಮಾದರಿಯ ಆರು ಪುಟಗಳ ಸ್ಪಷ್ಟನೆಯನ್ನು ಬಿಡುಗಡೆ ಮಾಡಿದೆ.

ಕುಂಭಮೇಳ: 1,700 ಮಂದಿಗೆ ಸೋಂಕು

ಡೆಹ್ರಾಡೂನ್/ಋಷಿಕೇಶ (ಪಿಟಿಐ): ಏಪ್ರಿಲ್ 10ರಿಂದ 14ರವರೆಗೆ ಹರಿದ್ವಾರದಲ್ಲಿ ನಡೆದ ಕುಂಭಮೇಳದಲ್ಲಿ ಪಾಲ್ಗೊಂಡವರಲ್ಲಿ 1,700ಕ್ಕೂ ಹೆಚ್ಚು ಮಂದಿಗೆ ಕೋವಿಡ್ ಇರುವುದು ದೃಢಪಟ್ಟಿದೆ.

'2,36,751 ಮಂದಿಯನ್ನು ವೈದ್ಯಕೀಯ ಕಾರ್ಯಕರ್ತರು ಪರೀಕ್ಷೆಗೊಳಪಡಿಸಿದಾಗ ಈ ಫಲಿತಾಂಶ ಹೊರಬಿದ್ದಿದೆ' ಎಂದು ಹರಿದ್ವಾರದ ಮುಖ್ಯ ವೈದ್ಯಾಧಿಕಾರಿ ಶಂಭಕುಮಾರ್ ಝಾ ತಿಳಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 3B, 10


ಹೇಮಾವತಿ ಜಲಾಶಯ ಯೋಜನೆ

ಭೂ ಕಬಳಿಕೆ ಪ್ರಕರಣ: 1,956 ಮಂಜೂರಾತಿ ರದ್ದು

• ಜಾನೇಕೆರೆ ಆರ್. ಪರಮೇಶ್

ಸಕಲೇಶಪುರ (ಹಾಸನ ಜಿಲ್ಲೆ): ಹೇಮಾವತಿ, ಯಗಚಿ ಹಾಗೂ ವಾಟೆಹೊಳೆ ಜಲಾಶಯ ಮುಳುಗಡೆ ಸಂತ್ರಸ್ತರ ಹೆಸರಿನಲ್ಲಿ ಭೂಮಿ ಕಬಳಿಸಿದ್ದ ಪ್ರಕರಣಕ್ಕೆ ಸಂಬಂಧಿಸಿ, 1,956 ಅಕ್ರಮ ಮಂಜೂರಾತಿ (7,824 ಎಕರೆ) ರದ್ದುಗೊಳಿಸಿ ಹೇಮಾವತಿ ಜಲಾಶಯ ಯೋಜನೆ ವಿಶೇಷ ಭೂಸ್ವಾಧೀನಾಧಿಕಾರಿ ವಿ.ಮಂಜುನಾಥ್ ಆದೇಶ ಹೊರಡಿಸಿದ್ದಾರೆ.

ಭೂ ಹಗರಣದ ಸಮಗ್ರ ತನಿಖೆ ನಡೆಸಿದ್ದ ಸಿಐಎನ್ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ನೀಡಿದ ವರದಿಯಂತೆ, 1970 ರಿಂದ 2014ರ ವರೆಗೆ ಹಾಗೂ ಜ.1, 2015ರಿಂದ ನ.3, 2018ರ ವರೆಗಿನ ಅಕ್ರಮ ಮಂಜೂರಾತಿಗಳನ್ನು ರದ್ದುಪಡಿಸಲಾಗಿದೆ. 'ಪ್ರಜಾವಾಣಿ' ಈ ಕುರಿತು ಆಗಸ್ಟ್ 25, 2019ರಂದು ವಿಶೇಷ ವರದಿ ಪ್ರಕಟಿಸಿತ್ತು.


ಸಂತ್ರಸ್ತರ ಹೆಸರಿನಲ್ಲಿ ಭೂಕಬಳಿಕೆ
ಮುಳುಗಡೆ ಹೆಸರಿನಲ್ಲಿ ಅಕ್ರಮ • ನಕಲಿ ದಾಖಲೆ ಸೃಷ್ಟಿಸಿ ಲೂಟಿ • ಅಧಿಕಾರಿಗಳು ಶಾಮೀಲು
ಹೇಮಾವತಿ ಯೋಜನೆ
46 95 25

ವರದಿ ಫಲಶ್ರುತಿ

ಒಂದೇ ನಕಲು ಅವಾರ್ಡ್ ಪ್ರತಿ ಮತ್ತು ಪೇಮೆಂಟ್ ವೋಚರ್ ಬಳಸಿ ಇಬ್ಬರಿಗೆ, ಮೂವರಿಗೆ ಅಧಿಕೃತ ಜ್ಞಾಪನಾ ಪತ್ರ ನೀಡಿ, ಅಕ್ರಮವಾಗಿ ಜಮೀನು ಮಂಜೂರಾತಿ ಮಾಡಿರುವ 41 ಪ್ರಕರಣಗಳು, 1970 ರಿಂದ 2015ರ ವರೆಗೆ ಸಂತ್ರಸ್ತರ ದಾಖಲೆಗಳನ್ನು ಬಳಸಿಕೊಂಡು ಎರಡನೇ ಬಾರಿಗೆ ಜಮೀನು ಮಂಜೂರಾತಿ ಮಾಡಿಸಿಕೊಂಡಿದ್ದ 62 ಪ್ರಕರಣಗಳು, ತಹಶೀಲ್ದಾರ್‌ರಿಂದ ಸಾಗುವಳಿ ಚೀಟಿ ವಿತರಿಸಿ ಪೋಡಿ ಖಾತೆ ಮಾಡಿರುವ 14 ಪ್ರಕರಣಗಳು, ಮರ ಮಾಲ್ಕಿ ನಿಗದಿಯಾಗದೆ ಸಾಗುವಳಿ ಚೀಟಿ ನೀಡಿರುವ 837 ಪ್ರಕರಣಗಳು, ವಿಶೇಷ ಭೂ ಸ್ವಾಧೀನಾಧಿಕಾರಿಗಳಾಗಿದ್ದ ಶ್ರೀನಿವಾಸಗೌಡ ಅವರು 2018–19ರಲ್ಲಿ ಮಂಜೂರು ಮಾಡಿದ್ದ 48 ಪ್ರಕರಣ ಹಾಗೂ ಬಿ.ಎ.ಜಗದೀಶ್ ಅವಧಿಯಲ್ಲಿನ ಅನಧಿಕೃತ 40 ಮಂಜೂರಾತಿ ಪ್ರಕರಣಗಳನ್ನು ರದ್ದುಗೊಳಿಸಲಾಗಿದೆ.

ಇದರೊಂದಿಗೆ, ನಕಲಿ ದಾಖಲೆ ಮೇಲೆ ಭೂಮಿ ಮಂಜೂರು ಮಾಡಿದ 32 ಪ್ರಕರಣ, ಅರಣ್ಯ ಇಲಾಖೆ ವಶದಲ್ಲಿರುವ ಮತ್ತು ಸರ್ಕಾರಿ ಗೋಮಾಳವೆಂದು ಪಹಣಿಯಲ್ಲಿ ನಮೂದಾಗಿದ್ದರೂ ಎಚ್‌ಆರ್‌ಪಿ ಯೋಜನೆ ಅಡಿಯಲ್ಲಿ ಭೂಮಿ ಪಡೆದ 226 ಪ್ರಕರಣ ಹಾಗೂ ಪೂರ್ಣ ದಾಖಲಾತಿ ಪಡೆಯದೇ ಬೇನಾಮಿಯಾಗಿ 56 ಜನರಿಗೆ ಅಧಿಕೃತ ಜ್ಞಾಪನಾ ಪತ್ರಗಳಿಗೆ ಅನಧಿಕೃತವಾಗಿ ಜಮೀನನ್ನು ಮಂಜೂರಾತಿ ಮಾಡಿರುವುದು ತನಿಖೆಯಿಂದ ದೃಢಪಟ್ಟಿದ್ದು, ಇವುಗಳ ಮಂಜೂರಾತಿಯನ್ನೂ ರದ್ದುಗೊಳಿಸಲಾಗಿದೆ.

'ಸಿಐಎನ್ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಅವರ ತನಿಖಾ ವರದಿ, ರಾಜ್ಯ ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಆಯುಕ್ತ ಮಹಮ್ಮದ್ ಮೋಸಿನ್ ಅವರ ನಿರ್ದೇಶನದಂತೆ ಈ ಕ್ರಮ ಕೈಗೊಂಡಿದ್ದು, ಪ್ರತಿಯೊಬ್ಬರಿಗೂ ನೋಟಿಸ್ ನೀಡಲಾಗಿದೆ' ಎಂದು ಹೇಮಾವತಿ ಜಲಾಶಯ ಯೋಜನೆ ವಿಶೇಷ ಭೂಸ್ವಾಧೀನಾಧಿಕಾರಿ ಮಂಜುನಾಥ್ ತಿಳಿಸಿದರು.

ಇಂದಿನ ಪಾಡ್‌ಕಾಸ್ಟ್ ವಿಶೇಷ
ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ವಿದ್ಯುತ್ ವ್ಯತ್ಯಯ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 17ರಿಂದ 20ರವರೆಗೆ ಬೆಳಿಗ್ಗೆ 10ರಿಂದ ಸಂಜೆ 6ರ ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಸಿದ್ಧಾರ್ಥ ನಗರ, ಮೆಟ್ರೊ ಕ್ವಾರ್ಟರ್ಸ್, ಅಯ್ಯಪ್ಪ ದೇವಸ್ಥಾನ ಹತ್ತಿರ, ಶಬರಿ ಶಾಲೆ ರಸ್ತೆ, ಎಸ್.ಎಂ. ರಸ್ತೆ ಚರ್ಚ್, ಪೀಣ್ಯ ನಾಲ್ಕನೇ ಬ್ಲಾಕ್, ಆರ್‌ಟಿಒ ಟ್ರ್ಯಾಕ್ ರಸ್ತೆ, ವಿದ್ಯಾ ಕೇಂದ್ರ ಶಾಲೆ, ಪೈಪ್‌ಲೈನ್ ರಸ್ತೆ, ಬಸವೇಶ್ವರ ಬಸ್ ನಿಲ್ದಾಣ, ಉಡುಪ ಗಾರ್ಡನ್, ತ್ರಿವೇಣಿ ಪೆಟ್ರೋಲ್ ಬಂಕ್ ಸುತ್ತ–ಮುತ್ತಲಿನ ಪ್ರದೇಶ.

ವನ್ಯಜೀವಿ ಮಂಡಳಿಗೆ ನೇಮಕ: ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ವನ್ಯಜೀವಿ ಮಂಡಳಿಗೆ 10 ಸದಸ್ಯರ ನಾಮನಿರ್ದೇಶನ ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ರಾಜ್ಯ ಸರ್ಕಾರ ಮತ್ತು ಇತರ ಪ್ರತಿವಾದಿಗಳಿಗೆ ನೋಟಿಸ್ ನೀಡಲು ಹೈಕೋರ್ಟ್ ಆದೇಶಿಸಿದೆ.

ಪರಿಸರ ಎಂಜಿನಿಯರ್ ಭೋಜರಾಜ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಚೇತನ್ ಬಿ., ಸೋಮಶೇಖರ್ ಎ.ಆರ್., ಅಲೋಕ್ ವಿಶ್ವನಾಥ್ (ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ ಅವರ ಪುತ್ರ), ನವೀನ್ ಜೆ.ಎಸ್., ವಿನೋದ್‌ಕುಮಾರ್ ಬಿ. ನಾಯಕ, ದಿನೇಶ್ ಸಿಂಘ್ವಿ, ಕೆ.ಎಸ್. ಎನ್. ಚಿಕ್ಕೆರೂರು (ನಿವೃತ್ತ ಐಪಿಎಸ್ ಅಧಿಕಾರಿ), ತ್ಯಾಗ್ ಉತ್ತಪ್ಪ, ಜೋಸೆಫ್ ಹೂವರ್ ಅವರನ್ನು ಒಳಗೊಂಡಂತೆ ಮಂಡಳಿಯನ್ನು ಪುನರ್ ರಚಿಸಿ ಸರ್ಕಾರ 2020 ಅಕ್ಟೋಬರ್ 16ರಂದು ಅಧಿಸೂಚನೆ ಹೊರಡಿಸಿತ್ತು. ಈ ನೇಮಕವು ವನ್ಯಜೀವಿ ಕಾಯ್ದೆಯ ಸೆಕ್ಷನ್ 6(1)(ಡಿ) ಮತ್ತು (ಇ) ಅಡಿಯಲ್ಲಿನ ನಿಬಂಧನೆಗಳ ಉಲ್ಲಂಘನೆಯಾಗಿದೆ ಎಂದು ಅರ್ಜಿದಾರರು ದೂರಿದ್ದಾರೆ.

‘ಇದು ರಾಜಕೀಯ ಪ್ರೇರಿತ ನೇಮಕವಾಗಿದ್ದು, ಒಂಬತ್ತು ಜನರಿಗೆ ಪರಿಸರ ವಿಜ್ಞಾನ ಮತ್ತು ಸಂರಕ್ಷಣೆ ಬಗ್ಗೆ ಆಳವಾದ ಜ್ಞಾನ ಇಲ್ಲ. ಅಲ್ಲದೇ, ಪರಿಶಿಷ್ಟ ಬುಡಕಟ್ಟು ಸಮುದಾಯಗಳನ್ನು ಪ್ರತಿನಿಧಿಸುವ ಸದಸ್ಯರನ್ನು ಒಳಗೊಂಡಿಲ್ಲ. ಇದು ಕಾನೂನಿಗೆ ವಿರುದ್ಧವಾದ ನೇಮಕ’ ಎಂದು ವಾದಿಸಿದ್ದಾರೆ.

‘ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಶಾಸಕ ಎಸ್.ಆರ್. ವಿಶ್ವನಾಥ್ ಸಮ್ಮುಖದಲ್ಲಿ ಮಂಡಳಿಯ 15ನೇ ಸಭೆಯನ್ನು 2021ರ ಜನವರಿ 19ರಂದು ನಡೆಸಲಾಗಿದೆ. ಆ ಮೂಲಕ ವನ್ಯಜೀವಿ ಮಂಡಳಿಯ ನಿಯಮಾವಳಿಗಳನ್ನು ಉಲ್ಲಂಘಿಸಲಾಗಿದೆ’ ಎಂದು ದೂರಿದ್ದಾರೆ.

‘ಗ್ರೇಟರ್ ಹೆಸರುಘಟ್ಟ ಸಂರಕ್ಷಣಾ ಮೀಸಲು ಪ್ರದೇಶದ ಪ್ರಸ್ತಾವನೆ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಗಿದೆ. ಮಂಡಳಿ ಅಧ್ಯಕ್ಷರಾಗಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವಿಶ್ವನಾಥ್ ಅವರ ಆಣತಿಯಂತೆ ಈ ಪ್ರಸ್ತಾವನೆ ತಿರಸ್ಕರಿಸಿದ್ದಾರೆ’ ಎಂದು ಅರ್ಜಿಯಲ್ಲಿ ಆರೋಪಿಸಿದ್ದಾರೆ.

ನೀರು ಪೂರೈಕೆಯಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ನೆಲಮಂಗಲ: ನಗರಸಭೆ ವ್ಯಾಪ್ತಿಯಲ್ಲಿ ಬೇಸಿಗೆ ಪ್ರಾರಂಭವಾದಾಗಿನಿಂದ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ.

ಪಟ್ಟಣದಲ್ಲಿ ಕೊಳವೆಬಾವಿಗಳನ್ನು ಬಿಟ್ಟರೆ ಬೇರೆ ಮೂಲಗಳು ಇರುವುದಿಲ್ಲ. ಬೇಸಿಗೆಯ ತೀವ್ರತೆಗೆ ಕೊಳವೆ ಬಾವಿಗಳಲ್ಲೂ ನೀರಿನ ಮಟ್ಟ ಕುಸಿಯುತ್ತಿದೆ. ಕೆಲವು ಬರಡಾಗಿವೆ ಎಂದು ಪೌರಾಯುಕ್ತ ಮಂಜುನಾಥಸ್ವಾಮಿ ತಿಳಿಸಿದ್ದಾರೆ.

ಪ್ರಸ್ತುತ ವಿದ್ಯುತ್ ಸರಬರಾಜು ವ್ಯವಸ್ಥೆಯಲ್ಲೂ ವ್ಯತ್ಯಯ ಉಂಟಾಗುತ್ತಿದ್ದು, ಕೊಳವೆ ಬಾವಿಗಳಿಂದ ಮುಖ್ಯ ನೀರು ಸರಬರಾಜು ಕೇಂದ್ರಕ್ಕೆ ಪಂಪ್ ಮಾಡಲು ಅಡಚಣೆ ಉಂಟಾಗುತ್ತಿದೆ. ಸಾರ್ವಜನಿಕರು ಕೊಳಾಯಿಗಳ ಮೂಲಕ ಪೂರೈಸುವ ನೀರನ್ನು ಹರಿಯಲು ಬಿಟ್ಟು ಪೋಲು ಮಾಡುತ್ತಿದ್ದಾರೆ. ನೀರನ್ನು ಉತ್ಪಾದಿಸಲು ಆಗುವುದಿಲ್ಲ. ಜಲಸಂರಕ್ಷಣೆ ನಮ್ಮ ಕರ್ತವ್ಯ. ಹಾಗಾಗಿ ನೀರನ್ನು ಹಿತಮಿತವಾಗಿ ಬಳಸಬೇಕು ಎಂದು ಮನವಿ ಮಾಡಿದ್ದಾರೆ.



ಶ್ರೀರಾಮ ಸೇವಾ ಮಂಡಲಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಗುರುವಾರ ಆಯೋಜಿಸಿದ್ದ 83ನೇ ಶ್ರೀ ರಾಮನವಮಿ ಅಂತರರಾಷ್ಟ್ರೀಯ ಸಂಗೀತೋತ್ಸವ –2021 ಕಾರ್ಯಕ್ರಮದಲ್ಲಿ (ಎಡದಿಂದ) ವೈಭವ ರಮಣಿ, ಕುಮಾರೇಶ್, ಅಕ್ಷಯ್ ಗಣೇಶ್ ಅವರು ವಯೋಲಿನ್ ಜುಗಲ್ಬಂದಿ ನಡೆಸಿಕೊಟ್ಟರು –ಪ್ರಜಾವಾಣಿ ಚಿತ್ರ

ಹಿರಿಯರ ಆರೈಕೆ: ವೆಬಿನಾರ್ ನಾಳೆ

ಬೆಂಗಳೂರು: ವಿಶ್ವ ಆರೋಗ್ಯ ದಿನದ ಪ್ರಯುಕ್ತ ಮಲ್ಲೇಶ್ವರದ ಮಣಿಪಾಲ ಆಸ್ಪತ್ರೆಯು ಶನಿವಾರ (ಏ.17) ಬೆಳಿಗ್ಗೆ 11.30ಕ್ಕೆ ‘ಕೋವಿಡ್ ಸಂದರ್ಭದಲ್ಲಿ ಹಿರಿಯರ ಆರೈಕೆ’ ಎಂಬ ವಿಷಯದ ಮೇಲೆ ವೆಬಿನಾರ್ ಆಯೋಜಿಸಿದೆ.

‘ಪ್ರಜಾವಾಣಿ’ ಮತ್ತು ಡೆಕ್ಕನ್ ಹೆರಾಲ್ಡ್’ ಸಹಯೋಗದಲ್ಲಿ ಈ ವೆಬಿನಾರ್ ನಡೆಯಲಿದೆ. ಆಸ್ಪತ್ರೆಯ ಆಂತರಿಕ ಔಷಧ ಸಲಹೆಗಾರ ಡಾ. ಬಸವರಾಜ್ ಕುಂಟೋಜಿ, ಡಾ. ದಿನೇಶ್ ವಿ. ಕಾಮತ್, ಮಲ್ಲೇಶ್ವರಮ್ ಸ್ವಾಭಿಮಾನ ಇನಿಷಿಯೇಟಿವ್ ಕಾರ್ಯದರ್ಶಿ ಸುಭಾಷಿಣಿ ಜಗನ್ನಾಥ ಹಾಗೂ ಸ್ತ್ರೀ ರೋಗ ತಜ್ಞೆ ಡಾ. ಮೀನಾಕ್ಷಿ ಭರತ್ ಭಾಗವಹಿಸಲಿದ್ದಾರೆ.

ವೃದ್ಧಾಪ್ಯವನ್ನು ಬಾಲ್ಯಕ್ಕೆ ಹೋಲಿಕೆ ಮಾಡಲಾಗುತ್ತದೆ. ಈ ಅವಧಿಯು ಜೀವನದ ಭಾವನಾತ್ಮಕ ಹಂತ. ಆದರೆ, ಕೋವಿಡ್ ಹಿರಿಯರ ಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ಈ ಸಂದರ್ಭದಲ್ಲಿ ಹಿರಿಯರು ಸವಾಲುಗಳು ಹೇಗೆ ಎದುರಿಸಬೇಕು ಹಾಗೂ ಬದುಕನ್ನು ಸುಲಭವಾಗಿಸಿಕೊಳ್ಳಲು ಏನು ಮಾಡಬೇಕು ಎಂಬುದನ್ನು ತಜ್ಞರು ತಿಳಿಸಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವೆಬಿನಾರ್‌ನಲ್ಲಿ ಪಾಲ್ಗೊಳ್ಳಲು bit.ly/MHWHD ಲಿಂಕ್ ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು.



ತಕ್ಷಣ ನೇಮಕಾತಿ ನಡೆಸಲು ಬೆಂಗಳೂರು ವಿ.ವಿಗೆ ಸಮಾಜ ಕಲ್ಯಾಣ ಇಲಾಖೆ ಸೂಚನೆ

20 ಬ್ಯಾಕ್‌ಲಾಗ್ ಹುದ್ದೆ ಭರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ 20 ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ ತಕ್ಷಣ ಅಧಿಸೂಚನೆ ಹೊರಡಿಸಿ, ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಆಹ್ವಾನಿಸಬೇಕು. ಅಲ್ಲದೆ, ಮೂರು ತಿಂಗಳ ಒಳಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು' ಎಂದು ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಅವರಿಗೆ ಸಮಾಜ ಕಲ್ಯಾಣ ಇಲಾಖೆ ಸೂಚಿಸಿದೆ.

'ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಬೇಕಿದೆ. ಹೀಗಾಗಿ, ಹುದ್ದೆಗಳ ಭರ್ತಿಗೆ ಈ ಹಿಂದೆ ಹೊರಡಿಸಿದ್ದ ಅಧಿಸೂಚನೆ ಪ್ರಕಾರ ನೇಮಕಾತಿ ಪ್ರಕ್ರಿಯೆ ನಡೆಸಲು ಕ್ರಿಯಾ ಯೋಜನೆ ಸಿದ್ಧಪಡಿಸಬೇಕು' ಎಂದೂ ಕುಲಪತಿಗೆ ಬರೆದ ಪತ್ರದಲ್ಲಿ ಇಲಾಖೆ ತಿಳಿಸಿದೆ.

'ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸೂಚನೆ ಪಾಲಿಸದೇ ಇದ್ದರೆ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು ಹಾಗೂ ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಕಾಯ್ದೆ 1990 ಸೆಕ್ಷನ್ 5ರ ಪ್ರಕಾರ ದಂಡ ವಿಧಿಸಲಾಗುವುದು ಮತ್ತು ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು. ಪತ್ರದಲ್ಲಿ ಸೂಚಿಸಿದಂತೆ ಕ್ರಮವಹಿಸಿ ಎರಡು ದಿನಗಳ ಒಳಗೆ ವರದಿ ನೀಡಬೇಕು' ಎಂದೂ ತಿಳಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬೋಧಕ ವೃಂದದಲ್ಲಿ ಮೀಸಲಾತಿ ರೋಸ್ಟರ್ ಜಾರಿಯಲ್ಲಿ ಲೋಪ ಆಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಗೆ ದೂರು ಸಲ್ಲಿಕೆ ಆಗಿತ್ತು. ಈ ಬಗ್ಗೆ ಪರಿಶೀಲಿಸಲು ಇಲಾಖೆ ತಂಡ ರಚಿಸಿತ್ತು. ಈ ತಂಡ ಅದಾಗಲೇ ಭರ್ತಿಯಾಗಿದ್ದ 10 ಬ್ಯಾಕ್‌ಲಾಗ್ ಹುದ್ದೆಗಳ ಜೊತೆಗೆ ಒಟ್ಟಾರೆ 55 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿ 2018ರ ಫೆ. 15ರಂದು ಸರ್ಕಾರಕ್ಕೆ ವರದಿ ಸಲ್ಲಿಸಿತ್ತು.

ವರದಿಯಲ್ಲಿರುವಂತೆ 55 ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವಂತೆ ಸಮಾಜ ಕಲ್ಯಾಣ ಇಲಾಖೆ 2018ರ ಫೆ. 26ರಂದು ವಿಶ್ವವಿದ್ಯಾಲಯಕ್ಕೆ ಸೂಚಿಸಿತ್ತು. ಅದರಂತೆ, ಅದೇ ವರ್ಷ ಮಾರ್ಚ್ 21ರಂದು ಅಧಿಸೂಚನೆ ಹೊರಡಿಸಲಾಗಿತ್ತು.

ಈ ಪೈಕಿ, 35 ಹುದ್ದೆಗಳಿಗೆ 2019ರ ಜುಲೈ 25, ಡಿ. 27 ಮತ್ತು 2020ರ ಆಗಸ್ಟ್ 3ರಂದು ನೇಮಕಾತಿ ನಡೆಸಲಾಗಿತ್ತು. ಉಳಿದ 20 ಹುದ್ದೆಗಳಲ್ಲಿ ಕೆಲವು ಹುದ್ದೆಗಳಿಗೆ ಅರ್ಜಿ ಸಲ್ಲಿಕೆ ಆಗಿರಲಿಲ್ಲ. ಕೆಲವು ಹುದ್ದೆಗಳಿಗೆ ಅರ್ಜಿ ಸಲ್ಲಿಕೆ ಆಗಿದ್ದರೂ ಕನಿಷ್ಠ ಅರ್ಹತೆ ಇರಲಿಲ್ಲ ಎಂದು ತಿಳಿಸಲಾಗಿತ್ತು.

ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸಿ.ಎಂ. ರವಿಕುಮಾರ್ ಎಂಬವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿತ್ತು. ಆದರೂ ನೇಮಕಾತಿಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ವಹಿಸಲು ಸಮಾಜ ಕಲ್ಯಾಣ ಇಲಾಖೆಗೆ ಸೂಚಿಸಿತ್ತು.

ಬ್ಯಾಕ್‌ಲಾಗ್ ನಿಯಮ ಉಲ್ಲಂಘನೆ ಆರೋಪ

ಬೆಂಗಳೂರು: 'ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ಅವರು ರಾಜ್ಯ ಸರ್ಕಾರದ ವಿಶೇಷ ಬ್ಯಾಕ್‌ಲಾಗ್ ನಿಯಮಗಳನ್ನು ಉಲ್ಲಂಘಿಸಿ ನೇಮಕಾತಿಗಳಲ್ಲಿ ಅಕ್ರಮ ಎಸಗಿದ್ದಾರೆ' ಎಂದು ಸಹಾಯಕ ಪ್ರಾಧ್ಯಾಪಕ ಹುದ್ದೆ ಆಕಾಂಕ್ಷಿ ಡಾ.ಎಚ್.ಕೆ. ರಾಘವೇಂದ್ರ ಆರೋಪಿಸಿದ್ದಾರೆ.

'ಸಹಾಯಕ ಪ್ರಾಧ್ಯಾಪಕರ ಆಯ್ಕೆಗೆ ನಡೆದ ಸಂದರ್ಶನದಲ್ಲಿ ಆಯ್ಕೆ ಸಮಿತಿಯು ಅರ್ಹ ಅಭ್ಯರ್ಥಿಗಳ ಶೈಕ್ಷಣಿಕ ವಿದ್ಯಾರ್ಹತೆ, ಅನುಭವ, ಶೈಕ್ಷಣಿಕ ಪ್ರಕಟಣೆ ಮುಂತಾದವುಗಳನ್ನು ಕಡೆಗಣಿಸಿ, ಅನರ್ಹ ಅಭ್ಯರ್ಥಿಗಳಿಗೆ ಹೆಚ್ಚು ಅಂಕಗಳನ್ನು ನೀಡುವ ಮೂಲಕ ನೇಮಕಾತಿ ಆದೇಶವನ್ನು ನೀಡಲಾಗಿದೆ' ಎಂದು ಅವರು ದೂರಿದ್ದಾರೆ.

'37 ವರ್ಷದ ನಾನು ಹೈದರಾಬಾದ್‌ನ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದಿದ್ದೇನೆ. ಅಲ್ಲದೆ, ಐದು ವರ್ಷದ ಬೋಧನಾ ಅನುಭವ ಹೊಂದಿರುವುದಲ್ಲದೆ, ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ, ಹಲವು ಪತ್ರಿಕೆಗಳನ್ನು ಪ್ರಕಟಿಸಿದ್ದೇನೆ' ಎಂದು ಅವರು ಹೇಳಿದ್ದಾರೆ.

'ಬೆಂಗಳೂರು ವಿಶ್ವವಿದ್ಯಾಲಯವು 2018ರಲ್ಲಿ ಹೊರಡಿಸಿದ ಅಧಿಸೂಚನೆಯಂತೆ, ರಾಜ್ಯ ಸರ್ಕಾರದ ವಿಶೇಷ ಬ್ಯಾಕ್‌ಲಾಗ್ ನಿಯಮಗಳ ಪ್ರಕಾರ, ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಿದ್ದೆ. 2019ರಲ್ಲಿ ಸಂದರ್ಶನಕ್ಕೆ ಹಾಜರಾಗಿದ್ದೆ' ಎಂದು ಅವರು ತಿಳಿಸಿದ್ದಾರೆ.

'ನಿಯಮದ ಅನ್ವಯ, 29ರಿಂದ 40 ವರ್ಷ ವಯಸ್ಸಿನವರನ್ನು ಈ ಹುದ್ದೆಗೆ ಪರಿಗಣಿಸಬೇಕಾಗಿತ್ತು. ಆದರೆ, ಕುಲಪತಿಯವರ ಅಧ್ಯಕ್ಷತೆಯ ಆಯ್ಕೆ ಸಮಿತಿಯು 24 ವರ್ಷದ ಮಹಿಳಾ ಅಭ್ಯರ್ಥಿಯೊಬ್ಬರಿಗೆ ನೇಮಕಾತಿ ಆದೇಶ ನೀಡಿತು. ಸಿಂಡಿಕೇಟ್ ಒಪ್ಪಿಗೆ ಪಡೆದ ದಿನವೇ ಅಂದರೆ 2019ರ ಡಿ.27ರಂದು ಈ ನೇಮಕ ಆದೇಶವನ್ನು ಕುಲಪತಿ ನೀಡಿದ್ದಾರೆ. ಇದನ್ನು ಪ್ರಶ್ನಿಸಿ ರಾಜ್ಯ ಹೈಕೋರ್ಟ್ ಮೊರೆ ಹೋಗಿದ್ದೆ. ಆ ಮಹಿಳೆಯ ನೇಮಕಾತಿಯನ್ನು ನ್ಯಾಯಾಲಯ ಅನೂರ್ಜಿತಗೊಳಿಸಿದೆ' ಎಂದೂ ಅವರು ಹೇಳಿದ್ದಾರೆ.

'ಆಯ್ಕೆಯಾಗಿದ್ದ ಮಹಿಳೆಗೆ ಸಂದರ್ಶನದಲ್ಲಿ 41.5 ಅಂಕಗಳನ್ನು ನೀಡಲಾಗಿತ್ತು. ಎರಡನೆಯನಾಗಿದ್ದ ನನಗೆ 35.5 ಅಂಕಗಳನ್ನು ನೀಡಲಾಗಿದೆ. ಮಹಿಳೆಯ ಆಯ್ಕೆ ಅನೂರ್ಜಿತಗೊಂಡಿರುವುದರಿಂದ ಮೊದಲನೆಯನಾದ ನನಗೇ ನೇಮಕಾತಿ ಆದೇಶ ನೀಡಬೇಕು. ಆದರೆ, ಸಂದರ್ಶನದಲ್ಲಿ ವಿಫಲನಾದ ಅಭ್ಯರ್ಥಿಗೆ ಆಯ್ಕೆ ಸಮಿತಿಯನ್ನು ಪ್ರಶ್ನಿಸುವ ಯಾವುದೇ ಹಕ್ಕು ಇರುವುದಿಲ್ಲ ಎಂಬ ಸುಪ್ರೀಂಕೋರ್ಟ್‌ನ ಅದೇಶ ಉಲ್ಲೇಖಿಸಿ ಕುಲಪತಿಯವರು ನನಗೆ ಅವಕಾಶ ನಿರಾಕರಿಸುತ್ತಿದ್ದಾರೆ' ಎಂದೂ ರಾಘವೇಂದ್ರ ದೂರಿದ್ದಾರೆ.

'ನಿಯಮದಂತೆ ನೇಮಕ'

'ಸಂದರ್ಶನ ಪ್ರಕ್ರಿಯೆ ಸಂಪೂರ್ಣ ವಿಡಿಯೊ ಚಿತ್ರೀಕರಣವಾಗಿದೆ. ಸಂದರ್ಶನದಲ್ಲಿ ಯಾರು ಉತ್ತಮವಾಗಿ ಉತ್ತರಿಸಿದ್ದಾರೋ ಅಂತಹ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ' ಎಂದು ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಹೇಳಿದರು.

'ಈಗಿನ ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಸರ್ಕಾರದ ನಿಯಮಾವಳಿ ಪ್ರಕಾರ ನೇಮಕ ಮಾಡಿಕೊಳ್ಳಬೇಕೋ, ಯುಜಿಸಿ ನಿಯಮದಂತೆ ನೇಮಕ ಮಾಡಿಕೊಳ್ಳಬೇಕೋ ಎಂದು ಸಲಹೆ ಕೇಳಲಾಗಿತ್ತು. ಯುಜಿಸಿ ನಿಯಮದಂತೆ ಮಾಡಿ ಎಂದು ಸರ್ಕಾರ ಹೇಳಿದೆ. ಅದರಂತೆ, 24 ವರ್ಷದವರನ್ನೂ ನೇಮಕ ಮಾಡಿಕೊಳ್ಳಬಹುದು. ಆ ನಿಯಮ ಪಾಲಿಸಿದ್ದೇವೆ' ಎಂದು ಸ್ಪಷ್ಟಪಡಿಸಿದರು.

'ಹೈಕೋರ್ಟ್ ಆದೇಶ ವಿದ್ದರೂ, ಮಹಿಳಾ ಅಭ್ಯರ್ಥಿ ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ. ತೀರ್ಪು ಬಂದ ನಂತರ ಆಯ್ಕೆ ಸಮಿತಿ ಮತ್ತೆ ಸಭೆ ಸೇರಬೇಕು. ಈ ವಿಷಯ ಸಿಂಡಿಕೇಟ್ ಮುಂದೆ ಬರಬೇಕು. ಇದರಲ್ಲಿ ಕುಲಪತಿ ಒಬ್ಬರದೇ ಪಾತ್ರ ಇರುವುದಿಲ್ಲ' ಎಂದೂ ಅವರು ಹೇಳಿದರು.

ರಾಮಯ್ಯ ಕ್ಯಾಪಿಟಲ್: ಹಣಕಾಸು ಸೇವೆ

ಪ್ರಜಾವಾಣಿ ವಾರ್ತೆ



ಉದ್ಯಮಿ ರೇಷ್ಮಾ ಕೋದಂಡರಾಮ, ಕೋದಂಡರಾಮ ಹಾಗೂ ಎ. ಶ್ರೀಧರ್ ಮೂರ್ತಿ ಅವರು ರಾಮಯ್ಯ ಕ್ಯಾಪಿಟಲ್‌ನ ಹಣಕಾಸು ವ್ಯವಹಾರಗಳ ಫಲಕವನ್ನು ಪ್ರದರ್ಶಿಸಿದರು.

ಬೆಂಗಳೂರು: ಎಂ.ಎಸ್. ರಾಮಯ್ಯ ಸಮೂಹದ ರಾಮಯ್ಯ ಕ್ಯಾಪಿಟಲ್ ಪ್ರೈ.ಲಿ. ಹಣಕಾಸು ಸೇವೆಯನ್ನು ಪ್ರಾರಂಭಿಸಿದೆ.

ಗುರುವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂತನ ಕಚೇರಿಯನ್ನು ಉದ್ಘಾಟಿಸಿದ ರಾಮಯ್ಯ ಕ್ಯಾಪಿಟಲ್ ಪ್ರೈ.ಲಿ. ನಿರ್ದೇಶಕ ಕೋದಂಡರಾಮ, ' ಎಂ.ಎಸ್. ರಾಮಯ್ಯ ಸಮೂಹವು ಶಿಕ್ಷಣ ಕ್ಷೇತ್ರಕ್ಕೆ ಒತ್ತು ನೀಡುವ ಜತೆಗೆ ಹೋಟೆಲ್, ಆಗ್ರೋ ಕೆಮಿಕಲ್ಸ್, ರಿಯಲ್ ಎಸ್ಟೇಟ್, ಕೃಷಿ ಸೇರಿದಂತೆ ವಿವಿಧ ಕ್ಷೇತ್ರಗಳ ಕಡೆಗೆ ಗಮನ ಹರಿಸಿದೆ. ಈಗ ಹಣಕಾಸು ಕ್ಷೇತ್ರದಲ್ಲಿಯೂ ಸೇವೆ ನೀಡಲು ಮುಂದಾಗಿದೆ. ಎನ್‌ಸಿಬಿಎಫ್ ನಿಯಮಗಳಡಿ ಆಧುನಿಕ ಪದ್ಧತಿಯನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಲಿರುವ ರಾಮಯ್ಯ ಕ್ಯಾಪಿಟಲ್, ಮಾಸಿಕ ಸಂಬಳ ಪಡೆಯುವ ಅರ್ಹ ವ್ಯಕ್ತಿಗಳಿಗೆ ಸಾಲ ನೀಡಲಿದೆ. ಅರ್ಜಿ ಸಲ್ಲಿಸಿದ 48 ಗಂಟೆಗಳಲ್ಲಿ ಎಲ್ಲ ಪ್ರಕ್ರಿಯೆಗಳನ್ನು ಮುಗಿಸಿ, ಸ್ಪರ್ಧಾತ್ಮಕ ಬಡ್ಡಿದರಲ್ಲಿ ಸಾಲ ಮಂಜೂರು ಮಾಡುವುದು ನಮ್ಮ ಗುರಿಯಾಗಿದೆ' ಎಂದು ತಿಳಿಸಿದರು.

ರಾಮಯ್ಯ ಕ್ಯಾಪಿಟಲ್ ಉಪಾಧ್ಯಕ್ಷ ಎ. ಶ್ರೀಧರ ಮೂರ್ತಿ, 'ನಾವು ಅತ್ಯಂತ ಪಾರದರ್ಶಕವಾಗಿ ಸೇವೆ ಒದಗಿಸಲಿದ್ದೇವೆ. ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು ಅಲೆದಾಟ ನಡೆಸಬೇಕಿಲ್ಲ. ಡಿಜಿಟಲ್ ವಿಧಾನದಲ್ಲಿ ಕಾರ್ಯನಿರ್ವಹಿಸುವುದರಿಂದ ಹೆಚ್ಚುವರಿ ಶುಲ್ಕಗಳು ಕೂಡ ಇರುವುದಿಲ್ಲ' ಎಂದು ಹೇಳಿದರು.

ಕಾರಾಗೃಹ ವೈದ್ಯಕೀಯ ಸಿಬ್ಬಂದಿ ಭರ್ತಿಗೆ ನಿರ್ದೇಶನ

ಬೆಂಗಳೂರು: 'ರಾಜ್ಯದ ಕಾರಾಗೃಹಗಳಲ್ಲಿ ಖಾಲಿ ಇರುವ ವೈದ್ಯಕೀಯ ಸಿಬ್ಬಂದಿ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ವೈದ್ಯಕೀಯ ಅಧಿಕಾರಿಗಳು, ಮನೋವೈದ್ಯರು, ಫಾರ್ಮಾಸಿಸ್ಟ್ ಸೇರಿ 114 ಹುದ್ದೆಗಳಿದ್ದು, ಅದರಲ್ಲಿ 86 ಹುದ್ದೆಗಳು ಖಾಲಿ ಇವೆ ಎಂಬುದನ್ನು ಗಮನಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿತು.

ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿಯನ್ನು ಕಾರಾಗೃಹಗಳಿಗೆ ವರ್ಗಾಯಿಸಲು ಸಾಧ್ಯವೇ ಎಂಬುದನ್ನು ಪರಿಗಣಿಸುವಂತೆ ನಿರ್ದೇಶನ ನೀಡಿತು. 'ಕೈದಿಗಳ ನೈರ್ಮಲ್ಯ, ಕಾರಾಗೃಹಗಳ ದಟ್ಟಣೆ, ಕೈದಿಗಳಿಗೆ ಒದಗಿಸುವ ಆಹಾರ, ಕುಟುಂಬ ಸದಸ್ಯರು ಭೇಟಿಯಾಗಲು ಇರುವ ಸಮಸ್ಯೆ ಬಗೆಹರಿಸಬೇಕು' ಎಂದೂ ಪೀಠ ತಿಳಿಸಿತು.

'ಹೆಚ್ಚುವರಿ ಕಾರಾಗೃಹಗಳ ನಿರ್ಮಾಣದ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು. ಸದ್ಯ ಇರುವ ಜೈಲುಗಳಲ್ಲಿ ಸುಪ್ರೀಂ ಕೋರ್ಟ್ ಆದೇಶಗಳನ್ನು ಪಾಲಿಸಲಾಗುತ್ತಿದೆಯೇ ಎಂಬುದರ ಕುರಿತು ಅನುಸರಣಾ ವರದಿ ಸಲ್ಲಿಸಬೇಕಾಗುತ್ತದೆ' ಎಂದು ತಿಳಿಸಿತು. ಮೇ 29ಕ್ಕೆ ವಿಚಾರಣೆ ಮುಂದೂಡಿತು.



ಜಕ್ಕೂರು ವೈಮಾನಿಕ ಶಾಲೆಯ ಆವರಣ

ಜಕ್ಕೂರು ವೈಮಾನಿಕ ಶಾಲೆಗೆ ಶೀಘ್ರ 'ಹೈಟೆಕ್' ಸ್ಪರ್ಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಕ್ಕೂರು ವೈಮಾನಿಕ ತರಬೇತಿ ಶಾಲೆಯನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿ 'ಹೈಟೆಕ್' ಸ್ಪರ್ಶ ನೀಡಲು ತೀರ್ಮಾನಿಸಲಾಗಿದೆ ಎಂದು ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣಗೌಡ ಹೇಳಿದರು.

ವಿಧಾನಸೌಧದಲ್ಲಿ ಗುರುವಾರ ನಡೆದ ವೈಮಾನಿಕ ತರಬೇತಿ ಶಾಲೆಯ ಕುರಿತ ಸಭೆಯಲ್ಲಿ ಮಾತನಾಡಿದ ಅವರು, 'ಸಾಕಷ್ಟು ಸ್ಥಳಾವಕಾಶ, ಮೂಲಸೌಕರ್ಯಗಳು ಇದ್ದರೂ ಜಕ್ಕೂರು ವೈಮಾನಿಕ ತರಬೇತಿ ಶಾಲೆ ಅಭಿವೃದ್ಧಿ ಕಂಡಿಲ್ಲ' ಎಂದರು.

ರಾಜ್ಯದ ನೂರಾರು ವಿದ್ಯಾರ್ಥಿಗಳಿಗೆ ವೈಮಾನಿಕ ತರಬೇತಿಗೆ ಅವಕಾಶವಾಗಬೇಕಾಗಿರುವ ಶಾಲೆ ಇಂದು ಸಂಕಷ್ಟದಲ್ಲಿದೆ. ಆದ್ದರಿಂದ ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಯಿತು. ಇದಕ್ಕಾಗಿ ಸ್ಕೈಬರ್ಡ್ ಮತ್ತು ವಿಂಗ್ಸ್ ಎಂಬ ಎರಡು ಕಂಪನಿಗಳು ವೈಮಾನಿಕ ಶಾಲೆ ಅಭಿವೃದ್ಧಿಪಡಿಸುವ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದ್ದು, ವಾರದೊಳಗೆ ವರದಿ ನೀಡಬೇಕು ಎಂದು ಅವರು ಸೂಚಿಸಿದರು.

ಪ್ರಾತ್ಯಕ್ಷಿಕೆ ನೀಡಿದ ಕಂಪನಿಗಳು ಪ್ರತಿವರ್ಷ ಕನಿಷ್ಠ 100 ವಿದ್ಯಾರ್ಥಿಗಳಿಗೆ ವೈಮಾನಿಕ ತರಬೇತಿ ನೀಡಲಿವೆ. ಅಲ್ಲದೆ, ವೈಮಾನಿಕ ತರಬೇತಿ ಶಾಲೆಯ ಪ್ರದೇಶದಲ್ಲಿ ಪ್ಯಾರಾ ಗ್ಲೈಡಿಂಗ್ ಸೇರಿ ಇನ್ನಿತರ ಕ್ರೀಡಾ ಚಟುವಟಿಕೆಗಳನ್ನು ನಡೆಸಲು ಉದ್ದೇಶಿಸಲಾಗಿದೆ. ಈ ಬಗ್ಗೆ ಕ್ರಿಯಾ ಯೋಜನೆ ರೂಪಿಸಿ, ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆಯಲಾಗುವುದು ಎಂದು ನಾರಾಯಣಗೌಡ ಹೇಳಿದರು.

'ಶಾಸನಸಭೆಯ ಸಂಪ್ರದಾಯ ಉಲ್ಲಂಘನೆ –ಸ್ಪೀಕರ್‌ಗೆ ಪತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಭಾಧ್ಯಕ್ಷರೊಬ್ಬರು ತೆಗೆದುಕೊಂಡ ತೀರ್ಮಾನಗಳನ್ನು ಮತ್ತೊಬ್ಬ ಸಭಾಧ್ಯಕ್ಷರು ಪ್ರಶ್ನೆ ಮಾಡಿದ ಉದಾಹರಣೆ ಯಾವುದೇ ರಾಜ್ಯದ ವಿಧಾನಸಭೆಯಲ್ಲೂ ನಡೆದಿಲ್ಲ. ಹಿಂದೆ ಸಭಾಧ್ಯಕ್ಷರಾಗಿದ್ದ ಕೆ.ಆರ್.ರಮೇಶ್ ಕುಮಾರ್ ಅವರು ಕೆ.ಬಿ.ಕೋಳಿವಾಡ ಅವರ ತೀರ್ಮಾನ ಪ್ರಶ್ನಿಸಿ ಶಾಸನ ಸಭೆಯ ಸಂಪ್ರದಾಯ ಉಲ್ಲಂಘಿಸಿದ್ದಾರೆ ಎಂದು ವಿಧಾನಸಭೆಯ ಕಾರ್ಯದರ್ಶಿಯಾಗಿದ್ದು, ಅಮಾನತುಗೊಂಡಿರುವ ಎಸ್.ಮೂರ್ತಿ ಹೇಳಿದ್ದಾರೆ.

ಈ ಸಂಬಂಧ ಅವರು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ. ಮೂರ್ತಿ ವಿಧಾನಸಭೆ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿ ಅವರನ್ನು ಅಮಾನತ್ತಿನಲ್ಲಿಡಲಾಗಿದೆ.

ಕೋಳಿವಾಡ ಅವರ ಅವಧಿಯಲ್ಲಿ ಮಾಡಲಾದ ಖರ್ಚಿನ ಕುರಿತು ಕೆ.ಆರ್. ರಮೇಶ್ ಕುಮಾರ್ ಅವರು ತನಿಖೆಗೆ ಒಳಪಡಿಸುವ ಮೂಲಕ ಶಾಸಕಾಂಗದ ಆಡಳಿತದಲ್ಲಿ ಕಾರ್ಯಾಂಗವನ್ನು ಉಪಯೋಗಿಸಿಕೊಂಡು ಹಸ್ತಕ್ಷೇಪ ಮಾಡಿದ್ದಾರೆ. ಇದು ಸಂವಿಧಾನದ ಆಶಯಗಳಿಗೆ ವಿರುದ್ಧವಾದುದು ಎಂದು ಹೇಳಿದ್ದಾರೆ.

'ನನ್ನನ್ನು ಕಾರ್ಯದರ್ಶಿ ಹುದ್ದೆಯಿಂದ ಅಮಾನತು ಮಾಡಿ 2 ವರ್ಷ 4 ತಿಂಗಳು ಕಳೆದಿದೆ. ರಾಜ್ಯ ಸೇವಾ ನಿಯಮಗಳಲ್ಲಿ ಮತ್ತು ಸರ್ಕಾರಿ ಆದೇಶಗಳಲ್ಲಿ ಯಾವುದೇ ಅಧಿಕಾರಿ/ನೌಕರನನ್ನು ಅಮಾನತು ಅವಧಿ 6 ತಿಂಗಳು ಎಂದು ನಿಗದಿ ಮಾಡಿದೆ. ಅದರ ಉಲ್ಲಂಘನೆಯೂ ಆಗಿದೆ. ರಮೇಶ್ ಕುಮಾರ್ ಅವಧಿಯಲ್ಲಿ ನನ್ನ ವಿರುದ್ಧ ನಡೆದಿರುವ ವಿಚಾರಣೆಯನ್ನು ಮರು ಪರಿಶೀಲನೆಗೆ ಒಳಪಡಿಸಬೇಕು' ಎಂದು ಮೂರ್ತಿ ಒತ್ತಾಯಿಸಿದ್ದಾರೆ.

ಮೂರ್ತಿಯವರ ಆರೋಪಗಳ ಬಗ್ಗೆ ಪ್ರತಿಕ್ರಿಯೆಗೆ ರಮೇಶ್ ಕುಮಾರ್ ಸಿಗಲಿಲ್ಲ.

ಕಮಿಷನರ್ ಜತೆ ಮಾತುಕತೆ ನೇರಪ್ರಸಾರ ನಾಳೆ

ಬೆಂಗಳೂರು: 'ಬ್ಯಾಟ್ ಹಿಡಿದ ಇಂದಿರಾನಗರ ಗೂಂಡಾ' ವಿರುದ್ಧ ದೂರು ನೀಡಲು ನೀವೆಲ್ಲ ಸಿದ್ಧರಾಗಿದ್ದೀರಾ? ಹೀಗೆಂದು ಕೇಳುತ್ತಿರುವುದು ಬೆಂಗಳೂರು ನಗರ ಪೊಲೀಸರು.

ಕಮಿಷನರ್ ಕಮಲ್ ಪಂತ್ ಅವರು ಏಪ್ರಿಲ್ 17ರಂದು ಬೆಳಿಗ್ಗೆ 11ರಿಂದ 12 ಗಂಟೆವರೆಗೆ ಸಾಮಾಜಿಕ ಜಾಲತಾಣ ಫೇಸ್‌ಬುಕ್ 'ಬೆಂಗಳೂರು ಸಿಟಿ ಪೊಲೀಸ್' ಖಾತೆಯಲ್ಲಿ ನೇರಪ್ರಸಾರದಲ್ಲಿ ಮಾತನಾಡಲಿದ್ದಾರೆ. ಕಾರ್ಯಕ್ರಮದ ಪ್ರಚಾರಕ್ಕಾಗಿ ಪೊಲೀಸರು, ಇತ್ತೀಚೆಗೆ ಹೆಚ್ಚು ಸುದ್ದಿಯಾದ ರಾಹುಲ್ ದ್ರಾವಿಡ್ ಕಾಣಿಸಿಕೊಂಡಿದ್ದ ಜಾಹೀರಾತು ಬಳಸಿಕೊಳ್ಳುತ್ತಿದ್ದಾರೆ. ಬ್ಯಾಟ್ ಹಿಡಿದಿರುವ ರಾಹುಲ್ ದ್ರಾವಿಡ್ ಫೋಟೊ ಸಮೇತ ಟ್ವಿಟರ್ ಹಾಗೂ ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿರುವ ಪೊಲೀಸರು, 'ಸುತ್ತಮುತ್ತಲು ನಡೆಯುವ ಕೃತ್ಯಗಳ ಬಗ್ಗೆ ಹಾಗೂ ಪೊಲೀಸ್ ವ್ಯವಸ್ಥೆ ಬಗ್ಗೆ ಏನಾದರೂ ಸಮಸ್ಯೆಗಳು ಇದ್ದರೆ ಕಮಿಷನರ್ ಜೊತೆ ಮಾತನಾಡಬಹುದು. ನಿಮ್ಮ ಪ್ರಶ್ನೆಗಳಿಗೆ ಕಮಿಷನರ್ ಉತ್ತರಿಸಲಿದ್ದಾರೆ' ಎಂದು ಕೋರಿದ್ದಾರೆ.

ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸಿದ್ದ ಯುವಕ ● ರಾಜಸ್ಥಾನದಲ್ಲಿ ಸಿಕ್ಕಿಬಿದ್ದ ವಂಚಕರು

‘ಬೆತ್ತಲೆ ಬ್ಲ್ಯಾಕ್‌ಮೇಲ್’ಗೆ ಹೆದರಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರ ಠಾಣೆ ವ್ಯಾಪ್ತಿಯಲ್ಲಿ ಅಭಿಗೌಡ ಅಲಿಯಾಸ್ ಅವಿನಾಶ್ (26) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರಕರಣದ ತನಿಖೆ ಕೈಗೊಂಡಿದ್ದ ಪೊಲೀಸರು, ‘ಬೆತ್ತಲೆ ಬ್ಲ್ಯಾಕ್‌ಮೇಲ್’ ಮಾಡುತ್ತಿದ್ದ ವಂಚಕರ ಜಾಲವನ್ನು ಭೇದಿಸಿದ್ದಾರೆ.

‘ಫೇಸ್‌ಬುಕ್‌ನಲ್ಲಿ ಯುವತಿ ಹೆಸರಿನಲ್ಲಿ ನಕಲಿ ಖಾತೆ ತೆರೆದು ಸಾರ್ವಜನಿಕರನ್ನು ಪರಿಚಯಿಸಿಕೊಂಡು ವಂಚಿಸುತ್ತಿದ್ದ ರಾಜಸ್ಥಾನ ಭರತಪುರ್ ಜಿಲ್ಲೆಯ ರಸೂಲ್‌ಪುರ ಗ್ರಾಮದ ರಾಬಿನ್ (22) ಹಾಗೂ ಜಾವೇದ್ (25) ಎಂಬುವರನ್ನು ಬಂಧಿಸಲಾಗಿದೆ. ಇಬ್ಬರನ್ನು ಕಸ್ಟಡಿಗೆ ಪಡೆದು ತನಿಖೆ ಮುಂದುವರಿಸಲಾಗಿದೆ. ಜಾಲದ ರೂವಾರಿ ತಲೆಮರೆಸಿಕೊಂಡಿದ್ದಾರೆ’ ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ದೇವರಾಜ್ ಹೇಳಿದರು.

‘ಎಂಬಿಎ ಪದವೀಧರರಾಗಿದ್ದ ಅಭಿಗೌಡ, ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದರು. ನೇಹಾ ಶರ್ಮಾ ಎಂಬ ಯುವತಿ ಹೆಸರಿನಲ್ಲಿ ನಕಲಿ ಖಾತೆ ತೆರೆದಿದ್ದ ಆರೋಪಿಗಳು, ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿ ಅಭಿಗೌಡ ಸ್ನೇಹ ಬೆಳೆಸಿದ್ದರು. ಯುವತಿ ಹೆಸರಿನಲ್ಲೇ ಸಂದೇಶ ಹಾಗೂ ಫೋಟೊ ಕಳುಹಿಸಿ ಸಲುಗೆಯಿಂದ ಮಾತನಾಡುತ್ತಿದ್ದರು.’

‘ರಾತ್ರಿ ಹೊತ್ತಿನಲ್ಲಿ ವಿಡಿಯೊ ಕರೆ ಮಾಡಿದ್ದ ಆರೋಪಿಗಳು, ಅಪರಿಚಿತ ಯುವತಿಯ ನಗ್ನ ವಿಡಿಯೊ ತೋರಿಸಿ ಪ್ರಚೋದಿಸಿ ಅಭಿಗೌಡ ಬಟ್ಟೆ ಬಿಚ್ಚಿಸಿ ಬೆತ್ತಲೆಗೊಳಿಸಿದ್ದರು. ಆ ದೃಶ್ಯವನ್ನು ಚಿತ್ರೀಕರಿಸಿಟ್ಟುಕೊಂಡಿದ್ದರು. ಮರುದಿನ ದಿಂದಲೇ ಅಭಿಗೌಡ ಅವರಿಗೆ ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದರು. ಹಣ ಕೊಡದಿದ್ದರೆ ಫೇಸ್‌ಬುಕ್, ಯೂಟ್ಯೂಬ್‌ನಲ್ಲಿ ವಿಡಿಯೊ ಅಪ್‌ಲೋಡ್ ಮಾಡುವುದಾಗಿ ಹೇಳಿದ್ದರು’ ಎಂದೂ ದೇವರಾಜ್ ಹೇಳಿದರು.


ರಾಬಿನ್


ಜಾವೇದ್

‘ಬ್ಲ್ಯಾಕ್‌ಮೇಲ್‌ಗೆ ಹೆದರಿದ್ದ ಯುವಕ, ಅಕ್ಕ ಹಾಗೂ ಇತರರಿಂದ ₹ 30,000 ಪಡೆದು ಆರೋಪಿಗಳಿಗೆ ನೀಡಿದ್ದರು. ಅಷ್ಟಾದರೂ ಆರೋಪಿಗಳು ಮತ್ತಷ್ಟು ಹಣ ಕೇಳಿದ್ದರು. ಅದರಿಂದ ಬೇಸತ್ತ ಅಭಿಗೌಡ, ಮಾರ್ಚ್ 23ರಂದು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಬಗ್ಗೆ ಅವರ ಅಕ್ಕ ದೂರು ನೀಡಿದ್ದರು’ ಎಂದೂ ತಿಳಿಸಿದರು.

ಅಂತ್ಯಕ್ರಿಯೆ ಬಳಿಕವೂ ಹಣಕ್ಕೆ ಬೇಡಿಕೆ: ‘ಅಭಿಗೌಡ ಅಂತ್ಯಕ್ರಿಯೆ ಮುಗಿಸಿದ್ದ ನಂತರ ಅಕ್ಕನಿಗೂ ಆರೋಪಿಗಳು ಸಂದೇಶ ಕಳುಹಿಸಿದ್ದರು. ‘ನೀವು ಅಭಿಗೌಡ ಸಂಬಂಧಿಯಲ್ಲವೇ? ಅಭಿಗೌಡ ಎಲ್ಲಿದ್ದಾರೆ? ಅವರ ಮೊಬೈಲ್ ಸ್ವಿಚ್ ಆಫ್ ಆಗಿದೆ ಏಕೆ?’ ಎಂದು ಕೇಳಿದ್ದರು’ ಎಂದು ಪೊಲೀಸರು ಹೇಳಿದರು.

‘ಬಾಕಿ ಹಣ ಕೊಟ್ಟರೆ ವಿಡಿಯೊ ಅಪ್‌ಲೋಡ್ ಮಾಡುವುದಿಲ್ಲ. ಕೊಡದಿದ್ದರೆ, ಅಪ್‌ಲೋಡ್ ಮಾಡಿ ನಿಮ್ಮ ಸ್ನೇಹಿತರು ಹಾಗೂ ಸಂಬಂಧಿಕರಿಗೆ ಕಳುಹಿಸುತ್ತೇನೆ’ ಎಂದು ಪುನಃ ಬ್ಲ್ಯಾಕ್‌ಮೇಲ್ ಮಾಡಿದ್ದರು. ಆರೋಪಿಗಳ ವರ್ತನೆಯಿಂದ ಅನುಮಾನಗೊಂಡ ಅಕ್ಕ, ಅಭಿಗೌಡ ಬ್ಯಾಂಕ್ ಖಾತೆ ವಹಿವಾಟಿನ ವಿವರ ಪಡೆದು ಪರಿಶೀಲಿಸಿದ್ದರು. ಆರೋಪಿಗಳಿಗೆ ಹಣ ಜಮೆ ಆಗಿದ್ದು ಗೊತ್ತಾಗಿದೆ’ ಎಂದು ಹೇಳಿದರು.

18 ಮಂದಿಗೆ ವಂಚನೆ: ‘ವೈಟ್‌ಫೀಲ್ಡ್ ವಿಭಾಗ ವ್ಯಾಪ್ತಿಯಲ್ಲಿ ವಾಸವಿರುವ 18 ಮಂದಿಯನ್ನು ಆರೋಪಿಗಳು ವಂಚಿಸಿರುವುದು ಗೊತ್ತಾಗಿದೆ. ಈ ಬಗ್ಗೆ ಆರೋಪಿಗಳನ್ನು ಪ್ರಶ್ನಿಸಲಾಗುತ್ತಿದೆ’ ಎಂದು ದೇವರಾಜ್ ಹೇಳಿದರು.

ರಸೂಲ್‌ಪುರ ಗ್ರಾಮದಲ್ಲಿ ‘ಮಿನಿ ಕಚೇರಿ’

‘ಆನ್‌ಲೈನ್ ಮೂಲಕ ಬ್ಯಾಂಕೊಂದರ ಸರ್ಜಾಪುರ ಖಾತೆಯಲ್ಲಿ ಖಾತೆ ತೆರೆದಿದ್ದ ಆರೋಪಿಗಳು, ಅದೇ ಖಾತೆಗೆ ಅಭಿಗೌಡ ಅವರಿಂದ ಹಣ ಹಾಕಿಸಿಕೊಂಡಿದ್ದರು. ಅದೇ ಮಾಹಿತಿ ಆಧರಿಸಿ ಕೆ.ಆರ್.ಪುರ ಠಾಣೆ ಪೊಲೀಸರ ತಂಡ, ರಾಜಸ್ಥಾನಕ್ಕೆ ಹೋಗಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದಿದೆ. ಭರತ್‌ಪುರ ಪೊಲೀಸರೂ ಆರೋಪಿಗಳನ್ನು ಹಿಡಿಯಲು ಸಹಕರಿಸಿದರು’ ಎಂದು ಡಿಸಿಪಿ ದೇವರಾಜ್ ಹೇಳಿದರು.

‘ರಸೂಲ್‌ಪುರ ಗ್ರಾಮದಲ್ಲಿ ಮಿನಿ ಕಚೇರಿ ತೆರೆದಿದ್ದ ಆರೋಪಿಗಳು, ಹೆಚ್ಚು ಓದಿರದ ಯುವಕರನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದರು. ಅವರಿಗೆ ತರಬೇತಿಯನ್ನೂ ನೀಡಿದ್ದರು. ಅವರಿಂದಲೇ ಫೇಸ್‌ಬುಕ್‌ನಲ್ಲಿ ನಕಲಿ ಖಾತೆ ತೆರೆಸಿ ಸಾರ್ವಜನಿಕರನ್ನು ಜಾಲಕ್ಕೆ ಬೀಳಿಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು. ಒನ್ ಟೈಂ ಪಾಸ್‌ವರ್ಡ್ (ಒಟಿಪಿ), ಒಎಲ್‌ಎಕ್ಸ್ ಜಾಲತಾಣ, ಬ್ಯಾಂಕಿಂಗ್ ಸೇರಿದಂತೆ ಹಲವು ಬಗೆಯ ವಂಚನೆಗಳನ್ನು ಜಾಲ ಎಸಗಿದೆ' ಎಂದರು.

ಜಾಲಕ್ಕೆ ಸಿಲುಕದಿರಲು ಹೀಗೆ ಮಾಡಿ

- ಅಪರಿಚಿತರಿಂದ ಬರುವ ರಿಕ್ವೆಸ್ಟ್‌ಗಳನ್ನು ಸ್ವೀಕರಿಸುವ ಮುನ್ನ ಎಚ್ಚರಿಕೆ ಇರಲಿ
- ಸಾಮಾಜಿಕ ಜಾಲತಾಣದಲ್ಲಿರುವ ತಮ್ಮ ಖಾತೆಗಳನ್ನು, ಪ್ರೊಫೈಲ್ ಪ್ರೈವೇಸಿ ಆಯ್ಕೆ ಬಳಸಿ ಲಾಕ್ ಮಾಡಿ
- ಅಪರಿಚಿತರಿಂದ ಬರುವ ವಿಡಿಯೊ ಕರೆ ಬಗ್ಗೆ ಜಾಗೃತಿ ಇರಲಿ
- ಅಪರಿಚಿತರು ಯಾರಾದರೂ ಅನುಮಾನಾಸ್ಪದ ರೀತಿಯಲ್ಲಿ ಸಂದೇಶ ಕಳುಹಿಸಿದರೆ ಪೊಲೀಸರಿಗೆ ಮಾಹಿತಿ ನೀಡಿ

ಸುದ್ದಿ 2 ನಿಮಿಷ

ರಾಜ್ಯಪಾಲರಿಗೆ ಪತ್ರ; ವಿರೋಧ ಪಕ್ಷಗಳಿಂದ ಅಪಾರ್ಥ– ಈಶ್ವರಪ್ಪ

ಶಿವಮೊಗ್ಗ: ‘ರಾಜ್ಯಪಾಲರಿಗೆ ಬರೆದ ಪತ್ರದ ಬಗ್ಗೆ ವಿರೋಧಪಕ್ಷಗಳು ಅಪಾರ್ಥ ಮಾಡಿಕೊಂಡು ನನ್ನ ಮತ್ತು ಮುಖ್ಯಮಂತ್ರಿ ನಡುವೆ ಭಿನ್ನಾಭಿಪ್ರಾಯವಿದೆ ಎಂಬಂತೆ ಬಿಂಬಿಸುತ್ತಿವೆ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಗುರುವಾರ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಿಯಮದ ಬಗ್ಗೆ ಮಾಹಿತಿ ನೀಡುವಂತೆ ರಾಜ್ಯಪಾಲರಿಗೆ ಮನವಿ ಮಾಡಿದ್ದೇನೆ. ಇದರ ಹಿಂದೆ ಬೇರೆ ಉದ್ದೇಶವಿಲ್ಲ. ನಮ್ಮ ಪಕ್ಷದ ವಿರುದ್ಧವೇ ನಾನೇಕೆ ದೂರು ನೀಡಲಿ’ ಎಂದು ಪ್ರಶ್ನಿಸಿದರು.

ಏಕವಚನ ಬಳಕೆ ಶೋಭೆ ತರಲ್ಲ: ‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನು ಏಕವಚನದಲ್ಲಿ ಕರೆಯುವ ಸಿದ್ದರಾಮಯ್ಯ ಅವರ ವರ್ತನೆ ಅವರಿಗೆ ಶೋಭೆ ತರುವುದಿಲ್ಲ. ‘ಲೇ ಸಿದ್ದರಾಮಯ್ಯ’ ಎಂದು ಕರೆಯಲು ನನಗೆ ಬರುವುದಿಲ್ಲವೇ?’ ಎಂದು ಹೇಳಿದರು.



‘ಕಟೀಲ್‌ರನ್ನು ವಿದೂಷಕ ಎಂದು ಸಿದ್ಧರಾಮಯ್ಯ ಕರೆಯುತ್ತಾರೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಏಕವಚನದಲ್ಲಿ ಕರೆಯುತ್ತಾರೆ. ಹೀಗೆ ಕರೆಯುವುದು ನಿಮ್ಮ ವ್ಯಕ್ತಿತ್ವಕ್ಕೆ ಶೋಭೆ ತರುವುದಿಲ್ಲ ಎಂದು ಈ ಹಿಂದೆಯೇ ಸಿದ್ದರಾಮಯ್ಯಗೆ ಹೇಳಿದ್ದೆ. ಈಗಲೂ ಅದನ್ನೇ ಹೇಳುತ್ತೇನೆ’ ಎಂದರು.

ವೀಲಿಂಗ್: ನಾಲ್ವರು ಪೊಲೀಸರ ವಶಕ್ಕೆ

ಕೆ.ಆರ್.ಪುರ: ವೀಲಿಂಗ್ ಮಾಡುತ್ತಿದ್ದ ದ್ವಿಚಕ್ರ ವಾಹನಗಳನ್ನು ಬಿಟ್ಟು ಪರಾರಿಯಾಗಿದ್ದ ನಾಲ್ವರು ಆರೋಪಿಗಳಾದ ಯಾಸೀನ್(18), ಮುಬಾರಕ್ (20), ಉಮರ್(18) ಹಾಗೂ ಧನುಷ್ ಎಂಬುವರನ್ನು ಕೆ.ಆರ್.ಪುರ ಸಂಚಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬುಧವಾರ ಬೆಳಿಗ್ಗೆ 7ರ ಸಮಯದಲ್ಲಿ ಹೊಸಕೋಟೆ ಕಡೆಯಿಂದ ಎರಡು ದ್ವಿಚಕ್ರ ವಾಹನಗಳಲ್ಲಿ ವಾಹನ ಸವಾರರು ವೀಲಿಂಗ್ ಮಾಡಿಕೊಂಡು ಭಟ್ಟರಹಳ್ಳಿ ಕಡೆಗೆ ಬಂದಿದ್ದಾರೆ. ಪೊಲೀಸರು ವಾಹನಗಳನ್ನು ವಶಕ್ಕೆ ಪಡೆಯಲು ಮುಂದಾದಾಗ ಸವಾರರು ತಮ್ಮ ಎರಡು ದ್ವಿಚಕ್ರ ವಾಹನಗಳನ್ನು ಸ್ಥಳದಲ್ಲಿಯೇ ಬಿಟ್ಟು ಪರಾರಿಯಾಗಿದ್ದರು. ಈ ವಾಹನಗಳನ್ನು ಸಂಚಾರ ಪೊಲೀಸರು ಕೆ.ಆರ್.ಪುರ ಸಂಚಾರ ಠಾಣೆಗೆ ಒಪ್ಪಿಸಿದರು. ಗುರುವಾರ ವಾಹನ ಮಾಲೀಕರನ್ನು ಪತ್ತೆ ಹಚ್ಚುವಲ್ಲಿ ಪೊಲೀಸರು ಯಶಸ್ವಿಯಾದರು.

ಬಿಎಂಟಿಸಿ: 213 ನೌಕರರ ಅಮಾನತು

ಬೆಂಗಳೂರು: ಸಾರಿಗೆ ನೌಕರರ ಹೋರಾಟ ಮುಂದುವರಿದಿರುವ ನಡುವೆ 213 ನೌಕರರನ್ನು ಬಿಎಂಟಿಸಿ ಗುರುವಾರ ಅಮಾನತು ಮಾಡಿದೆ. ಸೋಮವಾರ 274 ಸಿಬ್ಬಂದಿಯನ್ನು ಅಮಾನತುಗೊಳಿಸಿದ್ದ ಬಿಎಂಟಿಸಿ, ಬುಧವಾರ 224 ನೌಕರರನ್ನು ಅಮಾನತುಗೊಳಿಸಲಾಗಿತ್ತು. ಅಲ್ಲದೇ, ಗುರುವಾರ 14 ಜನರಿಗೆ ಕಡ್ಡಾಯ ನಿವೃತ್ತಿ ನೀಡಿದೆ.

ಅಕ್ಕ– ತಂಗಿ ಅನುಮಾನಾಸ್ಪದ ಸಾವು; ಮೃತದೇಹ ಪತ್ತೆ

ಬೆಂಗಳೂರು: ಮಾಗಡಿ ರಸ್ತೆ ಬಳಿಯ ಗೋಪಾಲಪುರ 3ನೇ ಅಡ್ಡರಸ್ತೆ ಮನೆಯೊಂದರಲ್ಲಿ ಅಕ್ಕ– ತಂಗಿ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಅವರಿಬ್ಬರ ಮೃತದೇಹಗಳು ಗುರುವಾರ ಪತ್ತೆಯಾಗಿವೆ.

‘ಸ್ಥಳೀಯ ನಿವಾಸಿ ಜಮುನಾ (60) ಹಾಗೂ ರಾಣಿ (58) ಮೃತರು. ಅವಿವಾಹಿತೆಯರಾಗಿದ್ದ ಅವರಿಬ್ಬರು, ಒಟ್ಟಿಗೆ ವಾಸವಿದ್ದರು. ಅವರಿಬ್ಬರ ತಂಗಿ ಪ್ರೇಮಾ ಚಾಮರಾಜಪೇಟೆಯಲ್ಲಿ ನೆಲೆಸಿದ್ದಾರೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

‘ಅಕ್ಕಂದಿರಿಗೆ ಸೋಮವಾರ ಕರೆ ಮಾಡಿದ್ದ ಪ್ರೇಮಾ, ಕೆಲ ಸಮಯ ಮಾತನಾಡಿದ್ದರು. ಬುಧವಾರ ಕರೆ ಮಾಡಿದರೂ ಯಾವುದೇ ಸ್ಪಂದನೆ ವ್ಯಕ್ತವಾಗಿರಲಿಲ್ಲ. ಅನುಮಾನಗೊಂಡಿದ್ದ ಪ್ರೇಮಾ, ತಮ್ಮ ಪತಿ ಜೊತೆ ಗುರುವಾರ ಮನೆಗೆ ಬಂದಿದ್ದರು. ಬಾಗಿಲು ಒಳಗಿನಿಂದ ಲಾಕ್ ಮಾಡಲಾಗಿತ್ತು. ಸ್ಥಳೀಯರ ನೆರವಿನಿಂದ ಬಾಗಿಲ ಲಾಕ್ ಮುರಿದು ನೋಡಿದಾಗ ಮೃತದೇಹಗಳು ಕಂಡಿವೆ’ ಎಂದೂ ತಿಳಿಸಿದರು.

ಮೃತದೇಹ ಪಕ್ಕವೇ ಊಟದ ಪಾತ್ರೆಗಳು: ‘ಮೃತದೇಹವಿದ್ದ ಸ್ಥಳದಲ್ಲೇ ಊಟದ ಪಾತ್ರೆಗಳು ಬಿದ್ದಿವೆ. ಇಬ್ಬರೂ ಊಟ ಮಾಡಿದ ನಂತರ ಮೃತಪಟ್ಟಿರುವ ಅನುಮಾನವಿದೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಲಾಗಿದೆ’ ಎಂದೂ ಸಂಜೀವ್ ಪಾಟೀಲ ಹೇಳಿದರು.

‘ಮನೆಯಲ್ಲಿದ್ದ ನಗದು, ಚಿನ್ನಾಭರಣ ಹಾಗೂ ಇತರೆ ವಸ್ತುಗಳು ಇದ್ದಲ್ಲೇ ಇವೆ. ಇವರಿಬ್ಬರ ಸಾವಿನಲ್ಲಿ ಸಾಕಷ್ಟು ಅನುಮಾನಗಳು ಇವೆ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರವೇ ನಿಖರ ಮಾಹಿತಿ ತಿಳಿಯಲಿದೆ’ ಎಂದೂ ಅವರು ಮಾಹಿತಿ ನೀಡಿದರು.

ಹಬ್ಬ ಮುಗಿಸಿ ಮರಳಿದ ಪ್ರಯಾಣಿಕರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರ 9ನೇ ದಿನವಾದ ಗುರುವಾರವೂ ಮುಂದುವರಿದಿದ್ದು, ನಗರದಲ್ಲಿ ಬಿಎಂಟಿಸಿ ಬಸ್‌ಗಳಿಲ್ಲದೆ ಯುಗಾದಿ ಮುಗಿಸಿ ಮರಳಿದ ಪ್ರಯಾಣಿಕರು ಪರದಾಡಿದರು.

ಸಾಲು–ಸಾಲು ರಜೆಗಳನ್ನು ಮುಗಿಸಿ ಬಂದ ಪ್ರಯಾಣಿಕರು ಬೆಳಿಗಿನ ಜಾವದಿಂದಲೇ ನಗರಕ್ಕೆ ತಲುಪಿದರು. ಖಾಸಗಿ ಮತ್ತು ಸರ್ಕಾರಿ ಬಸ್ ಇಳಿದ ಪ್ರಯಾಣಿಕರು ಅಲ್ಲೊಂದು ಇಲ್ಲೊಂದು ಎಂಬಂತೆ ಓಡಾಡುತ್ತಿದ್ದ ಬಿಎಂಟಿಸಿ ಬಸ್‌ಗಳಿಗಾಗಿ ಕಾದರು.

ಆನೇಕಲ್, ಜಿಗಣಿ, ಚಂದಾಪುರ, ಎಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆಗೆ ತೆರಳಲು ಖಾಸಗಿ ಬಸ್‌ಗಳಿದ್ದವು. ಆದರೆ, ಚಂದಾಪುರಕ್ಕೆ ತೆರಳಲು ಒಬ್ಬ ಪ್ರಯಾಣಿಕನಿಗೆ ₹100 ನಿಗದಿ ಮಾಡಲಾಗಿತ್ತು. ದರ ಹೆಚ್ಚಳದ ಬಗ್ಗೆ ಪ್ರಶ್ನಿಸಿದರೂ ಪ್ರಯೋಜನವಾಗದೆ ದುಬಾರಿ ದರದಲ್ಲೇ ಜನ ಪ್ರಯಾಣಿಸಿದರು.

‘ಮೂರು ಮಕ್ಕಳೊಂದಿಗೆ ಬಂದಿದ್ದೇವೆ. ಎಲೆಕ್ಟ್ರಾನಿಕ್ ಸಿಟಿಗೆ ತೆರಳಲು ₹500 ಬೇಕಾಗಿದೆ. ಕೂಲಿ ಕೆಲಸ ಮಾಡುವ ನಾವು ಅಷ್ಟೊಂದು ಹಣ ಎಲ್ಲಿಂದ ತರಬೇಕು’ ಎಂದು ದಂಪತಿ ಪ್ರಶ್ನಿಸಿದರು.

ಮನ ಬಂದಂತೆ ದರ ವಸೂಲಿ ಮಾಡುತ್ತಿರುವ ಬಗ್ಗೆ ಮಾಹಿತಿ ಆಧರಿಸಿ ಸ್ಥಳಕ್ಕೆ ಬಂದ ಆರ್‌ಟಿಒ ಅಧಿಕಾರಿಗಳು, ಖಾಸಗಿ ಚಾಲಕರಿಗೆ ಎಚ್ಚರಿಕೆ ನೀಡಿದರು. ಹೆಚ್ಚು ದರ ಪಡೆಯುತ್ತಿದ್ದರೆ ವಾಹನಗಳನ್ನು ವಶಕ್ಕೆ ಪಡೆಯಲಾಗುವುದು ಎಂದರು.

‘ಸಾರಿಗೆ ಮುಷ್ಕರದ ಲಾಭವನ್ನು ಆಟೋ ಚಾಲಕರು ಪಡೆಯುತ್ತಿದ್ದಾರೆ. ಮೆಜೆಸ್ಟಿಕ್‌ನಿಂದ ನಿಮಾನ್ಸ್‌ಗೆ ತೆರಳಲು ಆಟೋ ಚಾಲಕರು ₹200 ಕೇಳುತ್ತಿದ್ದಾರೆ’ ಎಂದು ಸಾರ್ವಜನಿಕರು ದೂರಿದರು. ಮೆಟ್ರೊ ರೈಲಿನಲ್ಲೂ ಗುರುವಾರ ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗಿತ್ತು. ಬೆಳಿಗ್ಗೆಯಿಂದಲೂ ಪ್ರಯಾಣಿಕರು ಸಾಲುಗಟ್ಟಿ ನಿಂತಿದ್ದರು.


ಗಾಂಧಿನಗರದಲ್ಲಿ ಮೇಣದ ಬತ್ತಿ ಹಿಡಿದು ಪ್ರತಿಭಟನೆ ನಡೆಸಿದ ನೌಕರರು. ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಸಾ.ರಾ.ಗೋವಿಂದ್, ಎಚ್.ಎಸ್. ದೊರೆಸ್ವಾಮಿ ಇದ್ದರು

ಮೇಣದ ಬತ್ತಿ ಹಿಡಿದು ಪ್ರತಿಭಟನೆ

ಸಾರಿಗೆ ಮುಷ್ಕರದ ಅಂಗವಾಗಿ ನೌಕರರು ನಗರದಲ್ಲಿ ಗುರುವಾರ ಮೇಣದ ಬತ್ತಿ ಹಿಡಿದು ಪ್ರತಿಭಟನೆ ನಡೆಸಿದರು.

ಮೌರ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಲು ಸಾರಿಗೆ ನೌಕರರ ಕೂಟ ನಿರ್ಧರಿಸಿತ್ತು. ಆದರೆ, ಅದಕ್ಕೆ ಪೊಲೀಸರು ಅನುಮತಿ ನೀಡದ ಕಾರಣ, ಗಾಂಧಿನಗರದಲ್ಲಿ ಮೇಣದ ಬತ್ತಿ ಹಿಡಿದು ಪ್ರತಿಭಟಿಸಿದರು. ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ, ಕನ್ನಡಪರ ಹೋರಾಟಗಾರ ಸಾ.ರಾ.ಗೋವಿಂದ್ ನೌಕರರ ಪ್ರತಿಭಟನೆಗೆ ಸಾಥ್ ನೀಡಿದ್ದರು.

ರುಂಡ ಕತ್ತರಿಸಿ ಕೊಲೆ; ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ರಾಘವೇಂದ್ರ (28) ಎಂಬುವರನ್ನು ರುಂಡ ಕತ್ತರಿಸಿ ಕೊಲೆ ಮಾಡಿದ್ದ ಏಳು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಹಳೇ ದ್ವೇಷದಿಂದಾಗಿ ರಾಘವೇಂದ್ರ ಅವರನ್ನು ಏಪ್ರಿಲ್ 11ರಂದು ಕೊಲೆ ಮಾಡಲಾಗಿತ್ತು. ಸಂಬಂಧಿಯೇ ಆಗಿರುವ ಶ್ರೀನಿವಾಸಪುರದ ಹೇಮಣ್ಣ, ವೇಲು ಸೇರಿದಂತೆ ಏಳು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಟೈಲ್ಸ್ ಜೋಡಣೆ ಕೆಲಸ ಮಾಡುತ್ತಿದ್ದ ರಾಘವೇಂದ್ರ, ಪೋಷಕರ ಜೊತೆ ವಾಸವಿದ್ದರು. ಅವರ ಚಿಕ್ಕಪ್ಪಂದಿರಾದ ಮುನಿರಾಜು ಮತ್ತು ಮುನಿಸ್ವಾಮಿ ಕುಟುಂಬದ ನಡುವೆ ವೈಷಮ್ಯವಿತ್ತು.’

‘ಮುನಿಸ್ವಾಮಿ ಹಾಗೂ ಮಗ ವಾಸು ಸೇರಿಕೊಂಡು, ಮುನಿರಾಜು ಅವರನ್ನು ಕೊಂದಿದ್ದರು. ಅವರ ಅಳಿಯನೇ ಆಗಿದ್ದ ಆರೋಪಿ ಹೇಮಣ್ಣನ ಮೇಲೂ ಹಲ್ಲೆ ಮಾಡಿದ್ದರು. ಮುನಿಸ್ವಾಮಿ ಮತ್ತು ವಾಸು ಜೈಲು ಸೇರಿದ್ದರು. ಕಳೆದ ವರ್ಷ ಬಿಡುಗಡೆಯಾಗಿದ್ದರು’ ಎಂದೂ ಪೊಲೀಸರು ತಿಳಿಸಿದರು.

‘ಮುನಿರಾಜು ಕೊಲೆಗೆ ಪ್ರತೀಕಾರ ತೀರಿಸಿಕೊಳ್ಳಲು ಅಳಿಯ ಹೇಮಣ್ಣ ಹಾಗೂ ಇತರರು, ಮುನಿಸ್ವಾಮಿ ಮತ್ತು ವಾಸು ಮೇಲೆ ಹಲ್ಲೆ ಮಾಡಿ ಜೈಲು ಸೇರಿದ್ದರು. ಗಾಯಗೊಂಡು ಚೇತರಿಸಿಕೊಂಡಿದ್ದ ಮುನಿಸ್ವಾಮಿ ಮತ್ತು ವಾಸು ಊರು ತೊರೆದಿದ್ದರು.’

‘ಜೈಲಿನಿಂದ ಬಿಡುಗಡೆಯಾಗಿದ್ದ ಹೇಮಣ್ಣ, ಕೊಲೆ ಮಾಡಲೆಂದು ಮುನಿಸ್ವಾಮಿ ಮತ್ತು ವಾಸುಗಾಗಿ ಹುಡುಕಾಡುತ್ತಿದ್ದ. ಅವರಿಬ್ಬರು ತಲೆಮರೆಸಿಕೊಳ್ಳಲು ರಾಘವೇಂದ್ರ ಸಹಾಯ ಮಾಡಿದ್ದಾನೆಂದು ತಿಳಿದಿದ್ದ. ಅದೇ ಕಾರಣಕ್ಕೆ ರಾಘವೇಂದ್ರನನ್ನೇ ರುಂಡ ಕತ್ತರಿಸಿ ಕೊಂದಿದ್ದ’ ಎಂದೂ ಪೊಲೀಸರು ಮಾಹಿತಿ ನೀಡಿದರು.

ತಜ್ಞರ ಜತೆ ಸಭೆ ಬಳಿಕ ಖಾಸಗಿ ಆಸ್ಪತ್ರೆಗಳಿಗೆ ಆರೋಗ್ಯ ಸಚಿವ ಸುಧಾಕರ್ ಎಚ್ಚರಿಕೆ

ಹಾಸಿಗೆ ಮೀಸಲಿಡದಿದ್ದರೆ ಕಠಿಣ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಖಾಸಗಿ ಆಸ್ಪತ್ರೆಗಳು ಕೋವಿಡ್ ರೋಗಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹಾಸಿಗೆಗಳನ್ನು ಮೀಸಲಿಡದಿದ್ದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಎಚ್ಚರಿಕೆ ನೀಡಿದ್ದಾರೆ.



ಕೋವಿಡ್ ನಿಯಂತ್ರಣ ಸಂಬಂಧ ತಜ್ಞರ ಜತೆ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಹಾಸಿಗೆ ಮೀಸಲಿಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕೋವಿಡ್ ರೋಗಿಗಳಿಗೆ ಹೆಚ್ಚಿನ ಹಾಸಿಗೆ ಮೀಸಲಿಡುವಂತೆ ಕಳೆದ 15 ದಿನಗಳಿಂದ ಖಾಸಗಿ ಆಸ್ಪತ್ರೆಗಳಿಗೆ ಮನವಿ ಮಾಡುತ್ತಲೇ ಬಂದಿದ್ದೇವೆ. ಕೆಲವು ಆಸ್ಪತ್ರೆಗಳು ಶೇ 15 ರಿಂದ 20 ರಷ್ಟು ಹಾಸಿಗೆ ಮಾತ್ರ ನೀಡಿವೆ. ಉಳಿದವರು ತಲೆ ಕೆಡಿಸಿಕೊಂಡಿಲ್ಲ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ. ಖಾಸಗಿ ಆಸ್ಪತ್ರೆಗಳು ಎಚ್ಚೆತ್ತುಕೊಳ್ಳದಿದ್ದರೆ ಕಳೆದ ವರ್ಷದ ರೀತಿಯಲ್ಲೇ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಕೋವಿಡ್ ಅಲ್ಲದ ರೋಗಿಗಳಲ್ಲಿ ತುರ್ತು ಇರುವವರಿಗೆ ಮಾತ್ರ ಚಿಕಿತ್ಸೆ ನೀಡಬೇಕು. ಕೋವಿಡ್ ರೋಗಿಗಳಿಗೆ ಸರಿಯಾಗಿ ಚಿಕಿತ್ಸೆ ಸಿಗದಿದ್ದರೆ ಸರ್ಕಾರ ಸುಮ್ಮನಿರುವುದಿಲ್ಲ. ಸಂಕಷ್ಟದ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳು ಸರ್ಕಾರದ ಜತೆ ನಿಲ್ಲಬೇಕು ಎಂದು ಮನವಿ ಮಾಡಿದರು.

ಹೋಟೆಲ್‌ಗಳಲ್ಲಿ ಕೋವಿಡ್ ಕೇರ್ ಸೆಂಟರ್ ಆರಂಭಿಸಬೇಕು. ಕಾರ್ಪೊರೇಟ್ ಆಸ್ಪತ್ರೆಗಳು ಈ ವ್ಯವಸ್ಥೆ ಮಾಡಬೇಕು. ಗಂಭೀರ ರೋಗಿಗಳನ್ನು ಮಾತ್ರ ಆಸ್ಪತ್ರೆಗೆ ದಾಖಲಿಸಬೇಕೆಂದು ಸೂಚಿಸಲಾಗಿದೆ ಎಂದು ಸುಧಾಕರ್ ಹೇಳಿದರು.

400 ವೈದ್ಯರು ಆರೋಗ್ಯ ಇಲಾಖೆಗೆ

ಕೋವಿಡ್ ನಿಭಾಯಿಸಲು 400 ಕ್ಕೂ ಹೆಚ್ಚು ವೈದ್ಯರನ್ನು ವೈದ್ಯಕೀಯ ಶಿಕ್ಷಣ ಇಲಾಖೆಯು ಆರೋಗ್ಯ ಇಲಾಖೆಗೆ ನೀಡಿದೆ. ರಾಜೀವ್‌ಗಾಂಧಿ ಎದೆರೋಗಗಳ ಆಸ್ಪತ್ರೆಯನ್ನು ಸಾರಿ ಹಾಗೂ ಐಎಲ್‌ಐ ಪ್ರಕರಣಗಳ ಚಿಕಿತ್ಸೆಗಾಗಿ ಮೀಸಲಿಡಲು ತೀರ್ಮಾನಿಸಲಾಗಿದೆ ಎಂದರು.

ವಿಕ್ಟೋರಿಯಾದಲ್ಲಿ 300 ಹಾಸಿಗೆಗಳು ಕೋವಿಡ್‌ಗೆ ಮೀಸಲಿದ್ದು, ಎರಡು ದಿನಗಳೊಳಗೆ 500 ಕ್ಕೆ ಏರಿಸಲು ಸೂಚಿಸಲಾಗಿದೆ. ಬೌರಿಂಗ್‌ನಲ್ಲಿ 300, ಚರಕ ಆಸ್ಪತ್ರೆಯಲ್ಲಿ ಎರಡು ದಿನದೊಳಗೆ 150, ಘೋಷಾ ಆಸ್ಪತ್ರೆಯಲ್ಲಿ 100 ಮತ್ತು ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ 100 ಹಾಸಿಗೆಗಳನ್ನು ಕೋವಿಡ್‌ಗೆ ಮೀಸಲಿಡಲು ಸೂಚಿಸಲಾಗಿದೆ ಎಂದರು.

ಕೋವಿಡ್: '1912' ಏಕೀಕೃತ ಸಹಾಯವಾಣಿ

ಬೆಂಗಳೂರು: ಕೋವಿಡ್‌ಗೆ ಸಂಬಂಧಿಸಿದಂತೆ ಜನರಲ್ಲಿ ಜಾಗೃತಿ ಮೂಡಿಸುವ ಮತ್ತು ನೆರವು ಒದಗಿಸುವ ನಿಟ್ಟಿನಲ್ಲಿ ಬಿಬಿಎಂಪಿಯು ಬೆಸ್ಕಾಂ ಸಹಯೋಗದಲ್ಲಿ '1912' ಸಂಖ್ಯೆಯ ಏಕೀಕೃತ ಸಹಾಯವಾಣಿ ಪ್ರಾರಂಭಿಸಿದೆ.

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್‌ಸಿಂಗ್ ಮತ್ತು ಮುಖ್ಯ ಆಯುಕ್ತ ಗೌರವ್ ಗುಪ್ತ ಗುರುವಾರ ಈ ಸಹಾಯವಾಣಿಗೆ ಚಾಲನೆ ನೀಡಿದರು.

'ಕೋವಿಡ್ ಕುರಿತ ಸಾಮಾನ್ಯ ಪ್ರಶ್ನೆಗಳಿಗೆ 1912 ಸಿಬ್ಬಂದಿ ಮಾಹಿತಿ ನೀಡಲಿದ್ದಾರೆ. ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ ಕರೆಗಳನ್ನು 104 ಸಹಾಯವಾಣಿಗೆ, ಶೀತ ಜ್ವರ ಮತ್ತು ತೀವ್ರ ಉಸಿರಾಟ ತೊಂದರೆ ಲಕ್ಷಣಗಳಿದ್ದರೆ ಅವರ ಕರೆಗಳನ್ನು 108ಕ್ಕೆ ವರ್ಗಾಯಿಸಿ ತುರ್ತು ಚಿಕಿತ್ಸೆ ಮತ್ತು ಆ್ಯಂಬುಲೆನ್ಸ್ ವ್ಯವಸ್ಥೆ ಕಲ್ಪಿಸಲಾಗುತ್ತದೆ' ಎಂದು ಮಾಹಿತಿ ನೀಡಿದರು.

ಕೊರೊನಾ ತುರ್ತು ಚಿಕಿತ್ಸೆ ಅಗತ್ಯವಿಲ್ಲದ ಸೋಂಕಿತರು ಕರೆ ಮಾಡಿದರೆ, ಅವರ ಎಸ್‌ಆರ್‌ಎಫ್‌ಐಡಿ ಮತ್ತು ಬಿಯು ಸಂಖ್ಯೆ ಪಡೆದು ಪಾಲಿಕೆಗೆ ಕಳುಹಿಸಲಾಗುತ್ತದೆ. ಪಾಲಿಕೆ ವೈದ್ಯಕೀಯ ತಂಡವು ರೋಗಿಗೆ ಆಸ್ಪತ್ರೆಯ ಹಾಸಿಗೆ ಅಗತ್ಯತೆಯ ಬಗ್ಗೆ ಪರಿಶೀಲನೆ ಮಾಡಿ, ಹೋಂ ಐಸೋಲೇಷನ್ ಅಥವಾ ಕೋವಿಡ್ ಆರೈಕೆ ಕೇಂದ್ರಕ್ಕೆ ಕಳುಹಿಸಲಾಗುತ್ತದೆ ಎಂದು ಹೇಳಿದರು.

ಸೋಂಕಿತರು ಸರ್ಕಾರಿ ಕೋಟಾದ ಅಡಿಯಲ್ಲಿ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದು, ಬಿಲ್ಲುಗಳನ್ನು ಇತ್ಯರ್ಥ ಪಡಿಸುವ ದೂರುಗಳಿದ್ದರೆ ಅಂತಹ ಕರೆಗಳನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ತಂಡಕ್ಕೆ ವರ್ಗಾವಣೆ ಮಾಡಲಾಗುತ್ತದೆ. ಸಹಾಯವಾಣಿಗೆ 15 ಲೈನ್‌ಗಳನ್ನು ಸಂಪರ್ಕ ಮಾಡಿದ್ದು, ಇನ್ನು 15 ಲೈನ್‌ಗಳನ್ನು ಸೇರಿಸಲಾಗುವುದು ಎಂದರು.

ವಿಶೇಷ ಆಯುಕ್ತ ರಾಜೇಂದ್ರ ಚೋಳನ್, ರೆಡ್ಡಿ ಶಂಕರ ಬಾಬು ಹಾಗೂ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಗೌಡ ಸೇರಿದಂತೆ ಮತ್ತಿತರರು ಹಾಜರಿದ್ದರು.

ವಾಟ್ಸ್‌ಆ್ಯಪ್ ಸಂಖ್ಯೆಗೂ ವಿವರ ಕಳಿಸಿ

ಸಹಾಯವಾಣಿ ಸಂಪರ್ಕ ಸಿಗದಿದ್ದಲ್ಲಿ ವಾಟ್ಸ್‌ಆ್ಯಪ್ ಸಂಖ್ಯೆ 9480812450 ಗೆ ವಿವರಗಳನ್ನು ಕಳಿಸಬಹುದು.

'ಹಾಸಿಗೆ ಕೊರತೆಯಿಲ್ಲ; ಆತಂಕ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಹಾಸಿಗೆ ಕೊರತೆ ಇಲ್ಲ. ಯಾರೂ ಆತಂಕ ಪಡಬೇಕಾದ ಅಗತ್ಯವಿಲ್ಲ. ತುರ್ತು ಚಿಕಿತ್ಸಾ ವ್ಯವಸ್ಥೆಯೂ ಸಾಕಷ್ಟು ಸುಧಾರಿಸಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, 'ಖಾಸಗಿ ಆಸ್ಪತ್ರೆಗಳಿಂದ 6,000 ಹಾಸಿಗೆಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 2,500 ಹಾಸಿಗೆಗಳನ್ನು ಈಗಾಗಲೇ ಕೊರೊನಾ ಸೋಂಕಿತರ ಚಿಕಿತ್ಸೆಗೆ ಬಳಸಲಾಗುತ್ತಿದೆ' ಎಂದರು.

'ಕೆಲವು ಖಾಸಗಿ ಆಸ್ಪತ್ರೆಗಳಲ್ಲಿ ಇತರೆ ರೋಗಿಗಳು ಚಿಕಿತ್ಸೆ ಪಡೆಯುತ್ತಿರುವ ಕಾರಣ ಅವರು ಆಸ್ಪತ್ರೆಗಳಿಂದ ಬಿಡುಗಡೆ ಆದ ನಂತರ, ಕೋವಿಡ್ ರೋಗಿಗಳಿಗೆ ಹಾಸಿಗೆ ಮೀಸಲಿಡುವುದಾಗಿ ಹೇಳಿವೆ. ಖಾಸಗಿ ಆಸ್ಪತ್ರೆಗಳಲ್ಲಿ 600 ಹಾಸಿಗೆ ಈಗಲೂ ಖಾಲಿ ಇವೆ' ಎಂದರು.

ಸಾವಿರ ವೆಂಟಿಲೇಟರ್: ನಗರದಲ್ಲಿ ತುರ್ತು ಚಿಕಿತ್ಸಾ ಘಟಕದ ವ್ಯವಸ್ಥೆ, ಆಕ್ಸಿಜನ್ ಹಾಗೂ ವೆಂಟಿಲೇಟರ್ ಮೂಲಕ ಚಿಕಿತ್ಸೆ ನೀಡುವ ವ್ಯವಸ್ಥೆಗಳು ಈ ಹಿಂದೆಗಿಂತ ಸುಧಾರಿಸಿವೆ ಎಂದು ಅವರು ಹೇಳಿದರು.

'ಆಕ್ಸಿಜನ್ ವ್ಯವಸ್ಥೆ ಅಡಿ ಚಿಕಿತ್ಸೆ ನೀಡುವ ಹಾಸಿಗೆಗಳು ಈ ಹಿಂದಿಗಿಂತ ಆರು ಪಟ್ಟು ಹೆಚ್ಚಾಗಿವೆ. ರಾಜ್ಯ ಮುಖ್ಯ ಕಾರ್ಯದರ್ಶಿಗಳೊಂದಿಗೂ ಚರ್ಚೆ ಮಾಡಲಾಗಿದ್ದು, ಒಂದು ಸಾವಿರ ವೆಂಟಿಲೇಟರ್ ವ್ಯವಸ್ಥೆ ಕಲ್ಪಿಸುವುದಾಗಿ ಹೇಳಿದ್ದಾರೆ' ಎಂದು ಅವರು ತಿಳಿಸಿದರು.

ಅತ್ಯಾಧುನಿಕ ಆ್ಯಂಬುಲೆನ್ಸ್ : ನಗರದಲ್ಲಿ ವಿಧಾನಸಭಾ ಕ್ಷೇತ್ರವಾರು ಅತ್ಯಾಧುನಿಕ ಆ್ಯಂಬುಲೆನ್ಸ್ ವ್ಯವಸ್ಥೆ ಕಲ್ಪಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಇದರಲ್ಲಿ ಸೋಂಕಿತರಿಗೆ ತುರ್ತು ಚಿಕಿತ್ಸೆ ನೀಡಲು ಕೃತಕ ಆಮ್ಲಜನಕ ಸೌಲಭ್ಯ ಸೇರಿದಂತೆ ಎಲ್ಲ ರೀತಿಯ ವ್ಯವಸ್ಥೆ ಇರಲಿದೆ ಎಂದರು.

'ಕೊನೆಯ ಕ್ಷಣದವರೆಗೂ ಕಾಯಬೇಡಿ'

'ತುರ್ತು ಚಿಕಿತ್ಸಾ ಘಟಕದಲ್ಲಿ ಹಾಸಿಗೆಗಳ ಕೊರತೆ ಉದ್ಭವಿಸುವ ಸಾಧ್ಯತೆ ಇದೆ. ಸೋಂಕಿತರು ಪರಿಸ್ಥಿತಿ ಗಂಭೀರವಾಗುವವರೆಗೂ ಕಾಯದೆ, ಲಕ್ಷಣಗಳು ಕಂಡ ತಕ್ಷಣ ಪರೀಕ್ಷೆ ಮಾಡಿಸಿಕೊಳ್ಳಲು ಮುಂದಾಗಬೇಕು' ಎಂದು ಗೌರವ್ ಗುಪ್ತ ಸಲಹೆ ನೀಡಿದರು.

'ಸೋಂಕು ಪರೀಕ್ಷೆ ಮಾಡಿಸಿಕೊಂಡು ವರದಿ ಬರುವಷ್ಟರಲ್ಲೇ ವ್ಯಕ್ತಿಯ ಆರೋಗ್ಯ ಸಮಸ್ಯೆ ಉಲ್ಬಣಿಸುತ್ತಿದೆ. ಜನ ದಯವಿಟ್ಟು ಪ್ರಾರಂಭಿಕ ಹಂತದಲ್ಲೇ ಸೋಂಕು ಪರೀಕ್ಷೆಗೆ ಒಳಗಾಗಬೇಕು' ಎಂದು ಮನವಿ ಮಾಡಿದರು.

'ಕೊರೊನಾ ಸೋಂಕು ದೃಢಪಡುವವರ ಪೈಕಿ ಶೇ.80ರಷ್ಟು ಪ್ರಕರಣಗಳಲ್ಲಿ ಸೋಂಕಿತರಿಗೆ ಹೆಚ್ಚಿನ ಆರೈಕೆ ಅಥವಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಅಗತ್ಯ ಇರುವುದಿಲ್ಲ. ಆಸ್ಪತ್ರೆ ಚಿಕಿತ್ಸೆ ಅವಶ್ಯವಿರುವವರು ಮಾತ್ರ ಆಸ್ಪತ್ರೆಗೆ ದಾಖಲಾದರೆ ಉತ್ತಮ. ಎಲ್ಲರೂ ದಾಖಲಾಗಿ ಕೃತಕ ಅಭಾವ ಸೃಷ್ಟಿಸುವುದು ಬೇಡ. ನಿರ್ದಿಷ್ಟ ಆಸ್ಪತ್ರೆಯಲ್ಲಿಯೇ ದಾಖಲಾಗಬೇಕು ಎಂಬ ಒತ್ತಡ ಹೇರುವುದೂ ಬೇಡ' ಎಂದು ಅವರು ಮನವಿ ಮಾಡಿದರು.



ರಂಜಾನ್... ರಂಜಾನ್ ಹಬ್ಬದ ಉಪವಾಸ ಶುರುವಾದ ಎರಡನೇ ದಿನವಾದ ಗುರುವಾರ ಸಿ.ಟಿ.ಮಾರ್ಕೆಟ್‌ನಲ್ಲಿರುವ ಸವೇರಾ ಹೋಟೆಲ್ ನಲ್ಲಿ ಮುಸ್ಲಿಂ ಸಮುದಾಯದ ಜನ ಸಮೋಸ ಮತ್ತು ಇತರ ತಿಂಡಿಗಳನ್ನು ತೆಗೆದುಕೊಳ್ಳುತ್ತಿರುವ ದೃಶ್ಯ –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

5,12,521 ಒಟ್ಟು ಸೋಂಕಿತರು

4,35,730 ಗುಣಮುಖರಾದವರು

71,827 ಸಕ್ರಿಯ ಪ್ರಕರಣ

4,963 ಸಾವು

ಗುರುವಾರದ ಏರಿಕೆ.

10,497 ದೃಢಪಟ್ಟ ಪ್ರಕರಣ

1,807 ಗುಣಮುಖ

30 ಸಾವು

ನೇಮಕ



ಯಲಹಂಕ: ಯಲಹಂಕ ಬ್ಲಾಕ್ ಕಾಂಗ್ರೆಸ್ ಪರಿಶಿಷ್ಟ ಜಾತಿ ಸಮಿತಿಯ ಅಧ್ಯಕ್ಷರನ್ನಾಗಿ ಸುರೇಶ್ ಮೃತ್ಯುಂಜಯ ಎಸ್. ಅವರನ್ನು ನೇಮಕ ಮಾಡಲಾಗಿದೆ.

ಕೆಪಿಸಿಸಿ ಪರಿಶಿಷ್ಟ ಜಾತಿ ಸಮಿತಿಯ ಅಧ್ಯಕ್ಷ ಎಫ್.ಎಚ್.ಜಕ್ಕಪ್ಪನವರ್ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಕರಗ: 17ರ ನಂತರ ತೀರ್ಮಾನ

ಬೆಂಗಳೂರು: 'ಕರಗ ಮಹೋತ್ಸವವನ್ನು ದೇವಸ್ಥಾನದ ಆವರಣಕ್ಕೆ ಸೀಮಿತಗೊಳಿಸಲು ನಿರ್ಧರಿಸಲಾಗಿದೆ. ಇದೇ 17ರ ಒಳಗೆ ಮತ್ತೊಂದು ಸಮನ್ವಯ ಸಭೆ ಕರೆದು ಮಹೋತ್ಸವದ ವಿಧಾನಗಳ ಬಗ್ಗೆ ಅಂತಿಮ ತೀರ್ಮಾನ ಪ್ರಕಟಿಸಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

ಕರಗ ಉತ್ಸವ ಸಂಬಂಧ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಗುರುವಾರ ಸಭೆ ನಡೆಸಿದ ಅವರು, 'ನಗರದಲ್ಲಿ ಮತ್ತು ಶ್ರೀ ಧರ್ಮರಾಯ ಸ್ವಾಮಿ ದೇಗುಲದ ಸುತ್ತ–ಮುತ್ತ ಕೊರೊನಾ ಸೋಂಕು ಹೆಚ್ಚುತ್ತಿರುವುದರಿಂದ ಮೆರವಣಿಗೆಗೆ ಅವಕಾಶ ನೀಡದೆ, ದೇಗುಲದ ಒಳಗೆ 5 ರಿಂದ 7 ಜನರು ಒಳಗೊಂಡತೆ ಪೂಜೆ ವಿಧಿ ವಿಧಾನವನ್ನು ನಡೆಸಲು ಅನುಮತಿ ನೀಡುವ ಚಿಂತನೆ ಇದೆ' ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್, 'ಕಳೆದ ವರ್ಷವೂ ಕರಗ ಉತ್ಸವವನ್ನು ಕೇವಲ 5 ಜನರ ನೇತೃತ್ವದಲ್ಲಿ ಗರ್ಭಗುಡಿಯ ಒಳಗಡೆ ನೆರವೇರಿಸಲಾಯಿತು. ಈ ವರ್ಷ ಸ್ವಲ್ಪ ಸಡಿಲಿಕೆ ನೀಡಬೇಕು' ಎಂದು ಕೋರಿದರು.

ಶಾಸಕ ಉದಯ ಗರುಡಾಚಾರ್, 'ಹೆಚ್ಚು ಸಡಿಲಿಕೆ ಬೇಡ. ಜನರ ಆರೋಗ್ಯ ರಕ್ಷಣೆಗೆ ಒತ್ತು ನೀಡಬೇಕಾದುದು ಅವಶ್ಯ' ಎಂದರು.

ಉತ್ಸವ ಸಮಿತಿ: ಈ ವರ್ಷ ಕರಗ ಉತ್ಸವ ವ್ಯವಸ್ಥಾಪನಾ ಸಮಿತಿ ಅಸ್ತಿತ್ವದಲ್ಲಿ ಇಲ್ಲ. ಬದಲಾಗಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅವರು ಕರಗ ಉತ್ಸವ ಸಮಿತಿ ರಚಿಸಿದ್ದಾರೆ. ಈ ಉತ್ಸವ ಸಮಿತಿಯು ದೇವಾಲಯಕ್ಕೆ ಸೀಮಿತವಾಗಿ ಕರಗ ಆಚರಣೆ ಕುರಿತು ವಿಧಿವಿಧಾನ ಮತ್ತು ಸಂಪ್ರದಾಯದ ಕುರಿತು ಏ.17ಕ್ಕೆ ವರದಿ ನೀಡಲಿದೆ.

'ರಾಜ್ಯ ಸರ್ಕಾರ ಮುಸ್ಲಿಂ ಮುಖಂಡರೊಂದಿಗೆ ಚರ್ಚಿಸಿ ಕೋವಿಡ್ ಸೋಂಕು ಹರಡದಂತೆ ಎಚ್ಚರಿಕೆ ವಹಿಸಿ, ರಂಜಾನ್ ಆಚರಣೆ ಬಗ್ಗೆ ಕೋವಿಡ್ ಮಾರ್ಗಸೂಚಿ ಹೊರಡಿಸಿದೆ. ಈ ಮಾರ್ಗಸೂಚಿ ಪಾಲನೆಗೆ ಅವಶ್ಯವಿರುವ ಸಿಬ್ಬಂದಿ ನೆರವನ್ನು ಪಾಲಿಕೆ ನೀಡಲಿದೆ' ಎಂದೂ ಗೌರವ್ ಗುಪ್ತ ಹೇಳಿದರು.


ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನಗರದಲ್ಲಿ ಇಂದು

ಡಾ.ಬಿ.ಆರ್. ಅಂಬೇಡ್ಕರ್ 130ನೇ ಜನ್ಮದಿನಾಚರಣೆ: ಪ್ರಾಸ್ತಾವಿಕ ನುಡಿ: ಪ್ರೊ.ಎಂ. ಕೊಟ್ರೇಶ್, ಅಧ್ಯಕ್ಷತೆ: ಪ್ರೊ.ಕೆ.ಇ. ದೇವನಾಥನ್, ವಿಶೇಷ ಉಪನ್ಯಾಸ: 'ಪ್ರಬುದ್ಧ ರಾಷ್ಟ್ರ ಭಕ್ತ ಡಾ.ಬಿ. ಆರ್. ಅಂಬೇಡ್ಕರ್', ಉಪನ್ಯಾಸಕ: ನ. ನಾಗರಾಜ್, ಆಯೋಜನೆ: ಡಾ.ಬಿ. ಆರ್. ಅಂಬೇಡ್ಕರ್ ಅಧ್ಯಯನ ಹಾಗೂ ಸಂಶೋಧನೆ ಕೇಂದ್ರ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಸ್ಥಳ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಮಧ್ಯಾಹ್ನ 3

ಡಾ. ರಾಜಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ: ಅಧ್ಯಕ್ಷತೆ: ಮನು ಬಳಿಗಾರ್, ಪ್ರಶಸ್ತಿ ಪ್ರದಾನ: ಎಸ್.ಎ. ಚಿನ್ನೇಗೌಡ, ಪ್ರಶಸ್ತಿ ಪುರಸ್ಕೃತರು: ಕೆ. ನರಸಿಂಹಯ್ಯ, ಬಸಂತಕುಮಾರ ಪಾಟೀಲ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30

83ನೇಯ ಶ್ರೀರಾಮನವಮಿ ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಎಸ್. ಸಾಕೇತರಾಮನ್, ಪಿಟೀಲು: ಎಲ್. ರಾಮಕೃಷ್ಣನ್, ಮೃದಂಗ: ಎನ್. ಸಿ. ಭಾರದ್ವಾಜ್, ಖಂಜಿರ: ಜಿ. ಗುರುಪ್ರಸನ್ನ, ಆಯೋಜನೆ: ಶ್ರೀ ರಾಮಸೇವಾ ಮಂಡಳಿ, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ live.ramanavami.org)



ಸಾಕೇತರಾಮನ್

ಮೆಟ್ರೊ: ಪ್ರಯಾಣಿಕರ ಸಂಖ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರ ಕಾರಣದಿಂದಾಗಿ ನಗರದೊಳಗೆ ಏಕೈಕ ಸಾರ್ವಜನಿಕ ಸಾರಿಗೆ ಎನಿಸಿರುವ ಮೆಟ್ರೊ ರೈಲಿನ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ.

ಕೋವಿಡ್ ಮಾರ್ಗಸೂಚಿಯಡಿ ಅನೇಕ ನಿರ್ಬಂಧಗಳ ಹೊರತಾಗಿಯೂ, ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಏ.9ರಂದು 1.89 ಲಕ್ಷ ಪ್ರಯಾಣಿಕರು ಮೆಟ್ರೊ ಬಳಸಿದ್ದಾರೆ.

ಕೋವಿಡ್ ಬಿಕ್ಕಟ್ಟಿಗೂ ಮುನ್ನ, ನಿತ್ಯ ಸರಾಸರಿ 4.5 ಲಕ್ಷ ಜನ ಪ್ರಯಾಣಿಸುತ್ತಿದ್ದರು. ಕಳೆದ ಸೆಪ್ಟೆಂಬರ್‌ನಲ್ಲಿ ಮೆಟ್ರೊ ಸೇವೆ ಪುನರಾರಂಭಗೊಂಡ ಸಂದರ್ಭದಲ್ಲಿ ಸರಾಸರಿ 31 ಸಾವಿರ ಜನ ಮೆಟ್ರೊ ಬಳಸುತ್ತಿದ್ದರು. ಈ ಸಂಖ್ಯೆ ದುಪ್ಪಟ್ಟಾಗಿದ್ದು, ತಿಂಗಳುಗಳ ನಂತರ ಅಂದರೆ ಜನವರಿಯಲ್ಲಿ. ಆ ತಿಂಗಳಲ್ಲಿ ಸರಾಸರಿ 65 ಸಾವಿರ ಜನ ಪ್ರಯಾಣಿಸುತ್ತಿದ್ದರು. ಮಾರ್ಚ್‌ನಲ್ಲಿ ಈ ಸಂಖ್ಯೆ 1.54 ಲಕ್ಷಕ್ಕೆ ಮುಟ್ಟಿದ್ದರೆ, ಈಗ ಎರಡು ಲಕ್ಷದ ಸಮೀಪ ಬಂದು ನಿಂತಿದೆ.

'ಮುಷ್ಕರದ ಕಾರಣ ಪೂರ್ಣ ಸಾಮರ್ಥ್ಯದೊಂದಿಗೆ ಮೆಟ್ರೊ ಸೇವೆ ನೀಡಲಾಗುತ್ತಿದೆ. ಆದರೂ, ಕೋವಿಡ್ ಮಾರ್ಗಸೂಚಿಗಳನ್ನು ರೈಲಿನಲ್ಲಿ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ಸರ್ಕಾರದ ಸೂಚನೆಯಂತೆ, ರೈಲಿನಲ್ಲಿ ಮಾಸ್ಕ್ ಧರಿಸದೆ ಪ್ರಯಾಣಿಸುವವರಿಗೆ ದಂಡ ವಿಧಿಸಲಾಗುತ್ತಿದೆ. ಏ.5ರಿಂದ 12ರವರೆಗೆ 440 ಪ್ರಯಾಣಿಕರಿಗೆ ತಲಾ ₹250 ದಂಡ ವಿಧಿಸಲಾಗಿದೆ' ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ಎಲ್. ಯಶವಂತ ಚೌಹಾಣ್ ಹೇಳಿದರು.

ವಿದ್ಯುತ್ ಚಿತಾಗಾರದ ಮುಂದೆ ಶವಗಳ ಸಾಲು: ಚಿತಾಗಾರಗಳ ಸಂಖ್ಯೆ ಹೆಚ್ಚಳ

ಕೋವಿಡ್: ಮೃತರ ಶವಸಂಸ್ಕಾರ ಉಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್‌ನಿಂದ ಮೃತಪಡುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದ್ದು, ವಿದ್ಯುತ್ ಚಿತಾಗಾರದ ಮುಂದೆ ಶವಗಳ ಸಾಲು ಹೆಚ್ಚಾಗುತ್ತಿದೆ. ಅಂತ್ಯಕ್ರಿಯೆ ಮುಗಿಸಲು ಗಂಟೆಗಟ್ಟಲೇ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಸಮಸ್ಯೆಯನ್ನು ಮನಗಂಡಿರುವ ಬಿಬಿಎಂಪಿಯು ಮೂರು ಹೆಚ್ಚುವರಿ ಚಿತಾಗಾರಗಳನ್ನು ಗುರುತಿಸಿದೆ. ಆ ಮೂಲಕ ಕೋವಿಡ್ ಶವಗಳ ದಹನ ಮಾಡುವ ಚಿತಾಗಾರಗಳ ಸಂಖ್ಯೆ 7ಕ್ಕೆ ಏರಿದೆ.

ಕೋವಿಡ್ ಶವಗಳನ್ನು ದಹಿಸಲು ಹೆಚ್ಚು ಹಣ ಕೇಳಲಾಗುತ್ತಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿಯೂ ಕ್ರಮ ಕೈಗೊಂಡಿರುವ ಪಾಲಿಕೆಯು, ಕೊರೊನಾ ಸೋಂಕಿನಿಂದ ಮೃತಪಡುವವರ ಶವ ಸಂಸ್ಕಾರಕ್ಕೆ ಯಾವುದೇ ಶುಲ್ಕ ನಿಗದಿ ಮಾಡಿಲ್ಲ ಎಂದು ಸ್ಪಷ್ಟಪಡಿಸಿದೆ.

ಪ್ರತಿ ದಿನ ವರದಿ:

ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಈ ಚಿತಾಗಾರಗಳು ಕಾರ್ಯನಿರ್ವಹಿಸುತ್ತವೆ. ಸೂಪರಿಂಟೆಂಡಿಂಗ್ ಎಂಜಿನಿಯರ್ ಪ್ರತಿದಿನ ಈ ಕುರಿತು ವರದಿ ನೀಡಬೇಕು. ಸಂಬಂಧಪಟ್ಟ ವಲಯ ಆರೋಗ್ಯಾಧಿಕಾರಿ ವಿದ್ಯುತ್ ಚಿತಾಗಾರ ಸಿಬ್ಬಂದಿಗೆ ಅವಶ್ಯವಿರುವ ಎಲ್ಲ ಸುರಕ್ಷತಾ ಪರಿಕರಗಳನ್ನು ನೀಡಬೇಕು ಹಾಗೂ ಸ್ಯಾನಿಟೈಸ್ ವ್ಯವಸ್ಥೆ ಕಲ್ಪಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚನೆ ನೀಡಿದ್ದಾರೆ.

260 ಆಂಬುಲೆನ್ಸ್: ಕೋವಿಡ್ ಸೋಂಕಿತರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು 198 ವಾರ್ಡ್‌ಗಳಿಗೆ 260 ಆಂಬುಲೆನ್ಸ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ. ಸೋಂಕಿತರನ್ನು ಅವರ ಮನೆಯಿಂದ ಆಸ್ಪತ್ರೆಗೆ ಉಚಿತವಾಗಿ ಕರೆದುಕೊಂಡು ಹೋಗಲಾಗುತ್ತಿದೆ. ಆಂಬುಲೆನ್ಸ್‌ಗಳಿಗೂ ಯಾವುದೇ ಹಣ ನೀಡುವ ಅವಶ್ಯಕತೆ ಇಲ್ಲ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ಬಿ.ಕೆ. ವಿಜಯೇಂದ್ರ ತಿಳಿಸಿದ್ದಾರೆ.

ಹೊರಗುತ್ತಿಗೆ ಆಧಾರದ ಮೇಲೆ ಈ ಆಂಬುಲೆನ್ಸ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ.

ಕೋವಿಡ್ ಶವಗಳನ್ನು ಆಸ್ಪತ್ರೆಯಿಂದ ಚಿತಾಗಾರಕ್ಕೆ ಸಾಗಿಸಲು 49 ಶವ ಸಾಗಣೆ ವಾಹನಗಳನ್ನು ಬಳಸಿಕೊಳ್ಳಲಾಗುತ್ತಿದೆ. ಈ ವ್ಯವಸ್ಥೆಯೂ ಉಚಿತವಾಗಿದ್ದು ಯಾವುದೇ ಹಣ ನೀಡಬಾರದು ಎಂದೂ ಅವರು ಹೇಳಿದ್ದಾರೆ.

ವೇತನ ಬಿಡುಗಡೆಗೆ ಸೂಚನೆ

ಬಿಬಿಎಂಪಿಯ ಎಲ್ಲ ವಿದ್ಯುತ್ ಚಿತಾಗಾರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ವಲಯ ಮಟ್ಟದಲ್ಲಿ ಕೂಡಲೇ ವೇತನ ಬಿಡುಗಡೆ ಮಾಡಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚನೆ ನೀಡಿದ್ದಾರೆ.

'ವೇತನ ಬಾಕಿ ಉಳಿಸಿಕೊಂಡಿರುವುದು ಸರಿಯಲ್ಲ. ವೇತನ ಬಿಡುಗಡೆಯಾಗದಿದ್ದರೆ ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ' ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ.

'ಚಿತಾಗಾರಗಳಲ್ಲಿ ಕೋವಿಡ್ ಶವಸಂಸ್ಕಾರದ ವೇಳೆ ಎಲ್ಲ ಅಗತ್ಯ ಸುರಕ್ಷತಾ ಕ್ರಮ ಅನುಸರಿಸಬೇಕು. ಇದರಲ್ಲಿ ಲೋಪವಾದರೂ ಕ್ರಮ ಕೈಗೊಳ್ಳಲಾಗುತ್ತದೆ' ಎಂದೂ ಅವರು ಹೇಳಿದ್ದಾರೆ.

ಚಿತಾಗಾರದ ಸಿಬ್ಬಂದಿಗೆ 10 ತಿಂಗಳಿನಿಂದ ವೇತನ ಪಾವತಿಯಾಗದಿರುವ ಬಗ್ಗೆ ಮತ್ತು ಕೋವಿಡ್ ಶವಸಂಸ್ಕಾರಕ್ಕಾಗಿ ತಾಸುಗಟ್ಟಲೇ ಕಾಯಬೇಕಾಗಿರುವ ಬಗ್ಗೆ 'ಪ್ರಜಾವಾಣಿ'ಯು ಗುರುವಾರ ವಿಶೇಷ ವರದಿ ಪ್ರಕಟಿಸಿತ್ತು.

ಎಲ್ಲೆಲ್ಲಿ ಕೋವಿಡ್ ಶವಸಂಸ್ಕಾರ ?

ವಿದ್ಯುತ್ ಚಿತಾಗಾರ	ವಲಯ
ಕೂಡ್ಲು	ಬೊಮ್ಮನಹಳ್ಳಿ
ಪಣತ್ತೂರು	ಮಹದೇವಪುರ
ಮೇಡಿ ಅಗ್ರಹಾರ	ಯಲಹಂಕ
ಕೆಂಗೇರಿ	ಆರ್.ಆರ್. ನಗರ
ಬನಶಂಕರಿ	ದಕ್ಷಿಣ
ಪೀಣ್ಯ ದಾಸರಹಳ್ಳಿ	ಆರ್.ಆರ್. ನಗರ
ಸುಮನಹಳ್ಳಿ	ಆರ್.ಆರ್. ನಗರ

ಕಾಳಸಂತೆಯಲ್ಲಿ ಕೋವಿಡ್ ಲಸಿಕೆ ಮಾರಾಟ: ಆರೋಪ

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಕೋವಿಡ್ ಲಸಿಕೆಗಳು ರೋಗಿಗಳಿಗೆ ನೀಡಲು ಪೂರೈಕೆಯಾಗುತ್ತಿಲ್ಲ. ಬದಲಾಗಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ. ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಮತ್ತು ರೋಗಿಗಳಿಗೆ ಹಾಗೂ ತುರ್ತು ಅಗತ್ಯ ಇರುವವರಿಗೆ ಮೊದಲು ಲಸಿಕೆ ಸಿಗುವಂತೆ ನೋಡಿಕೊಳ್ಳಬೇಕು ಎಂದು ಹರ್ಷ ರಾಮಯ್ಯ ಆಸ್ಪತ್ರೆ ಮತ್ತು ಹರ್ಷ ಮೆಡಿಕಲ್ಸ್‌ನ ವ್ಯವಸ್ಥಾಪಕ ಪಾಲುದಾರ ಎಸ್. ಶಿವಕುಮಾರ್ ಆಗ್ರಹಿಸಿದ್ದಾರೆ.

ಈ ಕುರಿತು ಕೇಂದ್ರ ಆರೋಗ್ಯ ಸಚಿವ ಡಾ.ಹರ್ಷವರ್ಧನ್, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಮುಖ್ಯಕಾರ್ಯದರ್ಶಿ ಪಿ.ರವಿಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.



ಶಿವಕುಮಾರ್

'ಪಟ್ಟಣದ ಹರ್ಷ ರಾಮಯ್ಯ ಆಸ್ಪತ್ರೆಯಲ್ಲಿ ಕೋವಿಡ್ ಪ್ರಾರಂಭದ ದಿನದಿಂದಲೂ ಚಿಕಿತ್ಸೆ ನೀಡುತ್ತಿದ್ದು, ಪ್ರಸ್ತುತ ರೋಗಿಗಳಿಗೆ ನೀಡಲು ಲಸಿಕೆ ಲಭ್ಯವಾಗುತ್ತಿಲ್ಲ. ಹತ್ತು ದಿನಗಳಿಂದಲೂ ಲಸಿಕೆಗೆ ಬೇಡಿಕೆ ಇಟ್ಟಿದ್ದರೂ, ಲಭ್ಯವಿಲ್ಲ ಎಂಬ ಹಾರಿಕೆ ಉತ್ತರ ಬರುತ್ತಿದೆ. ಸಗಟು ವ್ಯಾಪಾರಿಗಳು ಚಿಕಿತ್ಸೆಯ ಅಗತ್ಯಕ್ಕನುಗುಣವಾಗಿ ಲಸಿಕೆ ಪೂರೈಸುತ್ತಿಲ್ಲ, ಬದಲಾಗಿ ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ' ಎಂದು ಅವರು ದೂರಿದ್ದಾರೆ.

'ಭಾರತದ ತಪ್ಪು ಗ್ರಹಿಕೆ ನಿವಾರಿಸಲು ಸೂಚನೆ'

ಇಸ್ಲಾಮಾಬಾದ್ (ಪಿಟಿಐ): ಕುಲಭೂಷಣ್ ಜಾಧವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ನ್ಯಾಯಾಲಯ (ಐಸಿಜೆ) ನೀಡಿರುವ ತೀರ್ಪಿನ ಅನುಸಾರ ಮರು ವಿಚಾರಣೆ ನಡೆಸಲು ನ್ಯಾಯಾಲಯದ ವ್ಯಾಪ್ತಿಯ ಬಗ್ಗೆ ಭಾರತದ ತಪ್ಪು ಗ್ರಹಿಕೆಯನ್ನು ದೂರ ಮಾಡಬೇಕು ಎಂದು ಇಸ್ಲಾಮಾಬಾದ್ ಹೈಕೋರ್ಟ್ ಪಾಕಿಸ್ತಾನದ ವಿದೇಶಾಂಗ ಕಚೇರಿಗೆ ಗುರುವಾರ ಸೂಚನೆ ನೀಡಿದೆ.

ಬೇಹುಗಾರಿಕೆ ಪ್ರಕರಣದಲ್ಲಿ ಪಾಕಿಸ್ತಾನದಲ್ಲಿ ಬಂಧನಕ್ಕೊಳಗಾಗಿರುವ ಭಾರತೀಯ ನೌಕಾಪಡೆಯ ನಿವೃತ್ತ ಅಧಿಕಾರಿ ಕುಲಭೂಷಣ್ ಜಾಧವ್ ಅವರಿಗೆ ಸೇನಾ ನ್ಯಾಯಾಲಯ ಮರಣದಂಡನೆ ವಿಧಿಸಿತ್ತು. ಇದನ್ನು ಪ್ರಶ್ನಿಸಿ ಭಾರತ ಅಂತರರಾಷ್ಟ್ರೀಯ ನ್ಯಾಯಾಲಯದ ಮೊರೆ ಹೋಗಿತ್ತು. ಈ ತೀರ್ಪನ್ನು ಮರುಪರಿಶೀಲನೆ ನಡೆಸುವಂತೆ ಅಂತರರಾಷ್ಟ್ರೀಯ ನ್ಯಾಯಾಲಯ ಆದೇಶಿಸಿತ್ತು.

ಐಸಿಜೆ ಆದೇಶದ ಮೇರೆಗೆ ಪಾಕಿಸ್ತಾನ ಸರ್ಕಾರ ಕಳೆದ ವರ್ಷ ವಿಶೇಷ ಸುಗ್ರೀವಾಜ್ಞೆ ಹೊರಡಿಸಿ ಪ್ರಕರಣದ ವಿಚಾರಣೆ ನಡೆಸಲು ಇಸ್ಲಾಮಾಬಾದ್ ಹೈಕೋರ್ಟ್‌ಗೆ ವರ್ಗಾಯಿಸಿತ್ತು. ಆದರೆ, ಭಾರತವು ಇಸ್ಲಾಮಾಬಾದ್ ಹೈಕೋರ್ಟ್ ವ್ಯಾಪ್ತಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದೆ. ಕೋರ್ಟ್ ವ್ಯಾಪ್ತಿಯ ಬಗ್ಗೆ ಭಾರತ ಹೊಂದಿರುವ ತಪ್ಪು ಗ್ರಹಿಕೆಯನ್ನು ಹೋಗಲಾಡಿಸಲು ಯತ್ನಿಸಬೇಕು ಎಂದು ಇಸ್ಲಾಮಾಬಾದ್ ಹೈಕೋರ್ಟ್ ಹೇಳಿದೆ.

₹ 20 ಲಕ್ಷ ಮೌಲ್ಯದ ಡ್ರಗ್ಸ್, ಆಯುಧ ಜಪ್ತಿ

ಬೆಂಗಳೂರು: ನಗರದಲ್ಲಿ ವ್ಯವಸ್ಥಿತವಾಗಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ವಿದೇಶಿ ಪ್ರಜೆಗಳು ಸೇರಿ ನಾಲ್ವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ನೈಜೀರಿಯಾದ ಅಜ್ಞಾ ಫ್ರಾನ್ಸಿಸ್ ಒಬಸಿ (34), ಚಾರ್ಲೆಸ್ ಚಿಮಾ (29), ಕೇರಳದ ಜಸಿರ್ ಥನಿಚೇರಿ ಕಂಡಯ್ (33) ಹಾಗೂ ಬೆಂಗಳೂರಿನ ಮಾಲಂಗ್ ಪಾಷಾ (30) ಬಂಧಿತರು. ಅವರಿಂದ ₹ 20 ಲಕ್ಷ ಮೌಲ್ಯದ ಡ್ರಗ್ಸ್ ಹಾಗೂ ಆಯುಧಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೆಲ ಖಾಸಗಿ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಕೆಲ ಖಾಸಗಿ ಕಂಪನಿಗಳ ಉದ್ಯೋಗಿಗಳಿಗೆ ಆರೋಪಿಗಳು ಡ್ರಗ್ಸ್ ಮಾರುತ್ತಿದ್ದರು. ಜೊತೆಯಲ್ಲೇ ಆರೋಪಿಗಳು, ಆಯುಧ ಇಟ್ಟುಕೊಂಡು ಓಡಾಡುತ್ತಿದ್ದರು. ಇದನ್ನು ಬಳಸಿ ಅಪರಾಧ ಕೃತ್ಯಗಳನ್ನು ಎಸಗಿರುವ ಅನುಮಾನವಿದೆ' ಎಂದೂ ತಿಳಿಸಿದರು.

'ಬಾಗಲೂರು ಠಾಣೆ ವ್ಯಾಪ್ತಿಯ ಶಾಲೆಯೊಂದರ ಬಳಿ ಏಪ್ರಿಲ್ 13ರಂದು ಸುತ್ತಾಡುತ್ತಿದ್ದ ಆರೋಪಿಗಳು, ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಮಾರಾಟ ಮಾಡಲು ಕಾಯುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ, ಆರೋಪಿಗಳನ್ನು ಸೆರೆ ಹಿಡಿಯಲಾಯಿತು' ಎಂದೂ ಹೇಳಿದರು.

'200 ಗ್ರಾಂ ತೂಕದ ಎಕ್ಸ್‌ಟೆಸಿ ಮಾತ್ರೆಗಳು ಹಾಗೂ 153 ಗ್ರಾಂ ಎಂಡಿಎಂಎ ಆರೋಪಿಗಳ ಬಳಿ ಸಿಕ್ಕಿವೆ. ಅವರ 5 ಮೊಬೈಲ್, 2 ದ್ವಿಚಕ್ರ ವಾಹನ ಹಾಗೂ ₹ 4,000 ನಗದನ್ನು ಜಪ್ತಿ ಮಾಡಲಾಗಿದೆ' ಎಂದೂ ಪೊಲೀಸರು ತಿಳಿಸಿದರು.



ಆರೋಪಿಗಳಿಂದ ಜಪ್ತಿ ಮಾಡಲಾದ ಡ್ರಗ್ಸ್ ಹಾಗೂ ಅಪಾಯಕಾರಿ ಆಯುಧಗಳು

ಮಂಡ್ಯ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಶಿವಲಿಂಗು ಸೇರಿ 17 ಮಂದಿ ಪೊಲೀಸ್ ವಶಕ್ಕೆ

ಪ್ರೇಮ ಪ್ರಕರಣ: ಹಲ್ಲೆ– ಬಾಲಕ ಸಾವು

ಪ್ರಜಾವಾಣಿ ವಾರ್ತೆ


ದರ್ಶನ್

ಮಂಡ್ಯ: ತಮ್ಮ ಕುಟುಂಬದ ಬಾಲಕಿಯನ್ನು ಪ್ರೀತಿಸುತ್ತಿದ್ದ ಎನ್ನಲಾದ 16 ವರ್ಷದ ಬಾಲಕನನ್ನು ಬುಧವಾರ ರಾತ್ರಿ ಇಲ್ಲಿನ ಕಲ್ಲಹಳ್ಳಿ ಬಡಾವಣೆಯ ಮನೆಗೆ ಕರೆಯಿಸಿಕೊಂಡ ಬಾಲಕಿ ಕುಟುಂಬದವರು, ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಬಾಲಕ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಗುರುವಾರ ಮೃತಪಟ್ಟಿದ್ದಾನೆ.

ಕಲ್ಲಹಳ್ಳಿ ಬಡಾವಣೆಯ 2ನೇ ಕ್ರಾಸ್ ನಿವಾಸಿ ಸತೀಶ್ ಅವರ ಮಗ ದರ್ಶನ್ ಮೃತಪಟ್ಟ ಬಾಲಕ. ಘಟನೆ ಸಂಬಂಧ ಬಾಲಕಿಯ ತಂದೆ, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಶಿವಲಿಂಗು ಸೇರಿದಂತೆ 17 ಮಂದಿ ವಿರುದ್ಧ ನಗರದ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.


ಬಾಲಕನ ಸಾವಿನ ನಂತರ ಕಲ್ಲಹಳ್ಳಿ ಬಡಾವಣೆ 4ನೇ ಕ್ರಾಸ್‌ನಲ್ಲಿ ಪ್ರಕ್ಷುಬ್ಧ ಸ್ಥಿತಿ ಇತ್ತು

ಎಸ್ಸೆಸ್ಸೆಲ್ಸಿ ಅನುತ್ತೀರ್ಣನಾಗಿದ್ದ ಬಾಲಕ, ತಂದೆ ಜೊತೆ ಗಾರೆ ಕೆಲಸಕ್ಕೆ ಹೋಗುತ್ತಿದ್ದ. ಶಾಲೆಯಲ್ಲಿ ಪರಿಚಿತಳಾಗಿದ್ದ ಬಾಲಕಿಯನ್ನು ಪ್ರೀತಿಸುತ್ತಿದ್ದ ಆತ, ಆಕೆಯೊಂದಿಗೆ ಇರುವ ಚಿತ್ರಗಳನ್ನು ವಾಟ್ಸ್‌ಆ್ಯಪ್‌ನಲ್ಲಿ ಹಾಕಿಕೊಂಡಿದ್ದ.

ಇದರಿಂದ ಕೋಪಗೊಂಡಿದ್ದ ಬಾಲಕಿಯ ಕುಟುಂಬದ ಸದಸ್ಯರು ಬುಧವಾರ ರಾತ್ರಿ ಬಾಲಕಿಯೊಂದಿಗೆ ಕರೆ ಮಾಡಿಸಿ ಬಾಲಕನನ್ನು ಅದೇ ಬಡಾವಣೆಯ 4ನೇ ಕ್ರಾಸ್‌ನಲ್ಲಿ ಇರುವ ತಮ್ಮ ಮನೆಗೆ ಕರೆಯಿಸಿಕೊಂಡಿದ್ದಾರೆ. ಕೊಠಡಿಯಲ್ಲಿ ಕೂಡಿ ಹಾಕಿ ಹಲ್ಲೆ ನಡೆಸಿದ್ದಾರೆ. ನಸುಕಿನ 3.30ರ ವೇಳೆಗೆ ಬಾಲಕನ ತಂದೆ ಮಗನನ್ನು ಹುಡುಕಿಕೊಂಡು ತೆರಳಿದ್ದಾರೆ.

ರಕ್ತಸಿಕ್ತನಾಗಿದ್ದ ಬಾಲಕನನ್ನು ಗುರುವಾರ ನಸುಕಿನಲ್ಲಿ ನಗರದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ನಂತರ ಬೆಂಗಳೂರಿನ ನಿಮ್ಹಾನ್ಸ್‌ಗೆ ದಾಖಲು ಮಾಡಲಾಗಿದೆ. ಅಲ್ಲಿ ವೆಂಟಿಲೇಟರ್ ಸಿಗದ ಪರಿಣಾಮ, ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಬಾಲಕ ಮೃತಪಟ್ಟಿದ್ದಾನೆ.

'ನಾನು ಶಿವಲಿಂಗು ಅವರ ಮನೆಗೆ ತೆರಳಿದಾಗ ಮಗನ ಮೈಯಿಂದ ರಕ್ತ ಸುರಿಯುತ್ತಿತ್ತು. ಮಗ ತಪ್ಪು ಮಾಡಿದ್ದಾನೆ, ಬುದ್ಧಿ ಕಲಿಸುತ್ತೇನೆ ಎಂದು ಶಿವಲಿಂಗು ಅವರ ಕಾಲಿಗೆ ಬಿದ್ದು ಕೇಳಿಕೊಂಡೆ. ಆದರೂ ಬಿಡದೆ ಸಿಕ್ಕಸಿಕ್ಕ ವಸ್ತುಗಳಿಂದ ಹೊಡೆದರು. ನನ್ನ ಕಣ್ಣ ಮುಂದೆಯೇ ಪ್ರಜ್ಞೆ ತಪ್ಪಿದ ಮಗ, ಮತ್ತೆ ಏಳಲೇ ಇಲ್ಲ' ಎಂದು ಬಾಲಕನ ತಂದೆ ಸತೀಶ್ ಕಣ್ಣೀರಿಟ್ಟರು.

'ಐಪಿಸಿ ಕಲಂ 302 ಅಡಿ ಪ್ರಕರಣ ದಾಖಲು ಮಾಡಲಾಗಿದೆ. ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

ಘಟನೆಯ ನಂತರ ಗುರುವಾರ ಬೆಳಿಗ್ಗೆ ಕಲ್ಲಹಳ್ಳಿ ಬಡಾವಣೆಯಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿತ್ತು. ಪರಿಸ್ಥಿತಿ ನಿಯಂತ್ರಿಸಲು ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ರೇವ್ ಪಾರ್ಟಿ: ಮಹಿಳಾ ಪೊಲೀಸ್ ಕಾನ್‌ಸ್ಟೆಬಲ್, ಪುತ್ರ ಭಾಗಿ

ಆಲೂರು (ಹಾಸನ ಜಿಲ್ಲೆ): ನಂದಿಪುರ ಎಸ್ಟೇಟ್‌ನಲ್ಲಿ ನಡೆದ ರೇವ್ ಪಾರ್ಟಿ ಪ್ರಕರಣದಲ್ಲಿ, ಮಂಗಳೂರು ಪೊಲೀಸ್ ಠಾಣೆಯ ಮಹಿಳಾ ಪೊಲೀಸ್ ಕಾನ್‌ಸ್ಟೆಬಲ್ ಮತ್ತು ಅವರ ಪುತ್ರ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ.

ಮಂಗಳೂರು ಸೈಬರ್ ಪೊಲೀಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಪೊಲೀಸ್ ಕಾನ್‌ಸ್ಟೆಬಲ್ ಶ್ರೀಲತಾ ಹಾಗೂ ಅವರ ಮಗ ಅತುಲ್, ಈ ಪಾರ್ಟಿ ಆಯೋಜಿಸಿದ್ದರು ಎಂಬ ವಿಚಾರ ತನಿಖೆಯಿಂದ ಗೊತ್ತಾಗಿದೆ.

'ಪೊಲೀಸರು ದಾಳಿ ನಡೆಸಿದ ವೇಳೆ, ಶ್ರೀಲತಾ ಸಹ ಸಿಕ್ಕಿ ಬಿದ್ದಿದ್ದರು. ಇವರ ರಕ್ತದ ಮಾದರಿ ಸಂಗ್ರಹಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಪ್ರಮುಖ ಆರೋಪಿ ಅತುಲ್ ತಲೆಮರೆಸಿಕೊಂಡಿದ್ದಾನೆ. ಎರಡು ದಿನಗಳಲ್ಲಿ ಇಬ್ಬರನ್ನೂ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗುವುದು. ಪೊಲೀಸ್ ವಶದಲ್ಲಿದ್ದ ಎಸ್ಟೇಟ್ ಮಾಲೀಕ ಗಗನ್, ಬೆಂಗಳೂರಿನ ಮುರುಗೇಶ್‌ಪಾಳ್ಯ ನಿವಾಸಿ ಸೋನಿ, ಬನ್ನೇರುಘಟ್ಟ ನಿವಾಸಿ ಪಂಕಜ್ ಅವರ ಬಳಿ ಗಾಂಜಾ ಹಾಗೂ ಇತರ ಮಾದಕ ವಸ್ತುಗಳು ಪತ್ತೆಯಾದ ಕಾರಣ, ಇವರನ್ನು ಮತ್ತೆ ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ತನಿಖೆಗಾಗಿ ಪೊಲೀಸ್ ವಶಕ್ಕೆ ಪಡೆಯಲಾಗಿದೆ' ಎಂದು ಡಿವೈಎಸ್ಪಿ ಬಿ.ಆರ್. ಗೋಪಿ ತಿಳಿಸಿದ್ದಾರೆ.


ಮೂಡಿಗೆರೆ ತಾಲ್ಲೂಕು ಕಚೇರಿ ಆವರಣದಲ್ಲಿ ಹಲಸಿನ ಮರ ಬಿದ್ದಿದ್ದು, ದ್ವಿಚಕ್ರ ವಾಹನಗಳು ಜಖಂಗೊಂಡವು

ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಜಿಲ್ಲೆಗಳು ಹಾಗೂ ಕೊಡಗಿನಲ್ಲಿ ಗುರುವಾರವೂ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಹಾಗೂ ಬಾಳೆಹೊನ್ನೂರಿನಲ್ಲಿ ಧಾರಾಕಾರ ಮಳೆಯಾಗಿದ್ದು, ಗಾಳಿ ಬೀಸಿದ್ದರಿಂದ ಮರಗಳು ನೆಲಕ್ಕುರುಳಿವೆ. ವಿವಿಧೆಡೆ ಸಂಜೆ ಐದು ಗಂಟೆಯವರೆಗೂ ಧಾರಾಕಾರ ಮಳೆಯಾಗಿದೆ.

ಗಂಗನಮಕ್ಕಿಯಲ್ಲಿ ಮಳೆ ನೀರು ರಸ್ತೆ ಮೇಲೆ ಹರಿದು ಹೆದ್ದಾರಿ ಸಂಚಾರಕ್ಕೆ ಅಡಚಣೆಯಾಯಿತು. ತತ್ಕೊಳ ಗ್ರಾಮದ ಬಳಿ ಮರ ರಸ್ತೆಗೆ ಅಡ್ಡಲಾಗಿ ಬಿದ್ದಿದ್ದರಿಂದ ಸಂಚಾರಕ್ಕೆ ಅಡ್ಡಿಯಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಹಾಗೂ ಕುಕ್ಕೆ ಸುಬ್ರಹ್ಮಣ್ಯದ ಸುತ್ತಲಿನ ಪ್ರದೇಶದಲ್ಲಿ ಗುಡುಗು ಸಹಿತ ಉತ್ತಮ ಮಳೆಯಾಗಿದೆ.

ಕೊಡಗು ಜಿಲ್ಲೆಯ ಬಾಳೆಲೆ, ಕೋಣನಕಟ್ಟೆ, ಮಾಯಮುಡಿ ಭಾಗದಲ್ಲಿ ಗುರುವಾರ ಸಂಜೆ ಉತ್ತಮ ಮಳೆಯಾಗಿದೆ. ವಿರಾಜಪೇಟೆ ಸುತ್ತಮುತ್ತ ಸಾಧಾರಣ ಮಳೆಯಾಗಿದೆ. ಚಾಮರಾಜನಗರ, ಮೈಸೂರು ಜಿಲ್ಲೆಯ ಕೆಲವೆಡೆ ತುಂತುರು ಮಳೆಯಾಗಿದೆ.

ಸಿಡಿಲು ಬಡಿದು ಕುರಿಗಾಹಿ ಸಾವು: ಮೊಳಕಾಲ್ಮುರು ತಾಲ್ಲೂಕಿನ ದೇವಸಮುದ್ರ ಬಳಿ ಬುಧವಾರ ರಾತ್ರಿ 9 ಗಂಟೆ ವೇಳೆಗೆ ಸಿಡಿಲು ಬಡಿದು ಕುರಿಗಾಹಿಯೊಬ್ಬ ಮೃತಪಟ್ಟಿದ್ದಾರೆ.

ತಾಲ್ಲೂಕಿನ ರಾಂಪುರ ಸಮೀಪದ ನಲ್ಲಾರೆಡ್ಡಿ ಕೊಂಡಾಪುರದ ಯರಿಸ್ವಾಮಿ (64) ಮೃತರು. ಹೊಲದಲ್ಲಿ ಕುರಿ ಮಂದೆ ಮಲಗಿಸಲು ಹೋಗಿದ್ದಾಗ ಸಿಡಿಲು ಬಡಿದಿದೆ.

'9ನೇ ತರಗತಿವರೆಗೆ ಪರೀಕ್ಷೆ: ಶೀಘ್ರ ತೀರ್ಮಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ 1 ರಿಂದ 9ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಮೌಲ್ಯಾಂಕನ ಪರೀಕ್ಷೆ ನಡೆಸದೆ ತೇರ್ಗಡೆ ಮಾಡುವ ಅಥವಾ ಮೌಲ್ಯಾಂಕನ ಪರೀಕ್ಷೆ ನಡೆಸುವ ಬಗ್ಗೆ ಎರಡು ದಿನಗಳಲ್ಲಿ ನಿರ್ಧರಿಸಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.

ಇಲಾಖೆ ಆಯುಕ್ತ ಅನ್ಬುಕುಮಾರ್, ಪಠ್ಯಪುಸ್ತಕ ಸಂಘದ ಅಧಿಕಾರಿಗಳು ಹಾಗೂ ರಾಜ್ಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಇಲಾಖೆ ಅಧಿಕಾರಿಗಳ ಜೊತೆ ಸಚಿವರು ಗುರುವಾರ ಸಭೆ ನಡೆಸಿದ್ದಾರೆ. ಮೌಲ್ಯಾಂಕನ ಪರೀಕ್ಷೆ ಕುರಿತು ಚರ್ಚೆ ನಡೆದರೂ, ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ ಎಂದು ಮೂಲಗಳು ಹೇಳಿವೆ.

ಸುದ್ದಿಗಾರರ ಜೊತೆ ಮಾತನಾಡಿದ ಸಚಿವರು, '3-4 ದಿನಗಳಿಂದ ರಾಜ್ಯ ಪ್ರವಾಸದಲ್ಲಿ ಇದ್ದುದ್ದರಿಂದ ಅಧಿಕಾರಿಗಳ ಜತೆ ಚರ್ಚಿಸಲು ಸಾಧ್ಯವಾಗಿಲ್ಲ. ಶೀಘ್ರ ನಿರ್ಧಾರ ಪ್ರಕಟಿಸಲಾಗುವುದು' ಎಂದರು.

ಈ ಬಾರಿಯೂ ರದ್ದು?: ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆ ರದ್ದು ಮಾಡಿರುವುದರಿಂದ ರಾಜ್ಯದಲ್ಲಿ 1ರಿಂದ 9ನೇ ತರಗತಿವರೆಗೆ ಮೌಲ್ಯಾಂಕನ ಪರೀಕ್ಷೆ ನಡೆಸದೇ ತೇರ್ಗಡೆ ಮಾಡುವ ಸಾಧ್ಯತೆಯಿದೆ ಎನ್ನಲಾಗಿದೆ.

'ಮೌಲ್ಯಾಂಕನ ಪರೀಕ್ಷೆಗೆ ಸಂಬಂಧಿಸಿ ಬುಧವಾರ ಸುತ್ತೋಲೆ ಹೊರಡಿಸಬೇಕಿತ್ತು. ಆದರೆ, ಅಂದೇ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆ ರದ್ದು ಮಾಡಿದ್ದರಿಂದ ಇಲಾಖೆ ಸುತ್ತೋಲೆಯನ್ನು ತಡೆಹಿಡಿದಿದೆ. ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ 2019-20ನೇ ಶೈಕ್ಷಣಿಕ ವರ್ಷದ ಮಾದರಿಯಲ್ಲೇ ಮೌಲ್ಯಾಂಕನ ಪರೀಕ್ಷೆ ಇಲ್ಲದೇ ತೇರ್ಗಡೆ ಮಾಡುವ ಸಾಧ್ಯತೆಯಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಮೌಲ್ಯಾಂಕನ ಪರೀಕ್ಷೆ ರದ್ದುಪಡಿಸಿದರೆ, ಈಗಾಗಲೇ ವಿದ್ಯಾರ್ಥಿಗಳಿಗೆ ನಡೆಸಿರುವ ತರಗತಿ, ಗುಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಮಾಪನದ ವಿಶ್ಲೇಷಣೆ ಆಧಾರದಲ್ಲಿ 'ವಿದ್ಯಾರ್ಥಿ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆ'ಯಲ್ಲಿ (ಎಸ್‌ಎಟಿಎಸ್) ಫಲಿತಾಂಶವನ್ನು ಅಪ್‌ಲೋಡ್ ಮಾಡುವ ಸಾಧ್ಯತೆಯಿದೆ' ಎಂದೂ ತಿಳಿಸಿದರು.

'ಮೌಲ್ಯಾಂಕನ ಪರೀಕ್ಷೆ ನಡೆಸದೇ ಇದ್ದರೆ ಶೈಕ್ಷಣಿಕ ಗುಣಮಟ್ಟ ಕುಸಿಯಲಿದೆ. ಹೀಗಾಗಿ ಮೌಲ್ಯಾಂಕನ ಪರೀಕ್ಷೆಗೆ ಅವಕಾಶ ನೀಡಬೇಕು' ಎಂದು ವಿವಿಧ ಖಾಸಗಿ ಶಾಲಾಡಳಿತ ಮಂಡಳಿಗಳ ಸಂಘಟನೆಗಳು ಆಗ್ರಹಿಸಿವೆ.

'ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಲಿ'

ಹುಬ್ಬಳ್ಳಿ: 'ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಂದೂಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಪರೀಕ್ಷೆಗಳನ್ನು ನಿಗದಿತ ವೇಳಾಪಟ್ಟಿಗೆ ಅನುಗುಣವಾಗಿ ನಡೆಸಲಿ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

ಪರೀಕ್ಷೆ ನಡೆಸಿದರೆ ಮಕ್ಕಳ ಕಲಿಕೆ ಹಾಗೂ ಮುಂದಿನ ವ್ಯಾಸಂಗಕ್ಕೆ ಅನುಕೂಲ. ಸಿಬಿಎಸ್‌ಇ ಪಠ್ಯಕ್ರಮದ 10ನೇ ತರಗತಿ ಪರೀಕ್ಷೆ ರದ್ದು ಪಡಿಸಿದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮಕ್ಕಳಿಗೆ ಪರೀಕ್ಷೆ ಏಕೆ ಎಂದು ಮಾಧ್ಯಮಗಳಲ್ಲಿ ಚರ್ಚೆಯಾಗುತ್ತಿದೆ. ಇದು ಸರಿಯಲ್ಲ. ಪ್ರಮುಖ ಹಂತಗಳ ಪರೀಕ್ಷೆಗಳಿಗೆ ವ್ಯತ್ಯಯವಾಗಬಾರದು ಎಂದಿದ್ದಾರೆ.

ಪರೀಕ್ಷೆಗಳನ್ನು ಮುಂದೂಡಿದರೆ ಮಕ್ಕಳು ಕಲಿಕೆಯ ಬಗ್ಗೆ ಆಸಕ್ತಿ ಕಳೆದುಕೊಳ್ಳುವಂತಾಗುತ್ತದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಂದಿನ ಎಲ್ಲಾ ಚಟುವಟಿಕೆಗಳಿಗೆ ಕೇಂದ್ರೀಕೃತವಾಗಿರುತ್ತದೆ. ಕೋವಿಡ್ -19 ಎಲ್ಲಾ ಸುರಕ್ಷತಾ ನಿಯಮಾವಳಿ ಪಾಲಿಸಿ ಪರೀಕ್ಷೆ ನಡೆಸುವಂತಾಗಬೇಕು ಎಂದು ಸಲಹೆ ಮಾಡಿದ್ದಾರೆ.

ಮಕ್ಕಳ ಹಿತದೃಷ್ಟಿಯಿಂದ ಚಿಂತನೆ ಮಾಡುವುದು ಎಲ್ಲರ ಸಾಮಾಜಿಕ ಹೊಣೆ ಹಾಗೂ ಜವಾಬ್ದಾರಿ.ನಕಾರಾತ್ಮಕ ಆಲೋಚನೆಗಳಿಗೆ ಮಣಿಯದೇ, ಪರೀಕ್ಷೆ ನಡೆಸಬೇಕು ಎಂದಿದ್ದಾರೆ.

ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ: 12,845 ಅರ್ಜಿ ಸ್ಥಳದಲ್ಲೇ ಇತ್ಯರ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಇಲಾಖೆ ಪ್ರತಿ ತಿಂಗಳ ಮೂರನೇ ಶನಿವಾರ ಆರಂಭಿಸಿರುವ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಕಾರ್ಯಕ್ರಮದಲ್ಲಿ ಈವರೆಗೆ 30 ಜಿಲ್ಲೆಗಳಲ್ಲಿ 25,285 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಈ ಪೈಕಿ, 12,845 ಅರ್ಜಿಗಳನ್ನು ಸ್ಥಳದಲ್ಲೇ ಇತ್ಯರ್ಥಪಡಿಸಲಾಗಿದೆ.

ಇಲಾಖೆಯ ಮಾಹಿತಿ ಪ್ರಕಾರ, ಬೆಳಗಾವಿ ಜಿಲ್ಲೆಯಲ್ಲಿ ಸ್ವೀಕರಿಸಿದ ಎಲ್ಲ 1,075 ಅರ್ಜಿಗಳನ್ನು ಅಧಿಕಾರಿಗಳು ಸ್ಥಳದಲ್ಲೇ ಇತ್ಯರ್ಥಪಡಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತೀ ಹೆಚ್ಚು 826 ಅರ್ಜಿಗಳು ಇತ್ಯರ್ಥವಾಗದೆ ಬಾಕಿ ಉಳಿದಿದೆ. ಹಾಸನದಲ್ಲಿ 808, ಬಳ್ಳಾರಿ 746, ತುಮಕೂರು 751, ವಿಜಯಪುರ 717, ಕಲಬುರ್ಗಿ 587, ಬೆಂಗಳೂರು ಗ್ರಾಮಾಂತರ 526, ಗದಗ 485, ಚಿಕ್ಕಬಳ್ಳಾಪುರ 444, ರಾಯಚೂರು 482 ಅರ್ಜಿಗಳು ಇತ್ಯರ್ಥವಾಗದೆ ಉಳಿದಿವೆ.

ಫೆಬ್ರವರಿ ಮೂರನೇ ಶನಿವಾರ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಮೊದಲ ಕಾರ್ಯಕ್ರಮ ನಡೆದಿತ್ತು. ಮಾರ್ಚ್ ಮೂರನೇ ವಾರದಲ್ಲಿಯೂ ನಡೆದಿದೆ. ಬಳಿಕ ಕೋವಿಡ್ ಹೆಚ್ಚಿದ ಕಾರಣ ಈ ಕಾರ್ಯಕ್ರಮಕ್ಕೆ ತಡೆ ಬಿದ್ದಿದೆ.

ಹಳ್ಳಿಗಳ ಜನರು ಸಣ್ಣಪುಟ್ಟ ಸಮಸ್ಯೆಗಳಿಗೂ ಜಿಲ್ಲಾಧಿಕಾರಿ, ತಹಶೀಲ್ದಾರ್ ಕಚೇರಿಗೆ ಅಲೆಯುವುದನ್ನು ತಪ್ಪಿಸಲು ಇಲಾಖೆ ಈ ಕಾರ್ಯಕ್ರಮ ರೂಪಿಸಿದೆ.

ಪಿಂಚಣಿ, ಆಶ್ರಯ ಯೋಜನೆ, ಸ್ಮಶಾನ, ಪೌತಿ ಖಾತೆ, ಪಹಣಿ ತಿದ್ದುಪಡಿ, ಭೂ ಒತ್ತುವರಿ ತೆರವು, ಮತದಾರರ ಪಟ್ಟಿ ಪರಿಷ್ಕರಣೆ, ಬರ, ಪ್ರವಾಹದ ಸಂತ್ರಸ್ತರಿಗೆ ಪರಿಹಾರ ನೀಡುವುದು, ಅರ್ಹ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್, ಪೋಡಿ ಪ್ರಕರಣ ಇತ್ಯರ್ಥದ ಬಗ್ಗೆ ಜಿಲ್ಲಾಧಿಕಾರಿಗಳ ಗ್ರಾಮ ವಾಸ್ತವ್ಯದ ಸಂದರ್ಭದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ.

'ಇತ್ಯರ್ಥವಾಗದ ಅರ್ಜಿಗಳಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ್ದವೇ ಹೆಚ್ಚಿನವು. ಹಲವು ಅರ್ಜಿಗಳನ್ನು ಇತ್ಯರ್ಥಪಡಿಸಲು ಸಂಬಂಧಿಸಿದ ವಿಭಾಗಗಳಿಗೆ ಕಳುಹಿಸಿಕೊಡಲಾಗಿದೆ. ಅರ್ಜಿಗಳನ್ನು ನಿಯಮಾನುಸಾರ ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಮುಖ್ಯಮಂತ್ರಿ' ನಾಟಕ: ಗಿನ್ನಿಸ್ ದಾಖಲೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ


'ಮುಖ್ಯಮಂತ್ರಿ' ಪಾತ್ರಧಾರಿ ಚಂದ್ರು

ಮೈಸೂರು: ಈಗಾಗಲೇ 735 ಪ್ರದರ್ಶನ ಕಂಡಿರುವ 'ಮುಖ್ಯಮಂತ್ರಿ' ನಾಟಕವನ್ನು ಗಿನ್ನಿಸ್ ದಾಖಲೆಗೆ ಸೇರಿಸಲು, ಕನ್ನಡ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕ ಹಾಗೂ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ ಸಿದ್ಧತೆ ನಡೆಸಿವೆ.

'ಏಪ್ರಿಲ್ 18ರಂದು ಸಂಜೆ 6.30ಕ್ಕೆ ಇಲ್ಲಿನ ಕಲಾಮಂದಿರದಲ್ಲಿ 736ನೇ ಪ್ರದರ್ಶನ ನಡೆಯಲಿದೆ. 41 ವರ್ಷ ಒಬ್ಬರೇ ಒಂದು ಪಾತ್ರವನ್ನು ನಿರ್ವಹಿಸಿದ್ದು, ಹವ್ಯಾಸಿ ರಂಗಭೂಮಿ ಕ್ಷೇತ್ರದಲ್ಲಿ ಇದೊಂದು ಬಗೆಯ ದಾಖಲೆ ಎನಿಸಿದೆ. ಹೀಗಾಗಿ, ಪ್ರದರ್ಶನದ ನಂತರ ಎಲ್ಲ ದಾಖಲೆಗಳನ್ನು ಗಿನ್ನಿಸ್ ಸಂಸ್ಥೆಗೆ ಸಲ್ಲಿಸಲಾಗುವುದು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಗರ ಘಟಕದ ಅಧ್ಯಕ್ಷ ಕೆ.ಎಸ್.ಶಿವರಾಮು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

18ರಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದು, ಪ್ರಮುಖ ಪಾತ್ರಧಾರಿ 'ಮುಖ್ಯಮಂತ್ರಿ' ಚಂದ್ರು ಹಾಗೂ ನಿರ್ದೇಶಕ ಬಿ.ವಿ.ರಾಜಾರಾಂ ಅವರನ್ನು ಶಾಸಕ ಎಚ್.ಪಿ.ಮಂಜುನಾಥ್ ಅಭಿನಂದಿಸುವರು. ಪ್ರೊ.ಕೃಷ್ಣೇಗೌಡ ಅಭಿನಂದನಾ ನುಡಿಗಳನ್ನಾಡಲಿದ್ದು, 'ಪ್ರಜಾವಾಣಿ' ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಹಾಗೂ ಇತರರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸುತ್ತೂರು ಮಠದ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಅವರು ಹೇಳಿದರು.

ಪುರಾತತ್ವ ಸ್ಮಾರಕಗಳ ವೀಕ್ಷಣೆ: ಮೇ 15ರ ವರೆಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಕೋವಿಡ್–19 ಹಿನ್ನೆಲೆಯಲ್ಲಿ ಜಿಲ್ಲೆಯ ಬಾದಾಮಿ, ಐಹೊಳೆ, ಪಟ್ಟದಕಲ್ಲು ಸೇರಿ ರಾಜ್ಯದಲ್ಲಿರುವ ಪುರಾತತ್ವ ಸ್ಮಾರಕಗಳ ವೀಕ್ಷಣೆಗೆ ಪ್ರವಾಸಿಗರ ಭೇಟಿಯನ್ನು ಮೇ 15ರವರೆಗೆ ನಿರ್ಬಂಧಿಸಲಾಗಿದೆ.

'ಇಲಾಖೆ ಆದೇಶದ ಪ್ರಕಾರ, ಏಪ್ರಿಲ್ 15ರಿಂದಲೇ ಅನ್ವಯವಾಗುವಂತೆ ಈ ನಿರ್ಧಾರ ಜಾರಿಗೊಳಿಸಲಾಗಿದೆ' ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಅಧಿಕಾರಿ ಮೌನೇಶ ಕುರುವತ್ತಿ ತಿಳಿಸಿದ್ದಾರೆ.

ಸೈಯದ್ ಇಸಾಕ್ ಗ್ರಂಥಾಲಯ ಮರುನಿರ್ಮಾಣಕ್ಕೆ ಪುಸ್ತಕ ಸಂಗ್ರಹಿಸುತ್ತಿರುವ ಪ್ರೊ.ಅಸಾದಿ

ದೇಶ, ವಿದೇಶಗಳಿಂದ ಪುಸ್ತಕ ದಾನ

• ಕೆ.ಓಂಕಾರ ಮೂರ್ತಿ

ಮುಖ್ಯಾಂಶಗಳು

- ಸೇಲಂನಿಂದ ಟ್ರಕ್‌ನಲ್ಲಿ ಪುಸ್ತಕ ಸಾಗಣೆ
- ಅಮೆಜಾನ್‌ನಲ್ಲೂ ಬುಕ್ ಮಾಡಿ ಕಳುಹಿಸುತ್ತಿರುವ ದಾನಿಗಳು
- ಗ್ರಂಥಾಲಯಕ್ಕೆ ಸಿ.ಸಿ.ಟಿ.ವಿ, ಕಂಪ್ಯೂಟರ್ ದಾನ

ಮೈಸೂರು: ಬೆಂಕಿಗೆ ಆಹುತಿಯಾದ ಸೈಯದ್ ಇಸಾಕ್ ಅಜ್ಜನ ಗ್ರಂಥಾಲಯವನ್ನು ಮತ್ತೆ ಕಟ್ಟಲು ಪುಸ್ತಕ ಸಂಗ್ರಹ ಕಾರ್ಯಕ್ಕೆ ಮುಂದಾಗಿರುವ ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮುಜಾಫರ್ ಅಸಾದಿ ಅವರ ಜೋಳಿಗೆಗೆ, ದೇಶ ವಿದೇಶಗಳಿಂದ ಪುಸ್ತಕಗಳು ಹರಿದು ಬರುತ್ತಿವೆ.

ತಿರುವನಂತಪುರ, ಸೇಲಂ, ವಿಶಾಖಪಟ್ಟಣ, ಮುಂಬೈ, ಜಯಪುರ, ದೆಹಲಿ, ಗುರುಗ್ರಾಮ, ಪಟಿಯಾಲ, ಕೋಲ್ಕತ್ತ, ಡಾರ್ಜಿಲಿಂಗ್, ಬೆಂಗಳೂರು, ಕೆನಡಾ, ದುಬೈ ಹಾಗೂ ಇಂಗ್ಲೆಂಡ್‌ನಿಂದಲೂ ಪುಸ್ತಕ ಪ್ರೇಮಿಗಳು ಪುಸ್ತಕಗಳನ್ನು ಕಳುಹಿಸಿಕೊಡುತ್ತಿದ್ದಾರೆ. ಕೆಲವರು ಪಾರ್ಸೆಲ್‌ನಲ್ಲಿ, ಅಂಚೆ ಮೂಲಕ, ಅಮೆಜಾನ್‌ನಲ್ಲಿ ಬುಕ್ ಮಾಡಿ ಪುಸ್ತಕಗಳನ್ನು ದಾನವಾಗಿ ನೀಡುತ್ತಿದ್ದಾರೆ.

ನಿತ್ಯ ನೂರಾರು ಸಂಖ್ಯೆಯಲ್ಲಿ ಪುಸ್ತಕಗಳು ಸಂಗ್ರಹವಾಗುತ್ತಿದ್ದು, ಮೈಸೂರು ವಿಶ್ವವಿದ್ಯಾಲಯದ ರಾಜಕೀಯ ಶಾಸ್ತ್ರ ಅಧ್ಯಯನ ವಿಭಾಗದ ಕೊಠಡಿಯಲ್ಲಿ ಜೋಡಿಸಿಡುತ್ತಿದ್ದಾರೆ. ಗ್ರಂಥಾಲಯ ಭಸ್ಮವಾದ ಮರುದಿನವೇ ಪ್ರೊ.ಅಸಾದಿ ಅವರು ಪುಸ್ತಕ ದಾನ ಮಾಡುವಂತೆ ಮನವಿ ಮಾಡಿದ್ದರು.



> ಜ್ಞಾನಕ್ಕೆ ಬೆಂಕಿ ಇಡಲು ಯಾರಿಂದಲೂ ಸಾಧ್ಯವಿಲ್ಲ. ಸೈಯದ್ ಅವರ ಗ್ರಂಥಾಲಯದಲ್ಲಿ ಹಿಂದಿಗಿಂತ ದುಪ್ಪಟ್ಟು ಸಂಖ್ಯೆಯಲ್ಲಿ ಪುಸ್ತಕ ಇರಿಸುವುದು ನನ್ನ ಗುರಿ
>
> **ಪ್ರೊ.ಮುಜಾಫರ್ ಅಸಾದಿ,** ಪ್ರಾಧ್ಯಾಪಕ, ಮೈಸೂರು ವಿಶ್ವವಿದ್ಯಾಲಯ

'ಕೆಲವರು ಹಣ ಕೊಡಲು ಮುಂದೆ ಬರುತ್ತಿದ್ದಾರೆ. ಯಾವುದೇ ಕಾರಣಕ್ಕೂ ಹಣ ಪಡೆಯುವುದಿಲ್ಲ. ಬದಲಾಗಿ ಪುಸ್ತಕ ಕಳುಹಿಸಿಕೊಡುವಂತೆ ಕೋರುತ್ತಿದ್ದೇನೆ. ಸುಮಾರು 10 ಸಾವಿರ ಪುಸ್ತಕ ಸಂಗ್ರಹವಾಗುವ ನಿರೀಕ್ಷೆಯಿದೆ. ಇಸಾಕ್ ಅವರ ಗ್ರಂಥಾಲಯದ ಮರುಸ್ಥಾಪನೆ ಇದರ ಉದ್ದೇಶ' ಎಂದು ಪ್ರೊ.ಮುಜಾಫರ್ ಅಸಾದಿ 'ಪ್ರಜಾವಾಣಿ'ಗೆ ತಿಳಿಸಿದರು.



ಸೈಯದ್ ಇಸಾಕ್ ಅವರ ಗ್ರಂಥಾಲಯಕ್ಕೆ ನೀಡಲು ಪ್ರೊ.ಮುಜಾಫರ್ ಅಸಾದಿ ಸಂಗ್ರಹಿಸುತ್ತಿರುವ ಪುಸ್ತಕಗಳು

ಈಗಾಗಲೇ ಅಂಬೇಡ್ಕರ್ ಅವರ ಜೀವನ ಕುರಿತಾದ 22 ಸಂಪುಟಗಳು ಬಂದಿವೆ. ಗಾಂಧೀಜಿ ಕುರಿತಾದ ಎಲ್ಲಾ ಪುಸ್ತಕಗಳನ್ನು ಕಳುಹಿಸಿಕೊಡುವುದಾಗಿ ಒಬ್ಬರು ಹೇಳಿದ್ದಾರೆ. ಸೇಲಂನಿಂದ ಟ್ರಕ್‌ನಲ್ಲಿ ಪುಸ್ತಕ ಕಳುಹಿಸಿಕೊಡುತ್ತಿದ್ದಾರೆ. ವಿಶಾಖಪಟ್ಟಣನಿಂದ 200 ಪುಸ್ತಕ ಪಾರ್ಸೆಲ್ ಮಾಡಿದ್ದಾರೆ. ಮಂಗಳೂರಿನ ಕೆಲವರು ಗ್ರಂಥಾಲಯಕ್ಕೆ ಸಿ.ಸಿ.ಟಿ.ವಿ ಕ್ಯಾಮೆರಾ ಹಾಗೂ ಕಂಪ್ಯೂಟರ್ ಒದಗಿಸಲು ಮುಂದೆ ಬಂದಿದ್ದಾರೆ ಎಂದರು.

'ಗ್ರಂಥಾಲಯ ಕೇವಲ ಪುಸ್ತಕಗಳ ಭಂಡಾರ ಅಲ್ಲ. ಸಂಸ್ಕೃತಿ, ಜ್ಞಾನ ಹಾಗೂ ನಾಗರಿಕತೆಯ ಸಂಗಮ. ಇಸಾಕ್ ಗ್ರಂಥಾಲಯದಲ್ಲಿ ಭಗವದ್ಗೀತೆ, ಕುರ್‌ಆನ್ ಹಾಗೂ ಬೈಬಲ್ ಇದ್ದವು. ಇದು ಸರ್ವಧರ್ಮಗಳ ಕೇಂದ್ರ ಕೂಡ. ಈ ರೀತಿಯ ವಾತಾವರಣ ಎಲ್ಲಿ ಸಿಗಲು ಸಾಧ್ಯ? ಇದು ಎಲ್ಲರೂ ಗಮನಿಸಬೇಕಾದ ಅಂಶ' ಎಂದು ನುಡಿದರು.

ಗ್ರಂಥಾಲಯಕ್ಕೆ ಬೆಂಕಿ ಇಟ್ಟ ಪ್ರಕರಣಗಳು ಇತಿಹಾಸದಲ್ಲೂ ಸಿಗುತ್ತವೆ. ಈಜಿಪ್ಟ್‌ನ ಅಲೆಕ್ಸಾಂಡ್ರಿಯಾದ ಬೃಹತ್ ಗ್ರಂಥಾಲಯವನ್ನು ಸೀಸರ್ ನಾಶ ಮಾಡಿದ್ದ. ಭಾರತದ ಇತಿಹಾಸ ಆ ಗ್ರಂಥಾಲಯದಲ್ಲಿತ್ತು. ನಳಂದ ವಿಶ್ವವಿದ್ಯಾಲಯದ ಗ್ರಂಥಾಲಯವನ್ನು ನಾಶ ಮಾಡಲಾಗಿತ್ತು ಎಂದು ಇತಿಹಾಸವನ್ನು ಮೆಲುಕು ಹಾಕಿದರು.

ಗ್ರಂಥಾಲಯ ನಿರ್ಮಾಣ–ಪ್ರತ್ಯೇಕ ಖಾತೆ

ಸೈಯದ್ ಇಸಾಕ್ ಅವರ ಗ್ರಂಥಾಲಯ ಮರುನಿರ್ಮಾಣಕ್ಕಾಗಿ ದೇಣಿಗೆ ನೀಡಲು ಬಯಸುವವರಿಗಾಗಿ ಮೈಸೂರು ನಗರ ಗ್ರಂಥಾಲಯ ಪ್ರಾಧಿಕಾರವು ಪ್ರತ್ಯೇಕ ಬ್ಯಾಂಕ್ ಖಾತೆ ತೆರೆದಿದೆ.

ದಾನಿಗಳಿಂದ ಸಂಗ್ರಹವಾಗುವ ಹಣವನ್ನು ಗ್ರಂಥಾಲಯ ಕಟ್ಟಡ ನಿರ್ಮಾಣ ಹಾಗೂ ಸ್ಥಾಪನೆಗೆ ಬಳಸಿಕೊಂಡು ಉಳಿದ ಹಣವನ್ನು ನಿಶ್ಚಿತ ಠೇವಣಿ ರೂಪದಲ್ಲಿ ಇಡಲು ನಿರ್ಧರಿಸಿದೆ. ಬಡ್ಡಿಯ ಮೊತ್ತವನ್ನು ಇಸಾಕ್ ಅವರ ಜೀವನೋಪಾಯಕ್ಕಾಗಿ ಗೌರವ ಸಂಭಾವನೆ ರೂಪದಲ್ಲಿ ನೀಡಲು ತೀರ್ಮಾನಿಸಿದೆ.

ಬ್ಯಾಂಕ್ ಖಾತೆ ವಿವರ: ಖಾತೆ ಸಂಖ್ಯೆ–40137132558, ಬ್ಯಾಂಕ್–ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಮೈಸೂರು ಮೆಡಿಕಲ್ ಕಾಲೇಜು ಶಾಖೆ), ಐಎಫ್‌ಎಸ್‌ಸಿ ಕೋಡ್: ಎಸ್‌ಬಿಐಎನ್0040875.

ಗ್ರಂಥಾಲಯವು ಬೆಂಕಿಗೆ ಆಹುತಿಯಾದ ಸ್ಥಳದಲ್ಲಿಯೇ ಹೊಸದಾಗಿ ಗ್ರಂಥಾಲಯ ನಿರ್ಮಿಸಲು ಮೈಸೂರು ಮಹಾನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ ಈಗಾಗಲೇ ತೀರ್ಮಾನ ಕೈಗೊಂಡಿವೆ.

ಬಸ್‌ಗಳ ಸಂಖ್ಯೆ ಕ್ರಮೇಣ ಹೆಚ್ಚಳ • ಬಸ್ ಹಾನಿಗೊಳಿಸಿದವರ ವಿರುದ್ಧ ಎಫ್‌ಐಆರ್

9ನೇ ದಿನಕ್ಕೆ ಮುಷ್ಕರ: ಮೇಣದ ಬತ್ತಿ ಬೆಳಗಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸಾರಿಗೆ ನೌಕರರು ಮುಷ್ಕರ ಆರಂಭಿಸಿ ಒಂಬತ್ತನೇ ದಿನವಾದ ಗುರುವಾರ ಮೇಣದ ಬತ್ತಿ ಹಿಡಿದು ಪ್ರತಿಭಟನೆ ನಡೆಸಿದರು.

'ನಮ್ಮ ಬದುಕನ್ನು ಸರ್ಕಾರ ಕತ್ತಲಲ್ಲಿ ಇಟ್ಟಿದ್ದು, 6ನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿ ಮಾಡುವ ಮೂಲಕ ಬೆಳಕನ್ನು ನೀಡಬೇಕು' ಎಂದು ನೌಕರರು ಒತ್ತಾಯಿಸಿದರು.

ನೌಕರರ ಸಂಘದ ಕಚೇರಿಗಳ ಮುಂದೆ, ಆಯಾ ನಗರದ ಪ್ರಮುಖ ವೃತ್ತಗಳಲ್ಲಿ ದೀಪ ಬೆಳಗಿ ಪ್ರತಿಭಟಿಸಿದರು. ಈ ಸ್ಥಳಗಳಲ್ಲಿ ಪ್ರತಿಭಟನಕಾರರಿಗಿಂತ ಪೊಲೀಸರ ಸಂಖ್ಯೆಯೇ ಹೆಚ್ಚಾಗಿತ್ತು. ಅಲ್ಲಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿ ಹೆಚ್ಚು ಜನ ಒಂದೆಡೆ ಸೇರದಂತೆ ಮುನ್ನೆಚ್ಚರಿಕೆ ವಹಿಸಲಾಗಿತ್ತು.

ಸಾರಿಗೆ ನೌಕರರ ಮಹಾ ಒಕ್ಕೂಟದ ಜೊತೆಗೆ, ಕನ್ನಡ ಪರ ಸಂಘಟನೆಗಳ ಸದಸ್ಯರೂ ಪ್ರತಿಭಟನೆಗೆ ಕೈ ಜೋಡಿಸಿದರು.

ಕಠಿಣ ಕ್ರಮ ಮುಂದುವರಿಕೆ: ಮನವೊಲಿಕೆಯ ಜತೆ ಜತೆಗೇ ವಜಾ, ಅಮಾನತು, ವರ್ಗಾವಣೆಯಂತಹ ಕ್ರಮಗಳನ್ನೂ ರಾಜ್ಯ ಸರ್ಕಾರ ಮುಂದುವರಿಸಿದೆ. ಎಸ್ಮಾ ನಿಯಮಗಳ ಅಡಿಯಲ್ಲಿಯೂ ಕ್ರಮ ಕೈಗೊಳ್ಳುತ್ತಿದೆ.

ಕರ್ತವ್ಯಕ್ಕೆ ಹಾಜರಾಗದವರ ವಿರುದ್ಧ ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಹೇಳಿದ್ದ ಸರ್ಕಾರ, ಸಾರ್ವಜನಿಕವಾಗಿ ನೌಕರರಿಗೆ ನೋಟಿಸ್ ಜಾರಿ ಮಾಡಿತ್ತು.

ಕೆಲಸಕ್ಕೆ ಹಾಜರಾಗದ, ಖುದ್ದಾಗಿ ಬಂದು ಸಮಜಾಯಿಷಿ ನೀಡದ ನೌಕರರ ವಿರುದ್ಧ ಕಠಿಣ ಕ್ರಮಗಳನ್ನು ಸರ್ಕಾರ ಮುಂದುವರಿಸುವ ಸಾಧ್ಯತೆಯೂ ದಟ್ಟವಾಗಿದೆ. ಮುಷ್ಕರ ಪ್ರಾರಂಭವಾದಾಗಿನಿಂದ ಈವರೆಗೆ ಕೆಎಸ್‌ಆರ್‌ಟಿಸಿಯು 15 ನೌಕರರನ್ನು ಅಮಾನತುಗೊಳಿಸಿದ್ದರೆ, 85 ನೌಕರರು ವಜಾಗೊಂಡಿದ್ದಾರೆ. ಆಯಾ ನಿಗಮಗಳಲ್ಲಿಯೂ ಕಡ್ಡಾಯ ನಿವೃತ್ತಿ ನೀಡುವ, ನೋಟಿಸ್ ಕೊಡುವ ಕಾರ್ಯ ನಡೆಯುತ್ತಿದೆ.

ಇನ್ನೊಂದೆಡೆ, ಕಾರ್ಯಾಚರಿಸುತ್ತಿರುವ ಬಸ್‌ಗಳ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಗುರುವಾರ ನಾಲ್ಕು ಸಾವಿರಕ್ಕೂ ಹೆಚ್ಚು ಸರ್ಕಾರಿ ಬಸ್‌ಗಳು ಸಂಚರಿಸಿವೆ.

ಬಸ್‌ಗೆ ಹಾನಿ–ಕ್ರಮ: ಸರ್ಕಾರಿ ಬಸ್‌ಗಳಿಗೆ ಹಾನಿ ಮಾಡುತ್ತಿರುವ ಪ್ರತಿಭಟನಕಾರರು ಮತ್ತು ನೌಕರರ ವಿರುದ್ಧ ಎಸ್ಮಾ ಅಡಿ ಎಫ್‌ಐಆರ್ ದಾಖಲಿಸಲಾಗುತ್ತಿದೆ. ನಾಲ್ಕೂ ನಿಗಮಗಳ ವ್ಯಾಪ್ತಿಯಲ್ಲಿ 67 ಬಸ್‌ಗಳಿಗೆ ಆದ ಹಾನಿಗೆ ಸಂಬಂಧಿಸಿದಂತೆ 131 ಎಫ್‌ಐಆರ್ ದಾಖಲಾಗಿದೆ. 279 ನೌಕರರು ಪ್ರಕರಣಗಳಲ್ಲಿ ಭಾಗಿಯಾಗಿದ್ದು, 69 ನೌಕರರನ್ನು ಬಂಧಿಸಲಾಗಿದೆ. ಪ್ರತಿಭಟನೆ ನಡೆಸುತ್ತಿದ್ದ ನೌಕರರು ಮತ್ತು ಅವರ ಕುಟುಂಬದವರನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ.



ಬೆಂಗಳೂರಿನ ಗಾಂಧಿನಗರದಲ್ಲಿ ಸಾರಿಗೆ ನೌಕರರು ಗುರುವಾರ ಮೇಣದ ಬತ್ತಿ ಹಿಡಿದು ಪ್ರತಿಭಟಿಸಿದರು

ಗುರುವಾರ ಕಾರ್ಯಾಚರಣೆ ನಡೆಸಿದ ಬಸ್‌ಗಳ ವಿವರ

ನಿಗಮ	ಬಸ್‌ಗಳು
ಕೆಎಸ್‌ಆರ್‌ಟಿಸಿ	2,006
ಬಿಎಂಟಿಸಿ	707
ಎನ್‌ಇಕೆಆರ್‌ಟಿಸಿ	786
ಎನ್‌ಡಬ್ಲ್ಯುಕೆಆರ್‌ಟಿಸಿ	644
ಒಟ್ಟು	4,143

ಸಾರಿಗೆ ನೌಕರರಿಗೆ ನಟ ಯಶ್ ಬೆಂಬಲ

ಸಾರಿಗೆ ನೌಕರರು ನಡೆಸುತ್ತಿರುವ ಮುಷ್ಕರಕ್ಕೆ ಸಂಬಂಧಿಸಿದಂತೆ, ನೌಕರರ ಒಕ್ಕೂಟಕ್ಕೆ ಪತ್ರ ಬರೆದಿರುವ ಚಿತ್ರನಟ ಯಶ್, 'ನಾನೂ ಚಾಲಕನ ಮಗನಾಗಿದ್ದು, ಸಾರಿಗೆ ನೌಕರರ ಸಮಸ್ಯೆ ಬಗ್ಗೆ ಅರಿವಿದೆ. ಈ ಕುರಿತು ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಸಾರಿಗೆ ಸಚಿವ ಲಕ್ಷ್ಮಣ ಸವದಿ ಅವರೊಂದಿಗೆ ಮಾತನಾಡಿದ್ದೇನೆ' ಎಂದು ತಿಳಿಸಿದ್ದಾರೆ.

'ನಾನು ನಿಮ್ಮ ಸಂಸ್ಥೆಯ ಪ್ರಾಮಾಣಿಕ ಚಾಲಕನ ಮಗ. ಹಾಗಾಗಿ ಸಾರಿಗೆ ನೌಕರರ ಕಷ್ಟ ಏನೆಂಬುದು ನನಗೆ ತಿಳಿದಿದೆ. ನ್ಯಾಯಕ್ಕಾಗಿ ಆಗ್ರಹಿಸುತ್ತಿರುವ ನೌಕರರ ಕೂಗು ಮತ್ತು ಸಾರಿಗೆ ಬಸ್ಸುಗಳ ಮೇಲೆಯೇ ಅವಲಂಬಿತವಾಗಿರುವ ಮಧ್ಯಮ ವರ್ಗದ ಜನರ ಅಳಲು ನನ್ನನ್ನು ಬಹುವಾಗಿ ಕಾಡುತ್ತಿವೆ. ವಿರಸ ಬಿಟ್ಟು ಸಾಮರಸ್ಯದಿಂದ ಮುನ್ನಡೆಯೋಣ' ಎಂದು ಹೇಳಿದ್ದಾರೆ.

ಮುಷ್ಕರಕ್ಕೆ ಬೆಂಬಲ ಕೋರಿ ಸಾರಿಗೆ ನೌಕರರ ಒಕ್ಕೂಟವು ಯಶ್ ಅವರಿಗೆ ಪತ್ರ ಬರೆದಿತ್ತು.

ಶಾಸಕರ ಮನೆ ಮುಂದೆ ಧರಣಿ ಇಂದು

ಮುಷ್ಕರ ಆರಂಭವಾದಾಗಿನಿಂದಲೂ ವಿವಿಧ ರೀತಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ಸಾರಿಗೆ ನೌಕರರ ಒಕ್ಕೂಟವು, ರಾಜ್ಯದ ಎಲ್ಲ ಶಾಸಕರ ಮನೆ ಮುಂದೆ ಶುಕ್ರವಾರ ಬೆಳಿಗ್ಗೆ ಧರಣಿ ನಡೆಸಲು ನಿರ್ಧರಿಸಿದೆ. 'ನಮ್ಮ ಬೇಡಿಕೆ ನ್ಯಾಯಯುತವಾಗಿದ್ದು, ಬೇಡಿಕೆ ಈಡೇರುವವರೆಗೆ ಪ್ರತಿಭಟನೆ ನಿಲ್ಲಿಸುವುದಿಲ್ಲ' ಎಂದೂ ಹೇಳಿದೆ.

1927 ಸಾರಿಗೆ ಸಿಬ್ಬಂದಿಗೆ ವೇತನ ಪಾವತಿ

ಕಲಬುರ್ಗಿ: ಮುಷ್ಕರ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾದ 1927 ಸಿಬ್ಬಂದಿಗೆ ಗುರುವಾರ ಮಾರ್ಚ್ ತಿಂಗಳ ವೇತನ ನೀಡಲಾಗಿದ್ದು, ಒಟ್ಟು ₹ 3.40 ಕೋಟಿ ಪಾವತಿಸಲಾಗಿದೆ ಎಂದು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಂ.ಕೂರ್ಮಾರಾವ್ ತಿಳಿಸಿದ್ದಾರೆ.

ಗುರುವಾರ ಕೂಡ 657 ಬಸ್‌ಗಳು ಕಾರ್ಯಾಚರಣೆ ನಡೆಸಿವೆ. ಇದರೊಂದಿಗೆ 321 ಖಾಸಗಿ ಬಸ್, 194 ನೆರೆ ರಾಜ್ಯಗಳ ಸರ್ಕಾರಿ ಬಸ್, 2271 ಇತರೆ ಖಾಸಗಿ ವಾಹನಗಳು ಸಂಚರಿಸಿವೆ. ಸಂಸ್ಥೆಗೆ ಇದೂವರೆಗೆ ₹40.50 ಕೋಟಿ ನಷ್ಟವಾಗಿದೆ. ಆದ್ದರಿಂದ ಎಲ್ಲ ಸಿಬ್ಬಂದಿ ಕೂಡಲೇ ಕರ್ತವ್ಯಕ್ಕೆ ಹಾಜರಾಗಬೇಕು ಎಂದೂ ಕೂರ್ಮಾರಾವ್ ಮತ್ತೊಮ್ಮೆ ಕೋರಿದ್ದಾರೆ.

ಇದರ ಮಧ್ಯೆ ಉಪಚುನಾವಣೆಗಳು ನಡೆಯುತ್ತಿರುವ ಕ್ಷೇತ್ರಗಳಿಗೂ ಬಸ್ ನೀಡಲಾಗಿದೆ. ಬೆಳಗಾವಿಗೆ 240, ಮಸ್ಕಿಗೆ 25 ಹಾಗೂ ಬಸವಕಲ್ಯಾಣಕ್ಕೆ 45 ಬಸ್‌ಗಳನ್ನು ಒದಗಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಇಸ್ರೊ ಬೇಹುಗಾರಿಕೆ ಪ್ರಕರಣ: ಹೆಚ್ಚಿನ ತನಿಖೆಗೆ 'ಸುಪ್ರೀಂ' ಆದೇಶ

ನವದೆಹಲಿ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಲ್ಲಿ (ಇಸ್ರೊ) 1994ರಲ್ಲಿ ನಡೆದಿದ್ದ ಬೇಹುಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳ ಬಗ್ಗೆ ಹೆಚ್ಚಿನ ತನಿಖೆ ನಡೆಸುವಂತೆ ಸುಪ್ರೀಂ ಕೋರ್ಟ್ ಗುರುವಾರ ಸಿಬಿಐಗೆ ಆದೇಶಿಸಿದೆ.

ಇಸ್ರೊ ಹಿರಿಯ ವಿಜ್ಞಾನಿ ನಂಬಿ ನಾರಾಯಣನ್ ಅವರಿಗೆ ಸಂಬಂಧಿಸಿದ ಈ ಪ್ರಕರಣದ ಕುರಿತು ಉನ್ನತ ಮಟ್ಟದ ಸಮಿತಿಯ ವರದಿಯನ್ನು ಸಿಬಿಐಗೆ ನೀಡಬೇಕು ಎಂದು ನ್ಯಾಯಾಲಯ ಇದೇ ಸಂದರ್ಭದಲ್ಲಿ ಸೂಚಿಸಿದೆ.

ಉನ್ನತ ಮಟ್ಟದ ಸಮಿತಿಯ ವರದಿಯನ್ನು ಪ್ರಾಥಮಿಕ ತನಿಖೆಯ ಭಾಗವಾಗಿ ಸಿಬಿಐ ಪರಿಗಣಿಸಬಹುದು ಮತ್ತು ತನಿಖಾ ವರದಿಯನ್ನು ಮೂರು ತಿಂಗಳಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ಪೀಠ ಸೂಚಿಸಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಡಿ.ಕೆ. ಜೈನ್ ಅವರ ನೇತೃತ್ವದ ತ್ರಿಸದಸ್ಯರ ಸಮಿತಿಯ ವರದಿಯನ್ನು ಎಲ್ಲಿಯೂ ಪ್ರಕಟಿಸಬಾರದು ಎಂದು ಸೂಚಿಸಲಾಗಿದೆ.



ನಂಬಿ ನಾರಾಯಣನ್

ಬೇಹುಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಉನ್ನತಮಟ್ಟದ ಸಮಿತಿಯ ವರದಿಯನ್ನು ಪರಿಗಣಿಸಬೇಕು ಎಂದು ಕೇಂದ್ರ ಸರ್ಕಾರದ ಅರ್ಜಿ ವಿಚಾರಣೆ ಸಂದರ್ಭದಲ್ಲಿ ನ್ಯಾಯಾಲಯ ಈ ಆದೇಶ ಮಾಡಿದೆ.

'ನಾರಾಯಣನ್ ಅವರ ಹೇಳಿಕೆಗಳನ್ನು ಮಾತ್ರ ದಾಖಲಿಸಲಾಗಿದೆ. ನನ್ನ ಹೇಳಿಕೆಗಳನ್ನು ಸಮಿತಿಯು ಆಲಿಸಿಲ್ಲ' ಎಂದು ಮಾಜಿ ಡಿಜಿಪಿ ಸಿಬಿ ಮ್ಯಾಥ್ಯೂಸ್ ಅವರ ವಾದವನ್ನು ನ್ಯಾಯಾಲಯ ತಿರಸ್ಕರಿಸಿದೆ. ಮ್ಯಾಥ್ಯೂಸ್ ಅವರು ಆಗ ವಿಶೇಷ ತನಿಖಾ ತಂಡದ (ಎಸ್‌ಐಟಿ) ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು.

ಸಮಿತಿಯು ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಅಧಿಕೃತ ತೀರ್ಪು ಪ್ರಕಟಿಸಿಲ್ಲ. ಆದರೆ, ಸಾಂದರ್ಭಿಕ ಸಾಕ್ಷ್ಯಗಳನ್ನು ಪರಿಗಣಿಸಿದೆ. ಅಧಿಕಾರಿಗಳ ಲೋಪಗಳ ಬಗ್ಗೆ ಪರಿಶೀಲನೆ ಮಾಡಿದೆ ಎಂದು ಪೀಠವು ಹೇಳಿದೆ.

2018ರ ಸೆಪ್ಟೆಂಬರ್ 14ರಂದು ಸುಪ್ರೀಂ ಕೋರ್ಟ್ ಈ ಸಮಿತಿಯನ್ನು ರಚಿಸಿತ್ತು. ತ್ರಿಸದಸ್ಯರ ಸಮಿತಿಯು ಇತ್ತೀಚೆಗೆ ತನ್ನ ವರದಿಯನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿತ್ತು.

ಈ ಪ್ರಕರಣದಲ್ಲಿ ನಾರಾಯಣನ್ ಅವರನ್ನು ದೋಷಮುಕ್ತಗೊಳಿಸಲಾಗಿತ್ತು. ಜತೆಗೆ, ನಾರಾಯಣನ್ ಅವರಿಗೆ ₹50 ಲಕ್ಷ ಪರಿಹಾರ ನೀಡುವಂತೆ ಕೇರಳ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು. ಕೇರಳದಲ್ಲಿನ ಹಿರಿಯ ಪೊಲೀಸ್ ಅಧಿಕಾರಿಗಳು ನಾರಾಯಣನ್ ಅವರನ್ನು ಕಾನೂನುಬಾಹಿರವಾಗಿ ಬಂಧಿಸಿದ್ದರು ಎಂದು ಸಿಬಿಐ ಹೇಳಿತ್ತು. ನಾರಾಯಣನ್ ಮೇಲಿನ ಆರೋಪ ಆಧಾರರಹಿತ ಎಂದು ಸಿಬಿಐ ಹೇಳಿತ್ತು.

ಕೇರಳ: ಬಾಲಕನ ಕೊಲೆ

ಆಲಪ್ಪುಳ (ಪಿಟಿಐ): ಪಡಯನಿವತ್ತಂನಲ್ಲಿ ಬುಧವಾರ ರಾತ್ರಿ ನಡೆದ ದೇವಾಲಯದ ಉತ್ಸವದ ಸಂದರ್ಭದಲ್ಲಿ ಜನರ ಗುಂಪೊಂದು 15 ವರ್ಷದ ಬಾಲಕನನ್ನು ಇರಿದು ಕೊಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಟೂಡೆಂಟ್ ಫೆಡರೇಷನ್ ಆಫ್ ಇಂಡಿಯಾದ (ಎಸ್‌ಎಫ್‌ಐ) ಕಾರ್ಯಕರ್ತನಾಗಿದ್ದ ಅಭಿಮನ್ಯು ಕೊಲೆಯಾದ ಬಾಲಕ. ಆರ್‌ಎಸ್‌ಎಸ್ ಸದಸ್ಯರು ಈ ಕೊಲೆ ಮಾಡಿದ್ದಾರೆ ಎಂದು ಬಾಲಕನ ಕುಟುಂಬದ ಮೂಲಗಳು ಆರೋಪಿಸಿವೆ.

'ಈ ಪ್ರಕರಣದ ಆರೋಪಿ ಸಜಯ್ ದತ್ ಬಂಧನಕ್ಕೆ ಶೋಧ ಕೈಗೊಳ್ಳಲಾಗಿದೆ. ಅಲ್ಲದೆ ಆತನ ತಂದೆ ಮತ್ತು ಸಹೋದರನನ್ನು ವಶಕ್ಕೆ ಪಡೆದು ಪ್ರಶ್ನಿಸಿದ್ದೇವೆ' ಎಂದು ಪೊಲೀಸರು ತಿಳಿಸಿದ್ದಾರೆ.

ಮಾದಕವಸ್ತು ಸಾಗಣೆ: ಪಾಕಿಸ್ತಾನದ ಎಂಟು ಮಂದಿ ಬಂಧನ

ಅಹಮದಾಬಾದ್ (ಪಿಟಿಐ): ದೋಣಿಯ ಮೂಲಕ ಮಾದಕ ವಸ್ತುಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಪಾಕಿಸ್ತಾನದ ಎಂಟು ಮಂದಿಯನ್ನು ಗುರುವಾರ ಮುಂಜಾನೆ ಬಂಧಿಸಲಾಗಿದೆ.

ಗುಜರಾತ್‌ನ ಭಯೋತ್ಪಾದಕ ನಿಗ್ರಹ ಪಡೆ (ಎಟಿಎಸ್) ಮತ್ತು ಭಾರತೀಯ ಕರಾವಳಿ ಕಾವಲು ಪಡೆ ಜಂಟಿಯಾಗಿ ಈ ಕಾರ್ಯಾಚರಣೆ ನಡೆಸಿವೆ. ಬಂಧಿತರಿಂದ 30 ಕೆ.ಜಿ ಹೆರಾಯಿನ್ ವಶಪಡಿಸಿಕೊಳ್ಳಲಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದರ ಮೌಲ್ಯ ₹150 ಕೋಟಿ ಎಂದು ಎಟಿಎಸ್ ತಿಳಿಸಿದೆ.

ಅರಬ್ಬಿ ಸಮುದ್ರದಲ್ಲಿನ ಅಂತರರಾಷ್ಟ್ರೀಯ ಸಾಗರ ಗಡಿ ರೇಖೆಯ ಸಮೀಪ ದೋಣಿಯ ಮೂಲಕ ಮಾದಕ ವಸ್ತುಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ವೇಳೆ ದಾಳಿ ನಡೆಸಲಾಗಿದೆ.

ಕ್ರೀಡಾಪಟುಗಳಿಗೆ ವೈದ್ಯಕೀಯ ಸೌಲಭ್ಯಕ್ಕೆ ಒಪ್ಪಂದ

ಬೆಂಗಳೂರು: 'ರಾಜ್ಯದಲ್ಲಿ ಪ್ರತಿಭಾವಂತ ಕ್ರೀಡಾಪಟುಗಳಿದ್ದು, ಅವರಿಗೆ ಆರೋಗ್ಯದ ಬಗ್ಗೆ ಮಾರ್ಗದರ್ಶನ ನೀಡಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ತಜ್ಞರ ಸಲಹೆ ಪಡೆಯುವ ಕಾರ್ಯಕ್ರಮ ರೂಪಿಸಲಾಗಿದೆ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಗುರುವಾರ ತಿಳಿಸಿದರು.

ವಿಕಾಸಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುಧಾಕರ್ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಅವರ ಸಮ್ಮುಖದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಕ್ರೀಡಾ ವಿಜ್ಞಾನ ಕೇಂದ್ರಗಳ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ರಾಜ್ಯದಲ್ಲಿ 34 ಕ್ರೀಡಾ ಶಾಲೆಗಳಿದ್ದು, 2,300 ಕ್ರೀಡಾಪಟುಗಳು ತರಬೇತಿ ಪಡೆಯುತ್ತಿದ್ದಾರೆ. ಇವರ ವೈದ್ಯಕೀಯ ವೆಚ್ಚವನ್ನು ಕ್ರೀಡಾ ಇಲಾಖೆ ಮರುಪಾವತಿ ಮಾಡುತ್ತಿತ್ತು. ಕಾಲಕಾಲಕ್ಕೆ ಕ್ರೀಡಾಪಟುಗಳ ವೈದ್ಯಕೀಯ ಪರೀಕ್ಷೆ ಕಷ್ಟಯವಾಗುತ್ತಿತ್ತು. ಹೀಗಾಗಿ, ಆರೋಗ್ಯ ವಿಶ್ವವಿದ್ಯಾಲಯಕ್ಕೆ ಈ ಜವಾಬ್ದಾರಿ ವಹಿಸಲಾಗಿದೆ.

ವಿಶ್ವವಿದ್ಯಾಲಯ ಆಯಾ ಜಿಲ್ಲೆಯಲ್ಲಿರುವ ವೈದ್ಯಕೀಯ ಕಾಲೇಜುಗಳ ಮೂಲಕ ಕ್ರೀಡಾ ಶಾಲೆಗಳಿಗೆ ನಿಯಮಿತವಾಗಿ ತಜ್ಞರನ್ನು ಕಳುಹಿಸಿ ಆರೋಗ್ಯ ತಪಾಸಣೆ ನಡೆಸಲಿದೆ. ಇದಕ್ಕಾಗಿ ಆಯಾ ಜಿಲ್ಲೆಯ ವೈದ್ಯಕೀಯ ಕಾಲೇಜಿನಿಂದ ಒಬ್ಬ ಸಮನ್ವಯಾಧಿಕಾರಿಯಾಗಿ ಆಯ್ಕೆ ಮಾಡಲಿದೆ. ಮೇಲ್ವಿಚಾರಣೆಗೆ ಸಮಿತಿ ರಚಿಸಲಾಗಿದೆ.

'ಕ್ರೀಡಾಪಟುಗಳು ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯವನ್ನೂ ಕಾಪಾಡಿಕೊಳ್ಳಬೇಕು. ಇದಕ್ಕೆ ತಜ್ಞರು ಮಾರ್ಗದರ್ಶನ ನೀಡುವರು. ಆಹಾರ ಕ್ರಮ, ಚಟುವಟಿಕೆ ಎಂಬ ಬಗ್ಗೆ ವಿಶ್ಲೇಷಣೆ ಮಾಡಿ, ಸಲಹೆ ನೀಡಲಾಗು ತ್ತದೆ' ಎಂದು ಸುಧಾಕರ್ ತಿಳಿಸಿದರು.

ಬೆಳಕು ತಜ್ಞ ವಿ. ರಾಮಮೂರ್ತಿ ನಿಧನ

ಬೆಂಗಳೂರು: ರಂಗಭೂಮಿಯ ಬೆಳಕು ಸಂಯೋಜನೆಯಲ್ಲಿ ನಿಷ್ಣಾತರಾಗಿದ್ದ ರಂಗಕರ್ಮಿ ವಿ. ರಾಮಮೂರ್ತಿ (85) ಅವರು ಬುಧವಾರ ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ಕೆಲ ವರ್ಷಗಳಿಂದ ವಯೋಸಹಜ ಅನಾರೋಗ್ಯ ಸಮಸ್ಯೆಗಳನ್ನೂ ಎದುರಿಸುತ್ತಿದ್ದರು. ನಾಲ್ಕು ದಿನಗಳ ಹಿಂದೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಕೊರೊನಾ ಪರೀಕ್ಷೆಯಲ್ಲಿ ಸೋಂಕಿತರಾಗಿರುವುದು ದೃಢಪಟ್ಟಿದ್ದರಿಂದ ರಾಜರಾಜೇಶ್ವರಿ ನಗರದ ಆಸ್ಪತ್ರೆಯಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಕೋವಿಡ್ ಕಾರಣ ಬಿಬಿಎಂಪಿಯು ಕೆಂಗೇರಿಯ ಚಿತಾಗಾರದಲ್ಲಿ ಗುರುವಾರ ಬೆಳಿಗ್ಗೆ 11.30ಕ್ಕೆ ಅವರ ಅಂತ್ಯಸಂಸ್ಕಾರವನ್ನು ನೆರವೇರಿಸಿತು. ಈ ವೇಳೆ ಅವರ ಕುಟುಂಬದ ಸದಸ್ಯರಿಗೆ ಕೂಡ ಸ್ಥಳದಲ್ಲಿ ಹಾಜರಿರಲು ಸಾಧ್ಯವಾಗಲಿಲ್ಲ.

ಅವಿವಾಹಿತರಾಗಿದ್ದ ರಾಮಮೂರ್ತಿ ಅವರು, ನಾಗರಬಾವಿಯಲ್ಲಿರುವ ಸಹೋದರಿಯ ನಿವಾಸದಲ್ಲಿ ವಾಸವಾಗಿದ್ದರು. ಅವರಿಗೆ ಎಂಟು ವರ್ಷಗಳ ಹಿಂದೆಯೇ ದೃಷ್ಟಿ ಮತ್ತು ಶ್ರವಣದೋಷ ಕಾಣಿಸಿಕೊಂಡಿತ್ತು. ನಿರ್ದೇಶನ, ಅಭಿನಯ, ಮೂಕಾಭಿನಯ, ರಂಗವಿನ್ಯಾಸ, ಬೆಳಕು ವಿನ್ಯಾಸ, ರಂಗಸಂಗೀತ, ಪ್ರಸಾಧನ, ವಸ್ತ್ರವಿನ್ಯಾಸ ಸೇರಿದಂತೆ ರಂಗಭೂಮಿಯ ಎಲ್ಲ ವಿಭಾಗಗಳಲ್ಲಿ ಪರಿಣತಿ ಸಾಧಿಸಿದ್ದರು.

1935ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ಅವರು, ರಾಷ್ಟ್ರೀಯ ನಾಟಕಶಾಲೆಯಿಂದ ನಿರ್ದೇಶನ ಮತ್ತು ರಂಗ ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಬಳಿಕದ ಅಮೆರಿಕ ಸರ್ಕಾರದ 'ಈಸ್ಟ್-ವೆಸ್ಟ್ ಸೆಂಟರ್'ನ ವಿದ್ಯಾರ್ಥಿವೇತನ ಪಡೆದು, ರಂಗತಂತ್ರಗಳಲ್ಲಿ ಪದವಿ ಮುಗಿಸಿದರು. 1971ರಲ್ಲಿ ನ್ಯೂಯಾರ್ಕ್‌ನ ಯು.ಎಸ್. ಇನ್‌ಸ್ಟಿಟ್ಯೂಟ್ ಫಾರ್ ಥಿಯೇಟರ್ ಟೆಕ್ನಾಲಜಿಯಲ್ಲಿ ರಂಗತಂತ್ರಜ್ಞಾನದ ಪದವಿ ಪಡೆದಿದ್ದರು. ನ್ಯೂಯಾರ್ಕ್ ನಗರ, ಅಮೆರಿಕ ಮತ್ತು ಯುರೋಪಿನ ಪ್ರಮುಖ ಕೇಂದ್ರಗಳಲ್ಲಿ ರಂಗಭೂಮಿಯ ಎಲ್ಲ ವಿಭಾಗಗಳಲ್ಲಿ ಕೆಲಸಮಾಡಿ, ಅಪಾರವಾದ ಅನುಭವ ಪಡೆದುಕೊಂಡಿದ್ದರು.



ರಾಮಮೂರ್ತಿ

ದೇಶದ ವಿವಿಧೆಡೆ 50ಕ್ಕೂ ಹೆಚ್ಚು ರಂಗಶಾಲೆಗಳಿಗೆ ಸಲಹೆಗಾರರಾಗಿ, 8 ವಿಶ್ವವಿದ್ಯಾಲಯಗಳ ರಂಗಭೂಮಿ ವಿಭಾಗಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಫಿಲಿಪ್ಸ್ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಬಿ.ವಿ. ಕಾರಂತ ಸ್ಮೃತಿ ಪುರಸ್ಕಾರ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಅವರಿಗೆ ಸಂದಿವೆ. ಇಲ್ಲಿನ ರವೀಂದ್ರ ಕಲಾಕ್ಷೇತ್ರ ಸೇರಿ ದೇಶದಾದ್ಯಂತ ಸುಮಾರು 35 ರಂಗಮಂದಿರಗಳಿಗೆ ಬೆಳಕಿನ ವ್ಯವಸ್ಥೆಯ ವಿನ್ಯಾಸ ಸಲಹೆಗಾರರಾಗಿ ಕೆಲಸ ನಿರ್ವಹಿಸಿದ್ದರು.

ಸದಾಶಿವರಾವ ಭೋಸಲೆ ಇನ್ನಿಲ್ಲ

ಬೆಳಗಾವಿ: ಸ್ವಾತಂತ್ರ್ಯ ಹೋರಾಟಗಾರ, ಮಾಜಿ ಶಾಸಕ ಹಾಗೂ ಗಾಂಧೀವಾದಿ ಸದಾಶಿವರಾವ ಬಾಪುಸಾಹೇಬ ಭೋಸಲೆ (101) ವಯೋಸಹಜ ಅನಾರೋಗ್ಯದಿಂದ ತಾಲ್ಲೂಕಿನ ಕಡೋಲಿ ಗ್ರಾಮದ ಸ್ವಗೃಹದಲ್ಲಿ ಗುರುವಾರ ನಿಧನರಾದರು.



ಸದಾಶಿವರಾವ ಭೋಸಲೆ

ಅವರಿಗೆ ಮಗ, ಸೊಸೆ, ಮಗಳು, ಅಳಿಯ ಹಾಗೂ ಮೊಮ್ಮಕ್ಕಳು ಇದ್ದಾರೆ. ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿತು. ಜಿಲ್ಲಾಡಳಿತದ ಪರವಾಗಿ ಉಪ ವಿಭಾಗಾಧಿಕಾರಿ ಅಶೋಕ ತೇಲಿ ಮತ್ತು ತಹಶೀಲ್ದಾರ್ ಶೈಲೇಂದ್ರ ಅಂತಿಮ ನಮನ ಸಲ್ಲಿಸಿದರು.

ಎರಡು ಬಾರಿ ಶಾಸಕ: ಅವರು, ಗಾಂಧೀಜಿ ಹಾಗೂ ವಿನೋಬಾ ಭಾವೆ ಅವರ ವಿಚಾರಧಾರೆಗಳಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದರು. 1946 (ಬ್ರಿಟಿಷ್ ಸರ್ಕಾರವು ಆಗ ಸಾರ್ವತ್ರಿಕ ಚುನಾವಣೆ ನಡೆಸಿತ್ತು. ಆಗ ಬೆಳಗಾವಿಯು ಮುಂಬೈ ಪ್ರಾಂತ್ಯಕ್ಕೆ ಒಳಪಟ್ಟಿತ್ತು. ಬೆಳಗಾವಿ ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿದ್ದರು) ಹಾಗೂ 1952 (ಹಿರೇಬಾಗೇವಾಡಿ ಕ್ಷೇತ್ರದಿಂದ)ರಲ್ಲಿ ಎರಡು ಬಾರಿ ಶಾಸಕರಾಗಿದ್ದರು. ಸರ್ಕಾರ ಬಡವರ ಪರ ಕೆಲಸ ಮಾಡುತ್ತಿಲ್ಲ ಎಂದು 1954ರಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಭೂದಾನ ಚಳವಳಿಯಲ್ಲಿ ಪಾಲ್ಗೊಂಡಿದ್ದರು.

ಬಡವರಿಗೆ ನೂರು ಎಕರೆ ಜಮೀನು ದಾನ ನೀಡಿದ್ದರು. ತರುಣ ಕ್ರಾಂತಿ ಶಿಬಿರ ನಡೆಸಿ, ಯುವಜನರಿಗೆ ಗಾಂಧಿ ತತ್ವದ ಬಗ್ಗೆ ತಿಳಿಸುತ್ತಿದ್ದರು. ಸಾವಯವ ಕೃಷಿ ಮಾಡುತ್ತಿದ್ದರು. ಅದನ್ನು ಪಾಲಿಸುವಂತೆ ಜಾಗೃತಿ ಮೂಡಿಸುತ್ತಿದ್ದರು. ತಮಗೆ ಹಾಗೂ ಪತ್ನಿಗೆ ಬೇಕಾಗುವ ಖಾದಿ ಬಟ್ಟೆಗಳನ್ನು ಚರಕದಲ್ಲಿ ತಾವೇ ಸಿದ್ಧಪಡಿಸಿಕೊಳ್ಳುತ್ತಿದ್ದರು. ವಯೋಸಹಜ ಕಾರಣದಿಂದಾಗಿ ಇತ್ತೀಚೆಗೆ ಕೃಷಿ, ಬಟ್ಟೆ ನೇಯ್ಕೆ ಕೈಬಿಟ್ಟಿದ್ದರು.

'ಗಾಂಧಿ ತತ್ವ ಪಾಲನೆಯು ನಮ್ಮೆಲ್ಲ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ' ಎಂದು ಪ್ರತಿಪಾದಿಸುತ್ತಿದ್ದ ಅವರು, ಅದನ್ನು ತಿಳಿಸಲು ಕಡೋಲಿ ಸಮೀಪದ ದೇವಗಿರಿಯಲ್ಲಿ ಕಟ್ಟಡ ನಿರ್ಮಿಸಿ ಗಾಂಧಿ ಘರ್' ಎಂದು ಹೆಸರಿಟ್ಟಿದ್ದರು.

ಕೋಲ್ಕತ್ತದಲ್ಲಿ ಟಿಎಂಸಿ ರೋಡ್ ಶೋ • ನಾವೇ ಒಳಗಿನವರು– ನಡ್ಡಾ • ದೀದಿ ಮರುಆಯ್ಕೆಗೆ ಜಯಾ ಮನವಿ

‘ಬಂಗಾಳದಲ್ಲಿ ಪರಿವರ್ತನೆ ಬೇಕಾಗಿಲ್ಲ’

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ‘ಬಂಗಾಳದಲ್ಲಿ ನಮಗೆ ಪರಿವರ್ತನೆ ಬೇಕಾಗಿಲ್ಲ. ದಯವಿಟ್ಟು ದೀದಿ (ಮಮತಾ ಬ್ಯಾನರ್ಜಿ) ಅವರನ್ನೇ ಮರು ಆಯ್ಕೆ ಮಾಡಿ, ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲು ಅವರಿಗೆ ನೆರವಾಗಿ’ ಎಂದು ಚಿತ್ರನಟಿ, ಸಮಾಜವಾದಿ ಪಕ್ಷದ ಸಂಸದೆ ಜಯಾ ಬಚ್ಚನ್ ಮನವಿ ಮಾಡಿದರು.

ಮಮತಾ ಬ್ಯಾನರ್ಜಿ ನೇತೃತ್ವದಲ್ಲಿ ಗುರುವಾರ ಇಲ್ಲಿ ಆಯೋಜಿಸಿದ್ದ ರೋಡ್ ಶೋದಲ್ಲಿ ಪಾಲ್ಗೊಂಡ ಬಳಿಕ ಅವರು ಮಾತನಾಡಿದರು. ಟಿಎಂಸಿ ಅಭ್ಯರ್ಥಿಗಳ ಪರವಾಗಿ ಜಯಾ ಅವರು ಕಳೆದ ಕೆಲವು ದಿನಗಳಿಂದ ಪಶ್ಚಿಮ ಬಂಗಾಳದಲ್ಲಿ ಪ್ರಚಾರ ನಡೆಸುತ್ತಿದ್ದಾರೆ.

4 ಕಿ.ಮೀ ದೂರದ ರೋಡ್ ಶೋ ದಲ್ಲಿ ಮಮತಾ ಅವರು ಗಾಲಿಕುರ್ಚಿಯಲ್ಲಿ ಸಂಚರಿಸಿದರು. ಪಕ್ಷದ ಸಾವಿರಾರು ಮಂದಿ ಕಾರ್ಯಕರ್ತರೂ ಇದ್ದರು.

ಒಳಗಿನವರು ನಾವೇ: ‘ಪಶ್ಚಿಮ ಬಂಗಾಳದಲ್ಲಿ ಟಿಎಂಸಿಯ 10 ವರ್ಷಗಳ ಆಡಳಿತಾವಧಿಯಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಭ್ರಷ್ಟಾಚಾರ ಮತ್ತು ಸುಲಿಗೆಕೋರರಿಗೆ ಮುಕ್ತ ಅವಕಾಶ ನೀಡಿದ್ದಾರೆ. ಅವರು ಅಧಿಕಾರದಿಂದ ಶಾಶ್ವತವಾಗಿ ನಿರ್ಗಮಿಸುವ ರೀತಿಯಲ್ಲಿ ಈ ಬಾರಿ ಮತದಾನ ಮಾಡಬೇಕು’ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಮನವಿ ಮಾಡಿದ್ದಾರೆ.

ನಡ್ಡಾ ಅವರು ರಾಜ್ಯದಲ್ಲಿ ಗುರುವಾರ ನಾಲ್ಕು ಪ್ರಚಾರ ರ‍್ಯಾಲಿಗಳಲ್ಲಿ ಭಾಗವಹಿಸಿದ್ದರು.

ಮಮತಾ ಅವರು ಬಿಜೆಪಿಯವರನ್ನು ‘ಹೊರಗಿನವರು’ ಎಂದು ಟೀಕಿಸುತ್ತಿರುವುದಕ್ಕೆ ಪ್ರತಿಕ್ರಿಯೆ ನೀಡಿದ ನಡ್ಡಾ, ‘ಬಂಗಾಳದ ತತ್ವಜ್ಞಾನಿಗಳ ಸಂದೇಶವನ್ನು ದೇಶದಾದ್ಯಂತ ಪ್ರಚಾರ ಮಾಡಿರುವ ನಾವೇ ನಿಜವಾದ ‘ಒಳಗಿನವರು’ ಎಂದರು.

ಸಾಯಂತನ್‌ಗೆ ನೋಟಿಸ್

ಉತ್ತರ 24ಪರಗಣ ಜಿಲ್ಲೆಯಲ್ಲಿ ಮಾಡಿರುವ ಭಾಷಣವೊಂದಕ್ಕೆ ಸಂಬಂಧಿಸಿದಂತೆ 24 ಗಂಟೆಯೊಳಗೆ ಸ್ಪಷ್ಟನೆ ನೀಡುವಂತೆ ಬಿಜೆಪಿ ಮುಖಂಡ ಸಾಯಂತನ್ ಬಸು ಅವರಿಗೆ ಚುನಾವಣಾ ಆಯೋಗ ಗುರುವಾರ ನೋಟಿಸ್ ನೀಡಿದೆ. ಚುನಾವಣಾ ರ‍್ಯಾಲಿಯೊಂದರಲ್ಲಿ ಸಾಯಂತನ್ ಅವರು, ‘ಶೋಲೆ ಸಿನಿಮಾದಲ್ಲಿ ಒಂದು ಡೈಲಾಗ್ ಇದೆ. ನೀವು ನಮ್ಮ ಕಡೆಯ ಒಬ್ಬನನ್ನು ಕೊಂದರೆ ನಿಮ್ಮಕಡೆಯ ನಾಲ್ವರನ್ನು ನಾವು ಕೊಲ್ಲುತ್ತೇವೆ... ಎಂದು. ಶೀತಲಕುಚ್ಚಿಯು ಇದಕ್ಕೆ ಸಾಕ್ಷಿಯಾಗಿದೆ....’ ಎಂದಿದ್ದರು ಎನ್ನಲಾಗಿದೆ.

‘ಈ ಭಾಷಣದ ವಿಚಾರವಾಗಿ 24 ಗಂಟೆಗಳೊಳಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು’ ಎಂದು ಚುನಾವಣಾ ಆಯೋಗ ನೀಡಿರುವ ನೋಟಿಸ್‌ನಲ್ಲಿ ಸೂಚಿಸಲಾಗಿದೆ. ಆದರೆ ಈ ಭಾಷಣದ ಧ್ವನಿಮುದ್ರಿಕೆಯಲ್ಲಿ ಕೆಲವು ಭಾಗ ಸ್ಪಷ್ಟವಾಗಿ ಕೇಳಿಸುತ್ತಿಲ್ಲ ಎನ್ನಲಾಗಿದೆ.



ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದಲ್ಲಿ ಟಿಎಂಸಿ ಕಾರ್ಯಕರ್ತರು ಕೋಲ್ಕತ್ತದಲ್ಲಿ ಗುರುವಾರ ರೋಡ್ ಶೋ ನಡೆಸಿದರು. ಸಂಸದೆ ಜಯಾ ಬಚ್ಚನ್ ಇದ್ದರು —ಪಿಟಿಐ ಚಿತ್ರ

ಮಮತಾ ಬ್ಯಾನರ್ಜಿ ವಿರುದ್ಧ ಎಫ್‌ಐಆರ್ ದಾಖಲು

ಕೂಚ್‌ಬಿಹಾರ್ (ಪಿಟಿಐ): ಕೇಂದ್ರೀಯ ಮೀಸಲುಪಡೆಗಳ ವಿರುದ್ಧ ಘೇರಾವ್ ನಡೆಸಲು ಮತದಾರರನ್ನು ಪ್ರಚೋದಿಸಿದ್ದಾರೆ ಎಂಬ ಆರೋಪದ ಮೇಲೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಗುರುವಾರ ಎಫ್‌ಐಆರ್ ದಾಖಲಿಸಲಾಗಿದೆ.

ಏ.10ರಂದು ನಡೆದ ಮತದಾನದ ಸಂದರ್ಭದಲ್ಲಿ ಇಲ್ಲಿನ ಮತಗಟ್ಟೆಯೊಂದರಲ್ಲಿ ಮತದಾರರು ಸಿಐಎಸ್‌ಎಫ್ ಪಡೆಗಳ ಮೇಲೆ ದಾಳಿ ನಡೆಸಿದ್ದರು. ಈ ಸಂದರ್ಭದಲ್ಲಿ ಸ್ವಯಂ ರಕ್ಷಣೆಗಾಗಿ ಮೀಸಲುಪಡೆಯ ಯೋಧರು ಗುಂಡು ಹಾರಿಸಿದ್ದರಿಂದ, ನಾಲ್ವರು ನಾಗರಿಕರು ಮೃತಪಟ್ಟಿದ್ದರು.

ಬಿಜೆಪಿಯ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ದೀಕ್ ಅಲಿ ಮಿಯಾ ಅವರು ಮಮತಾ ವಿರುದ್ಧ ದೂರು ನೀಡಿದ್ದಾರೆ. ‘ಚುನಾವಣೆಗೂ ಮುನ್ನ ರ‍್ಯಾಲಿಯೊಂದರಲ್ಲಿ ಮಾತನಾಡಿದ್ದ ಮಮತಾ ಅವರು ಆಡಿದ್ದ ಮಾತುಗಳು ಸಿಐಎಸ್‌ಎಫ್ ವಿರುದ್ಧ ಮತದಾರರು ಸಿಡಿದೇಳಲು ಪ್ರಚೋದಿಸಿದ್ದವು’ ಎಂದು ಸಿದ್ದೀಕ್ ಅವರು ದೂರಿನಲ್ಲಿ ಆರೋಪಿಸಿದ್ದಾರೆ. ಭಾಷಣದ ಧ್ವನಿಮುದ್ರಿಕೆಯ ಪ್ರತಿಯನ್ನೂ ಅವರು ದೂರಿನ ಜತೆಗೆ ಸಲ್ಲಿಸಿದ್ದಾರೆ.

‘ನಾಲ್ವರು ನಾಗರಿಕರ ಸಾವಿಗೆ ಮಮತಾ ಅವರೇ ಹೊಣೆ. ಪೊಲೀಸರು ಮಮತಾ ವಿರುದ್ಧ ಶೀಘ್ರದಲ್ಲೇ ಕ್ರಮ ಕೈಗೊಳ್ಳದಿದ್ದರೆ, ಅವರ ಬಂಧನಕ್ಕೆ ಆಗ್ರಹಿಸಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು’ ಎಂದು ಸಿದ್ದೀಕ್ ಅಲಿ ಹೇಳಿದ್ದಾರೆ.

ಕಾಂಗ್ರೆಸ್, ಜೆಡಿಎಸ್‌ಗೆ ದೊಡ್ಡ ಪೆಟ್ಟು: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ರಾಜ್ಯದಲ್ಲಿ ನಡೆದಿರುವ ಮೂರು ಕ್ಷೇತ್ರಗಳ ಉಪಚುನಾವಣೆ ಫಲಿತಾಂಶವು ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕತ್ವಕ್ಕೆ ದೊಡ್ಡ ಪೆಟ್ಟು ಕೊಡಲಿದೆ. ಅವರಿಗೆ ಎಲ್ಲವೂ ಅರ್ಥವಾಗಲಿದೆ’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಗುರುವಾರ ಹೇಳಿದರು.

ಬೆಂಗಳೂರಿಗೆ ವಾಪಸಾಗುವ ಮುನ್ನ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಇದನ್ನು ಹತ್ತು ಬಾರಿ ಯೋಚನೆ ಮಾಡಿ ಹೇಳುತ್ತಿದ್ದೇನೆ. ಸುಮ್ಮನೆ ಪ್ರಚಾರಕ್ಕೆ ಹೇಳುತ್ತಿಲ್ಲ’ ಎಂದರು.

‘ಉಪ ಚುನಾವಣೆ ಬಹಿರಂಗ ಪ್ರಚಾರ ಮುಗಿದಿದೆ. ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಯಾವುದೇ ಚಟುವಟಿಕೆಗಳು ಕಂಡುಬರಲಿಲ್ಲ. ಜನರು ನಮಗೆ ಸ್ಪಂದಿಸಿದ ರೀತಿ ನೋಡಿದರೆ ನಾವು ಬಹಳ ದೊಡ್ಡ ಅಂತರದಲ್ಲಿ ಗೆಲ್ಲುತ್ತೇವೆ. ಇದರಲ್ಲಿ ಯಾವುದೇ ಅನುಮಾನ ಬೇಡ’ ಎಂದು ತಿಳಿಸಿದರು.

ಜ್ವರದ ನಡುವೆಯೂ ಮುಖ್ಯಮಂತ್ರಿ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಜ್ವರ, ಸುಸ್ತು ಸಮಸ್ಯೆಗಳ ನಡುವೆಯೂ ಗುರುವಾರ ಪ್ರಚಾರ ನಡೆಸಿದರು.

ಬುಧವಾರದಿಂದಲೂ ಜ್ವರದಿಂದ ಬಳಲುತ್ತಿರುವ ಅವರು, ಚಿಕಿತ್ಸೆ ಪಡೆದು ಪ್ರಚಾರ ಮುಂದುವರಿಸಿದರು. ಗುರುವಾರ ಬೆಳಿಗ್ಗೆ ನಾಗನೂರು ರುದ್ರಾಕ್ಷಿಮಠ ಮತ್ತು ಹುಕ್ಕೇರಿ ಹಿರೇಮಠಕ್ಕೆ ಭೇಟಿ ನೀಡಿ ಶ್ರೀಗಳಿಂದ ಆಶೀರ್ವಾದ ಪಡೆದರು. ಹುಕ್ಕೇರಿ ಹಿರೇಮಠದಲ್ಲಿ ಪ್ರಮುಖ ಸ್ವಾಮೀಜಿಗಳೊಂದಿಗೆ ಗೋಪ್ಯ ಸಭೆ ನಡೆಸಿ, ಚುನಾವಣೆಯಲ್ಲಿ ಬೆಂಬಲಿಸುವಂತೆ ಕೋರಿದರು.

ಬಳಿಕ ಎಸ್‌ಪಿಎಂ ರಸ್ತೆಯಲ್ಲಿರುವ ಶಿವಾಜಿ ಉದ್ಯಾನಕ್ಕೆ ಭೇಟಿ ನೀಡಿ, ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ನಂತರ, ತೆರೆದ ವಾಹನದಲ್ಲಿ ರೋಡ್ ಷೋ ನಡೆಸಿದರು. ಮುಕ್ಕಾಲು ತಾಸಿನ ನಂತರ ಬಳಲಿಕೆಯಿಂದಾಗಿ ರೋಡ್ ಷೋ ಮೊಟಕುಗೊಳಿಸಿ, ತಾವು ತಂಗಿದ್ದ ಯುಕೆ–27 ಹೋಟೆಲ್‌ಗೆ ತೆರಳಿ ವಿಶ್ರಾಂತಿ ಪಡೆದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ರೋಡ್ ಷೋ ಮುಂದುವರಿಸಿದರು.

ಇದಕ್ಕೂ ಮುನ್ನ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಯಡಿಯೂರಪ್ಪ, ‘ಈಗ ಆರೋಗ್ಯವಾಗಿದ್ದೇನೆ. ಗುರುವಾರ ಸಂಜೆ ಬಹಿರಂಗ ಪ್ರಚಾರಕ್ಕೆ ತೆರೆಬೀಳುತ್ತದೆ’ ಎಂದರು.

ಕುರ್ಚಿ ಭದ್ರಪಡಿಸಿಕೊಂಡ ಬಿಹಾರ ಮುಖ್ಯಮಂತ್ರಿ

‘ಜತೆಗಿರುವ ಶತ್ರು’ಗೆ ನಿತೀಶ್ ತಿರುಗೇಟು

• ಅಭಯ್ ಕುಮಾರ್

ಪಟ್ನಾ: ಐದು ವಿಧಾನಸಭೆಗಳ ಚುನಾವಣೆ ಹಾಗೂ ಕೋವಿಡ್ ಎರಡನೇ ಅಲೆಯ ಬಗ್ಗೆ ಇಡೀ ದೇಶ ಚರ್ಚಿಸುತ್ತಿರುವಾಗ, ಬಿಹಾರದಲ್ಲಿ ಸದ್ದಿಲ್ಲದೆ ಕೆಲವು ವಿದ್ಯಮಾನಗಳು ನಡೆದಿವೆ. ಕಳೆದ ಕೆಲವು ತಿಂಗಳುಗಳಿಂದ ‘ತಮ್ಮ ಜೊತೆಗಿರುವ ಶತ್ರು’ವಿನಿಂದಾಗಿ ದುರ್ಬಲಗೊಂಡಿರುವ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ತಮ್ಮನ್ನು ಬಲಪಡಿಸಿಕೊಳ್ಳುವತ್ತ ದೃಢವಾದ ಹೆಜ್ಜೆ ಹಾಕಿದ್ದಾರೆ.

ಕೆಲವು ದಿನಗಳ ಹಿಂದಷ್ಟೇ ಲೋಕಜನಶಕ್ತಿ ಪಕ್ಷದ (ಎಲ್‌ಜೆಪಿ) ಏಕೈಕ ಶಾಸಕ ರಾಜ್‌ಕುಮಾರ್ ಸಿಂಗ್ ಅವರನ್ನು ಜೆಡಿಯುಗೆ ಸೇರಿಸಿಕೊಂಡು, ಪಕ್ಷದ ಮುಖ್ಯಸ್ಥ ಚಿರಾಗ್ ಪಾಸ್ವಾನ್‌ಗೆ ಏಟು ಕೊಟ್ಟಿದ್ದರು. 2020ರಲ್ಲಿ ಬಿಹಾರ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ನಿತೀಶ್ ವಿರುದ್ಧ ತಿರುಗಿಬಿದ್ದಿದ್ದ ಚಿರಾಗ್, ಜೆಡಿಯು ಅನ್ನು ಮೂರನೇ ಸ್ಥಾನಕ್ಕೆ ತಳ್ಳಿದ್ದರು. ಚಿರಾಗ್ ಪಾಸ್ವಾನ್ ಅವರ ಎಲ್‌ಜೆಪಿ ಕೂಡಾ ಒಂದಕ್ಕಿಂತ ಹೆಚ್ಚು ಸೀಟು ಗೆಲ್ಲಲಾಗದಿದ್ದರೂ, ಸುಮಾರು 70 ಕ್ಷೇತ್ರಗಳಲ್ಲಿ ಜೆಡಿಯುಗೆ ಆಘಾತ ನೀಡಿತ್ತು. ಇದರಿಂದ ಎರಡು ಅಂಶಗಳು ಸ್ಪಷ್ಟವಾಗದವು. ರಾಜ್ಯದಲ್ಲಿ ಬಿಜೆಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ನಿತೀಶ್ ಅವರು ಎನ್‌ಡಿಎ ಒಳಗೆ ಚೌಕಾಶಿ ಶಕ್ತಿಯನ್ನು ಕಳೆದುಕೊಂಡರು.

ಬಿಜೆಪಿ ಹಾಗೂ ಎಲ್‌ಜೆಪಿಯ ತಂತ್ರಗಾರಿಕೆಗಳ ಬಗ್ಗೆ ಅರಿವಿದ್ದರೂ ನಿತೀಶ್ ಮೌನವಾಗಿದ್ದರು. ಜೆಡಿಯು ವಿರುದ್ಧ ಎಲ್‌ಜೆಪಿ ಕಣಕ್ಕಿಳಿಸಿದ್ದ ಬಹುತೇಕ ಅಭ್ಯರ್ಥಿಗಳು ಬಿಜೆಪಿ ಬಂಡಾಯಗಾರರಾಗಿದ್ದರು. ಎಲ್ಲವನ್ನೂ ಗಮನಿಸುತ್ತಿದ್ದ ನಿತೀಶ್, ತಿರುಗೇಟು ನೀಡಲು ತಮ್ಮ ಸಮಯಕ್ಕಾಗಿ ಕಾಯುತ್ತಿದ್ದರು.

ಎಲ್‌ಜೆಪಿ ಶಾಸಕರನ್ನು ಸೆಳೆಯುವುದಕ್ಕೂ ಮುನ್ನ ಬಿಎಸ್‌ಪಿಯ ಏಕೈಕ ಶಾಸಕ ಜಮಾ ಖಾನ್ ಅವರನ್ನು ಪಕ್ಷಕ್ಕೆ ಕರೆಸಿಕೊಂಡ ನಿತೀಶ್, ಸಚಿವ ಸ್ಥಾನವನ್ನೂ ನೀಡಿದ್ದರು. ಪಕ್ಷೇತರ ಶಾಸಕ ಸುಮಿತ್ ಕುಮಾರ್ ಸಹ ನಿತೀಶ್ ತೆಕ್ಕೆಗೆ ಬಂದು ಮಂತ್ರಿಯೂ ಆದರು.

ಇದು ಇಷ್ಟಕ್ಕೇ ಮುಗಿಯಲಿಲ್ಲ. ಅಷ್ಟೇನೂ ಉತ್ತಮ ಬಾಂಧವ್ಯ ಹೊಂದಿರದ ಉಪೇಂದ್ರ ಕುಶ್ವಾಹ ಜತೆ ರಹಸ್ಯ ಮಾತುಕತೆ ನಡೆಯಿತು. ಕುಶ್ವಾಹ ಅವರು ತಮ್ಮ ರಾಷ್ಟ್ರೀಯ ಲೋಕ ಸಮತಾ ಪಾರ್ಟಿಯನ್ನು ಜೆಡಿಯು ಜೊತೆ ವಿಲೀನ ಮಾಡಿ ಅಚ್ಚರಿ ಮೂಡಿಸಿದರು. ಕುಶ್ವಾಹ ಅವರು ಕೋಯಿರಿ ಸಮುದಾಯಕ್ಕೆ ಹಾಗೂ ನಿತೀಶ್ ಅವರು ಒಬಿಸಿಯ ಪ್ರಬಲ ಕುರ್ಮಿ ಸಮುದಾಯಕ್ಕೆ ಸೇರಿದವರು. ‘ಲವ–ಕುಶ’ ಎಂದೇ ಕರೆಯಲಾಗುವ ಈ ಎರಡೂ ಸಮುದಾಯಗಳು ರಾಜ್ಯದ ಶೇ 10ರಷ್ಟು ಮತದಾರರನ್ನು ಹೊಂದಿವೆ. ಹೀಗೆ ನಿತೀಶ್ ಅವರು ಜಾತಿ ಸಮೀಕರಣದ ಮೂಲಕ ತಮ್ಮ ಅಡಿಪಾಯ ಭದ್ರಪಡಿಸಿಕೊಂಡರು.

ಜೊತೆಗೆ ಸ್ಥಿತಿಸ್ಥಾಪಕ ಗುಣವನ್ನೂ ನಿತೀಶ್ ಅಳವಡಿಸಿಕೊಂಡಿದ್ದಾರೆ. ಪಶ್ಚಿಮ ಬಂಗಾಳ ಚುನಾವಣೆಯ ಬಳಿಕ ಬಿಜೆಪಿಯು ತಮ್ಮ ವಿರುದ್ಧ ದಾಳಿ ಮಾಡಬಾರದು ಎಂಬ ಉದ್ದೇಶ ಇದರಲ್ಲಿ ಅಡಗಿದೆ. ಏಕೆಂದರೆ ಬಿಜೆಪಿಯು ಈಗಾಗಲೇ ತನ್ನ ಕೆಲವು ನಾಯಕರ ಮೂಲಕ ನಿತೀಶ್ ಅವರನ್ನು ಪರೀಕ್ಷೆಗೆ ಒಳಪಡಿಸುತ್ತಿದೆ. ‘ಯೋಗಿ ಆಡಳಿತ ಮಾದರಿ’ಯನ್ನು ಅನುಸರಿಸುವುದು ಹಾಗೂ ಅಪರಾಧ ಪ್ರಕರಣ ಕಡಿಮೆ ಮಾಡಲು ‘ಎನ್‌ಕೌಂಟರ್’ನಂತಹ ದಿಟ್ಟ ಕ್ರಮ ತೆಗೆದುಕೊಳ್ಳಲು ಪೊಲೀಸರಿಗೆ ಮುಕ್ತ ಅವಕಾಶ ನೀಡುವಂತೆ ನಿತೀಶ್‌ಗೆ ಸಲಹೆ ನೀಡಲಾಗಿತ್ತು. ಈ ಪ್ರಸ್ತಾವಗಳನ್ನು ಜೆಡಿಯು ನಯವಾಗಿಯೇ ತಿರಸ್ಕರಿಸಿದೆ.

ಸಲಹೆ ಎಂಬುದಕ್ಕಿಂತ ಮಿಗಿಲಾಗಿ ಇದೊಂದು ಕಿರುಕುಳದ ನಡೆ ಎಂದೇ ವಿಶ್ಲೇಷಿಸಲಾಗುತ್ತದೆ. ಬಿಜೆಪಿ ಅಧಿಕಾರದಲ್ಲಿರುವ ಆದರೆ, ಬೇರೊಂದು ಪಕ್ಷದ ಮುಖ್ಯಮಂತ್ರಿ ಅಧಿಕಾರ ನಡೆಸುತ್ತಿರುವ ರಾಜ್ಯ ಬಿಹಾರವಾಗಿದೆ. ಹೀಗಾಗಿ ಬಿಹಾರದಲ್ಲಿ ತನ್ನ ಪಕ್ಷದ ಮುಖ್ಯಮಂತ್ರಿ ಇರಬೇಕು ಎಂಬುದು ಬಿಜೆಪಿಯ ಹೆಬ್ಬಯಕೆ.



ಉಪೇಂದ್ರ ಕುಶ್ವಾಹ ಹಾಗೂ ನಿತೀಶ್ ಕುಮಾರ್

> ಬಂಗಾಳ ಚುನಾವಣೆ ಫಲಿತಾಂಶದವರೆಗೆ ಕಾಯಿರಿ. ಅಲ್ಲಿ ಅಭೂತಪೂರ್ವ ಗೆಲುವು ಸಿಕ್ಕರೆ, ಅದು ಬಿಹಾರದಲ್ಲೂ ಪ್ರತಿಫಲಿಸಲಿದೆ
> **ಹೆಸರು ಹೇಳಲಿಚ್ಛಿಸದ ಬಿಜೆಪಿ ಸಂಸದ**

> ಬಿಜೆಪಿ ಆಕ್ರಮಣಕಾರಿ ನೀತಿ ಅನುಸರಿಸುತ್ತಿದೆ ಎಂಬುದನ್ನು ಒಪ್ಪಲಾಗದು. ಆದರೆ ಮೋದಿ ಅಚ್ಚರಿ ನೀಡಿದರೂ ನೀಡಬಹುದು
> **ಅಜಯ್ ಕುಮಾರ್,** ರಾಜಕೀಯ ವಿಶ್ಲೇಷಕ

ಸತೀಶ್ ಜಾರಕಿಹೊಳಿ ಪ್ರಚಾರ

ಸಿಂಧನೂರು (ರಾಯಚೂರು ಜಿಲ್ಲೆ): ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿಯೂ ಆಗಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಗುರುವಾರ ಮಸ್ಕಿ ಕ್ಷೇತ್ರದಲ್ಲಿ ಪ್ರಚಾರ ನಡೆಸಿದರು.

ತಾಲ್ಲೂಕಿನ ಗುಂಡಾ ಗ್ರಾಮದಲ್ಲಿ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಪ್ರತಾಪಗೌಡ ಪಾಟೀಲ ಅವರಿಗೆ ಕ್ಷೇತ್ರದ ಅಭಿವೃದ್ಧಿಯ ಬದಲು ತಮ್ಮ ವೈಯಕ್ತಿಕ ಅಭಿವೃದ್ಧಿ ಬಗ್ಗೆ ಕಾಳಜಿಯಿದೆ. ಸ್ವಾಭಿಮಾನಿ ಮತದಾರರು ಅವರಿಗೆ ಪಾಠ ಕಲಿಸಬೇಕು’ ಎಂದರು.

ಕಾಂಗ್ರೆಸ್ ಅಭ್ಯರ್ಥಿ ಬಸನಗೌಡ ತುರ್ವಿಹಾಳ ಹಾಗೂ ಪಕ್ಷದ ಶಾಸಕರು, ಮುಖಂಡರು ಇದ್ದರು.



ಗುಂಡಾ ಗ್ರಾಮದಲ್ಲಿ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಸತೀಶ್ ಜಾರಕಿಹೊಳಿ ಮಾತನಾಡಿದರು. ಅಭ್ಯರ್ಥಿ ಬಸನಗೌಡ ತುರ್ವಿಹಾಳ ಇದ್ದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆರೋಪ

ಬಿಜೆಪಿ ಹಣ ಬಿಟ್ಟುಕಳಿಸಿದ ಪಿಎಸ್‌ಐ

ಪ್ರಜಾವಾಣಿ ವಾರ್ತೆ



ಶಿವಕುಮಾರ್

ಮಸ್ಕಿ (ರಾಯಚೂರು ಜಿಲ್ಲೆ): ‘ಮಸ್ಕಿ ವಿಧಾನಸಭೆ ಕ್ಷೇತ್ರದ ಮಟ್ಟೂರು ಗ್ರಾಮದಲ್ಲಿ ಬಿಜೆಪಿ ಕಾರ್ಯಕರ್ತರು ಎರಡು ಚೀಲಗಳಲ್ಲಿ ಹಣ ತಂದು ಮತದಾರರಿಗೆ ಹಂಚುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುದಗಲ್ ಠಾಣೆಯ ಪಿಎಸ್‌ಐ ಡಾಕೇಶ ಅವರನ್ನು ಕೂಡಲೇ ಅಮಾನತು ಮಾಡಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿ ಕಾರ್ಯಕರ್ತರು ಮತದಾರರಿಗೆ ಹಣ ಹಂಚುತ್ತಿದ್ದ ಸಂದರ್ಭದಲ್ಲಿ ಅವರನ್ನು ಯುವ ಕಾಂಗ್ರೆಸ್ ಕಾರ್ಯಕರ್ತರು ಹಿಡಿದಿದ್ದಾರೆ. ಆದರೆ, ಅಲ್ಲಿದ್ದ ಸಬ್ ಇನ್‌ಸ್ಪೆಕ್ಟರ್ ಡಾಕೇಶ ಒಂದು ಚೀಲ ಹಣವನ್ನು ಬಿಜೆಪಿ ಕಾರ್ಯಕರ್ತರ ಜೊತೆ ವಾಪಸ್ ಕಳಿಸಿದ್ದಾರೆ. ಮತ್ತೊಂದು ಚೀಲ ಹಣವನ್ನು ಚುನಾವಣಾಧಿಕಾರಿ ತೆಗೆದುಕೊಂಡು ಬಂದಿದ್ದಾರೆ. ಈ ಬಗ್ಗೆ ನಮ್ಮ ಕಾರ್ಯಕರ್ತರೊಬ್ಬರು ವಿಡಿಯೊ ಮಾಡಿದ್ದನ್ನು, ಬೆದರಿಸಿ ಡಿಲೀಟ್ ಮಾಡುವ ಮೂಲಕ ಸಾಕ್ಷಿ ನಾಶಪಡಿಸಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದರು.

ಈ ಬಗ್ಗೆ ಚುನಾವಣಾಧಿಕಾರಿಗೆ ದೂರು ನೀಡುತ್ತೇವೆ. ಕ್ರಮ ಕೈಗೊಳ್ಳದಿದ್ದರೆ ಹೋರಾಟ ನಡೆಸುತ್ತೇವೆ ಎಂದು ಹೇಳಿದರು.

ಪ್ರತಿ ಮತಕ್ಕೆ ₹2 ಸಾವಿರ: ಖಂಡ್ರೆ ಆರೋಪ

ಬೀದರ್: ‘ರಾಜ್ಯದ ಆಡಳಿತಾರೂಢ ಬಿಜೆಪಿ ಸರ್ಕಾರ ಬ್ರಹ್ಮಾಂಡ ಭ್ರಷ್ಟಾಚಾರ ನಡೆಸುತ್ತಿದ್ದು, ಲೂಟಿ ಮಾಡಿದ ಹಣದಿಂದ ಬಸವಕಲ್ಯಾಣ ಉಪ ಚುನಾವಣೆಯಲ್ಲಿ ಪ್ರತಿ ಮತಕ್ಕೆ ₹2 ಸಾವಿರ ಕೊಟ್ಟು ಖರೀದಿಗೆ ಮುಂದಾಗಿರುವುದು ಹೇಯ ಕೃತ್ಯವಾಗಿದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಆರೋಪಿಸಿದರು.

ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಚುನಾವಣಾ ಆಯೋಗ, ಜಿಲ್ಲಾಡಳಿತ ಹಾಗೂ ಚುನಾವಣಾ ವೀಕ್ಷಕರು ಏನು ಮಾಡುತ್ತಿದ್ದಾರೆ? ಇವರೂ ಸರ್ಕಾರದ ಕೈಗೊಂಬೆಯೇ’ ಎಂದು ಪ್ರಶ್ನಿಸಿದರು.

‘ಕಾಂಗ್ರೆಸ್‌ನಿಂದ ಹಣ ಹಂಚಿಕೆ: ಬಿಜೆಪಿಯಿಂದ ವಿಡಿಯೊ ಬಿಡುಗಡೆ’

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ‘ಮಸ್ಕಿ ಪಟ್ಟಣದ 2ನೇ ವಾರ್ಡ್ ಸೋಮನಾಥ ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮತದಾರರಿಗೆ ತಲಾ ₹ 2 ಸಾವಿರ ಹಂಚುತ್ತಿರುವುದು ವಿಡಿಯೊದಲ್ಲಿ ಸೆರೆಯಾಗಿದೆ’ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಗುರುವಾರ ಹೇಳಿದರು.

ಸುದ್ದಿಗಾರರ ಎದುರು ವಿಡಿಯೊ ದೃಶ್ಯಾವಳಿ ಬಿಡುಗಡೆಗೊಳಿಸಿದ ಅವರು, ‘ಮಸ್ಕಿಯ ಎಲ್ಲೆಡೆ ಕಾಂಗ್ರೆಸ್ ಕಾರ್ಯಕರ್ತರು ಹಣ ಹಂಚುತ್ತಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಂದಿರುವುದೇ ಹಣ ಹಂಚಲು. ಕಾರು ಮತ್ತು ಹೆಲಿಕಾಪ್ಟರ್ ಮೂಲಕ ಹಣ ತಂದಿರಬಹುದು. ತುರ್ವಿಹಾಳದಿಂದಲೂ ಕಾಂಗ್ರೆಸ್ ಕಾರ್ಯಕರ್ತರು ಮಸ್ಕಿಗೆ ಬಂದು ಹಣ ಹಂಚುತ್ತಿದ್ದಾರೆ. ಈ ಬಗ್ಗೆ ಮೂರು ವಿಡಿಯೊ ತುಣುಕು ಬಿಡುಗಡೆ ಮಾಡಿದ್ದೇವೆ’ ಎಂದು ಹೇಳಿದರು.

‘ಚುನಾವಣಾಧಿಕಾರಿ ಇದರ ಸಂಪೂರ್ಣ ತನಿಖೆ ಮಾಡಬೇಕು. ಈ ಬಗ್ಗೆ ದೂರು ಸಲ್ಲಿಸಲಾಗುತ್ತಿದೆ. ಡಿ.ಕೆ. ಶಿವಕುಮಾರ್ ಬಂದ ನಂತರವೇ ಹಣ ಹಂಚಿಕೆ ಜೋರಾಗಿದೆ’ ಎಂದು ಆರೋಪಿಸಿದರು.



ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಎನ್‌.ರವಿಕುಮಾರ್ ಅವರು ಮಸ್ಕಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಣ ಹಂಚುತ್ತಿದ್ದಾರೆ ಎನ್ನಲಾದ ವಿಡಿಯೊ ತುಣುಕುಗಳನ್ನು ಗುರುವಾರ ಬಿಡುಗಡೆಗೊಳಿಸಿದರು

ಮಸ್ಕಿ: ಒಟ್ಟು 60 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ಮಸ್ಕಿ ವಿಧಾನಸಭೆ ಉಪಚುನಾವಣೆಗೆ ಅಧಿಸೂಚನೆ ಹೊರಡಿಸಿದ ದಿನದಿಂದ ಗುರುವಾರದವರೆಗೆ (ಏಪ್ರಿಲ್ 15) 60 ಪ್ರಕರಣ ದಾಖಲಾಗಿವೆ.

ಕೋವಿಡ್–19 ನಿಯಮ ಉಲ್ಲಂಘನೆಗೆ ಸಂಬಂಧಿಸಿದ 46, ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿದರ ಕುರಿತು 14 ಪ್ರಕರಣ ಹಾಗೂ ಹಿಂಸಾಚಾರಕ್ಕೆ ಸಂಬಂಧಿಸಿದ ಏಳು ಪ್ರಕರಣಗಳನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಇದುವರೆಗೂ ಒಟ್ಟು ₹3.5 ಲಕ್ಷ ಮೌಲ್ಯದ ವಿವಿಧ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. 355 ಲೀಟರ್ ಲಿಕ್ಕರ್ ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ವೆಂಕಟೇಶ ಕುಮಾರ್ ತಿಳಿಸಿದ್ದಾರೆ.

ಬೆಂಗಳೂರಿನ ಖಾಸಗಿ ಆಸ್ಪತ್ರೆಗಳ ಆರೋಪ

ರೆಮ್‌ಡಿಸಿವಿರ್: ದುಪ್ಪಟ್ಟು ದರಕ್ಕೆ ಮಾರಾಟ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೋವಿಡ್ ಪೀಡಿತರ ಚಿಕಿತ್ಸೆಗೆ ಬಳಸುವ ‘ರೆಮ್‌ಡಿಸಿವಿರ್’ ಚುಚ್ಚುಮದ್ದಿನ ಅಭಾವ ಸೃಷ್ಟಿಯಾದ ಕಾರಣ ಮಧ್ಯವರ್ತಿಗಳು ಪ್ರತಿ ಇಂಜೆಕ್ಷನ್‌ಗೆ ₹ 15 ಸಾವಿರದಿಂದ ₹ 20 ಸಾವಿರಕ್ಕೆ ಬೇಡಿಕೆ ಇಡುತ್ತಿದ್ದಾರೆ ಎಂದು ನಗರದ ಖಾಸಗಿ ಆಸ್ಪತ್ರೆಗಳು ಆರೋಪಿಸಿವೆ.

ಗಂಭೀರವಾಗಿ ಅಸ್ವಸ್ಥರಾದ ಕೋವಿಡ್ ಪೀಡಿತರಿಗೆ ಚೇತರಿಸಿಕೊಳ್ಳಲು ರೆಮ್‌ಡಿಸಿವಿರ್ ಚುಚ್ಚುಮದ್ದು ಸಹಕಾರಿಯಾಗಿದೆ. ಕಳೆದ ವರ್ಷಾಂತ್ಯಕ್ಕೆ ಕೋವಿಡ್ ಪ್ರಕರಣಗಳು ಇಳಿಕೆ ಕಂಡ ಕಾರಣ ಈ ಔಷಧದ ಉತ್ಪಾದನೆಯನ್ನು ಕಂಪನಿಗಳು ಕಡಿಮೆ ಮಾಡಿದ್ದವು. ಈಗ ಮತ್ತೆ ಕೋವಿಡ್ ಪ್ರಕರಣಗಳು ಏರುಗತಿ ಪಡೆದ ಕಾರಣ ಔಷಧಕ್ಕೆ ಬೇಡಿಕೆ ಹೆಚ್ಚಿದೆ.


‘ಒಂದು ಬಾಟಲಿಯಲ್ಲಿ 100 ಎಂ.ಜಿ ಔಷಧ ಇರಲಿದ್ದು, ಇದರ ಗರಿಷ್ಠ ಮಾರಾಟ ದರ ₹ 4 ಸಾವಿರ ನಿಗದಿ ಮಾಡಲಾಗಿದೆ. ಒಂದು ರೋಗಿಗೆ ಆರು ಬಾಟಲಿ (ಇಂಜೆಕ್ಷನ್) ಬೇಕಾಗುತ್ತದೆ. ಇದನ್ನು ಕಾಳಸಂತೆಯಲ್ಲಿ ದುಪ್ಪಟ್ಟು ದರಕ್ಕೆ ಮಾರಾಟ ಮಾಡಲಾಗುತ್ತಿದೆ. ಬಹುತೇಕ ಆಸ್ಪತ್ರೆಗಳಲ್ಲಿ ಇದು ದಾಸ್ತಾನು ಇಲ್ಲದ ಪರಿಣಾಮ ಸಮಸ್ಯೆಯಾಗಿದೆ. ಇದನ್ನು ಔಷಧ ನಿಯಂತ್ರಕರ ಗಮನಕ್ಕೆ ತಂದರೆ ಕೂಡ ಕ್ರಮ ಜಾರಿಯಾಗಿಲ್ಲ. ಮುಂದಿನ ನಾಲ್ಕು ದಿನಗಳಿಗೆ 50 ಸಾವಿರ ಬಾಟಲಿಗಳು ಅಗತ್ಯವಿದೆ’ ಎಂದು ಖಾಸಗಿ ಆಸ್ಪತ್ರೆಗಳು ತಿಳಿಸಿವೆ.

ಶೇ 20ರಷ್ಟು ಪೂರೈಕೆ: ‘ಕೋವಿಡ್ ಪ್ರಕರಣಗಳು ಏರಿಕೆ ಕಂಡ ಕಾರಣ ಆಸ್ಪತ್ರೆಗಳಿಗೆ ದಾಖಲಾಗುವವರ ಸಂಖ್ಯೆ ಹೆಚ್ಚಳವಾಗಿದೆ. ಇದರಿಂದಾಗಿ ‘ರೆಮ್‌ಡಿಸಿವಿರ್’ ಔಷಧಕ್ಕೆ ಬೇಡಿಕೆ ಹೆಚ್ಚಾಗಿದೆ. ಒಟ್ಟು ಬೇಡಿಕೆಯಲ್ಲಿ ಶೇ 20ರಷ್ಟು ಮಾತ್ರ ಪೂರೈಕೆಯಾಗುತ್ತಿದೆ. ಮನೆಯಲ್ಲಿರುವ ರೋಗಿಗಳು ಸಹ ಔಷಧದೊಂದಿಗೆ ಬಂದು, ಚುಚ್ಚುಮದ್ದು ನೀಡುವಂತೆ ಬೇಡಿಕೆ ಇಡುತ್ತಿದ್ದಾರೆ. ಇದರಿಂದಾಗಿ ಕಾಳಸಂತೆಯಲ್ಲಿ ಔಷಧ ಮಾರಾಟವಾಗುತ್ತಿರುವುದು ಸ್ಪಷ್ಟವಾಗಿದೆ. ಸರ್ಕಾರಿ ಆಸ್ಪತ್ರೆಗಳಿಂದ ಶಿಫಾರಸು ಮಾಡುವ ರೋಗಿಗಳಿಗೆ ಬೇಕಾದ ಔಷಧವನ್ನು ಒದಗಿಸುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ’ ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

‘ಪ್ರತಿ ನಿತ್ಯ ದಾಖಲಾಗುತ್ತಿರುವ ಕೋವಿಡ್ ಪೀಡಿತರಲ್ಲಿ ಸುಮಾರು 20ರಿಂದ 30 ರೋಗಿಗಳಿಗೆ ರೆಮ್‌ಡಿಸಿವಿರ್ ಚುಚ್ಚುಮದ್ದುವಿನ ಅವಶ್ಯಕತೆ ಕಂಡುಬರುತ್ತಿದೆ. ಸಾಮಾನ್ಯವಾಗಿ ಉಸಿರಾಟದ ತೊಂದರೆ ಕಂಡುಬಂದ ಸಮಯದಲ್ಲಿ ಈ ಚುಚ್ಚುಮದ್ದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ಆದರೆ, ಈಗ ಅಭಾವ ಸೃಷ್ಟಿಯಾದ ಕಾರಣ ಅಗತ್ಯವಿರುವ ಎಲ್ಲ ರೋಗಿಗಳಿಗೆ ಈ ಚುಚ್ಚುಮದ್ದು ನೀಡಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು’ ರೀಗಲ್ ಆಸ್ಪತ್ರೆಯ ಡಾ.ಸೂರಿರಾಜು ತಿಳಿಸಿದರು.

‘ರೆಮ್‌ಡಿಸಿವಿರ್ ಚುಚ್ಚುಮದ್ದು ಹಾಗೂ ಆಮ್ಲಜನಕದ ಅಭಾವ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ಕಾಳಸಂತೆಯಲ್ಲಿ ಅಗತ್ಯ ಔಷಧದ ಮಾರಾಟವನ್ನು ಸರ್ಕಾರ ತಡೆಯಬೇಕು. ಇಲ್ಲವಾದಲ್ಲಿ ಇನ್ನಷ್ಟು ಸಮಸ್ಯೆ ಸೃಷ್ಟಿಯಾಗಲಿದೆ. ಜನತೆ ಕೂಡ ಎಚ್ಚೆತ್ತುಕೊಂಡು ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು’ ಎಂದು ಎಸಿಇ ಸುಹಾಸ್ ಆಸ್ಪತ್ರೆಯ ಜಗದೀಶ್ ಹಿರೇಮಠ ಹೇಳಿದರು.

‘ಔಷಧ ದುರ್ಬಳಕೆ ಮಾಡಿದರೆ ಕ್ರಮ’



ಬೊಮ್ಮಾಯಿ

‘ರೆಮ್‌ಡಿಸಿವಿರ್ ಔಷಧದ ಕೃತಕ ಅಭಾವ ಸೃಷ್ಟಿಸಿ, ದುಬಾರಿ ದರಕ್ಕೆ ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪಗಳು ಕೇಳಿಬಂದಿವೆ. ಇಂಥ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ. ಈ ಚುಚ್ಚುಮದ್ದಿನ ಕೃತಕ ಅಭಾವ ಸೃಷ್ಟಿಸಿ, ದುಬಾರಿ ದರಕ್ಕೆ ಮಾರಾಟ ಮಾಡಿದವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿದರು.

‘ಕೊರತೆಯಾಗದಂತೆ ಕ್ರಮ’

‘ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿಗೆ ‘ರೆಮ್‌ಡಿಸಿವಿರ್’ ಔಷಧವನ್ನು ಸಮರ್ಪಕವಾಗಿ ಪೂರೈಕೆ ಮಾಡಲು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅನ್ನು ನೋಡಲ್ ಏಜೆನ್ಸಿಯಾಗಿ ನಿಯೋಜಿಸಲಾಗಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಖಾಸಗಿ ಆಸ್ಪತ್ರೆಗಳು ಸೋಂಕಿತರ ಎಸ್‌ಆರ್‌ಎಫ್ ಐಡಿ ಮತ್ತಿತರ ವಿವರಗಳನ್ನು ಇಮೇಲ್ ಅಥವಾ ವಾಟ್ಸ್‌ಆ್ಯಪ್ ಮೂಲಕ ಒದಗಿಸಿ, ಇಂಜೆಕ್ಷನ್ ಪಡೆಯಬಹುದಾಗಿದೆ. ಸರ್ಕಾರಿ ಸಂಸ್ಥೆಗಳಲ್ಲಿ ಈ ಇಂಜೆಕ್ಷನ್ ಕೊರತೆಯಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗುವವರಿಗೆ ಅಗತ್ಯವಿದ್ದರೆ ತಕ್ಷಣ ವ್ಯವಸ್ಥೆ ಮಾಡಲಾಗುವುದು’ ಎಂದು ತಿಳಿಸಿದ್ದಾರೆ.

‘ಕೌಟುಂಬಿಕ ಹೊಣೆ, ಸಿಜೆ ಸ್ಥಾನಕ್ಕೆ ಏರಲು ಮಹಿಳೆಯರ ಹಿಂದೇಟು’



ನವದೆಹಲಿ (ಪಿಟಿಐ): ಮಹಿಳೆಯೊಬ್ಬರು ದೇಶದ ಮುಖ್ಯ ನ್ಯಾಯಮೂರ್ತಿಯಾಗುವ ಸಮಯ ಬಂದಿದೆ. ಆದರೆ ಮನೆ ಮತ್ತು ಪೋಷಕ ಜವಾಬ್ದಾರಿಗಳನ್ನು ಉಲ್ಲೇಖಿಸಿ ಮಹಿಳಾ ವಕೀಲರು ನ್ಯಾಯಮೂರ್ತಿ ಹುದ್ದೆಯನ್ನು ನಿರಾಕರಿಸಿದ್ದಾರೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ .ಬೊಬಡೆ ನೇತೃತ್ವದ ಮೂವರು ನ್ಯಾಯಮೂರ್ತಿಗಳ ಪೀಠವು ನ್ಯಾಯಮೂರ್ತಿಗಳ ಹುದ್ದೆಗೆ ಮಹಿಳಾ ವಕೀಲರನ್ನು ಆಯ್ಕೆ ಮಾಡಲು ಹೈಕೋರ್ಟ್ ಕೊಲಿಜಿಯಂ ಎದುರಿಸುತ್ತಿರುವ ಸಮಸ್ಯೆಗಳನ್ನು ಉಲ್ಲೇಖಿಸಿದೆ.

‘ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾಯಪೀಠಕ್ಕೆ ಬರಲು ವಕೀಲೆಯರನ್ನು ಕೇಳಿದಾಗ ಅವರು ಮನೆಯ ಜವಾಬ್ದಾರಿ ಅಥವಾ ಅವರ ಮಕ್ಕಳು 11 ಅಥವಾ 12ನೇ ತರಗತಿಯಲ್ಲಿ ಓದುತ್ತಿದ್ದಾರೆ ಎನ್ನುವ ಕಾರಣ ನೀಡಿ ನ್ಯಾಯಪೀಠ ಅಲಂಕರಿಸಲು ನಿರಾಕರಿಸುತ್ತಾರೆ. ಇದನ್ನು ಅವರು ನನ್ನ ಗಮನಕ್ಕೂ ತಂದಿದ್ದಾರೆ’ ಎಂದು ಮುಖ್ಯನ್ಯಾಯಮೂರ್ತಿ ಹೇಳಿದ್ದಾರೆ.

ಮುಷ್ಕರದಿಂದ ದೂರ ಉಳಿದ ಗಿಲಾನಿ ಕುಟುಂಬ

ಶ್ರೀನಗರ: ಕಾಶ್ಮೀರ ಜನತೆ ಶುಕ್ರವಾರ ಮುಷ್ಕರ ನಡೆಸಬೇಕು ಎಂದು ನೀಡಿದ್ದ ಕರೆಗೆ ಪ್ರತ್ಯೇಕತಾವಾದಿ ನಾಯಕ ಸಯ್ಯದ್ ಅಲಿ ಗಿಲಾನಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದರಿಂದ, ಅಬ್ದುಲ್ಲಾ ಗಿಲಾನಿ ನೇತೃತ್ವದ ಪಾಕಿಸ್ತಾನ ಮೂಲದ ಹುರಿಯತ್ ಸಂಘಟನೆಗೆ ಮುಜುಗರವಾಗಿದೆ. ಈ ಮುಷ್ಕರಕ್ಕೂ ತಮಗೂ ಸಂಬಂಧ ಇಲ್ಲ ಎಂದು ಸಯ್ಯದ್ ಅಲಿ ಗಿಲಾನಿ ತಿಳಿಸಿದ್ದಾರೆ.

ಇತ್ತೀಚೆಗೆ ಎನ್‌ಕೌಂಟರ್‌ಗಳಲ್ಲಿ ನಡೆದ ಹತ್ಯೆಯನ್ನು ಖಂಡಿಸಿ ಶುಕ್ರವಾರ ಮುಷ್ಕರಕ್ಕೆ ಕರೆ ನೀಡಲಾಗಿತ್ತು.

ಮುಷ್ಕರಕ್ಕೆ ಸಂಬಂಧಿಸಿದಂತೆ ಗಿಲಾನಿ ಅವರ ಹೆಸರಿನಲ್ಲಿ ಬರೆದಿರುವ ಪತ್ರವು ನಕಲಿಯಾಗಿದೆ. ಅಂತಹ ಯಾವುದೇ ಪತ್ರ ಬರೆದಿಲ್ಲ ಎಂದು ಗಿಲಾನಿ ಕುಟುಂಬ ತಿಳಿಸಿದೆ ಎಂದು ಜಮ್ಮು ಮತ್ತು ಕಾಶ್ಮೀರ ಪೊಲೀಸರು ತಿಳಿಸಿದ್ದಾರೆ.

ಅಧಿಕಾರಿಗಳ ರಹಸ್ಯ ಮಾತುಕತೆ

ನವದೆಹಲಿ (ರಾಯಿಟರ್ಸ್): ಗಡಿಯಲ್ಲಿನ ಸಮಸ್ಯೆ ಪರಿಹರಿಸಲು ಮತ್ತು ಕಾಶ್ಮೀರ ವಿಚಾರವನ್ನು ನಿಭಾಯಿಸಲು ಕಳೆದ ಜನವರಿಯಲ್ಲಿ ದುಬೈನಲ್ಲಿ ಭಾರತ ಮತ್ತು ಪಾಕಿಸ್ತಾನದ ಉನ್ನತ ಅಧಿಕಾರಿಗಳು ಸಭೆ ನಡೆಸಿದ್ದರು ಎಂದು ತಿಳಿದುಬಂದಿದೆ.

ನವದೆಹಲಿಯಲ್ಲಿ ರಾಯಿಟರ್ಸ್ ಸುದ್ದಿ ಸಂಸ್ಥೆಗೆ ಈ ಬಗ್ಗೆ ಮಾಹಿತಿ ನೀಡಿರುವ ವ್ಯಕ್ತಿಗಳು, ಮಿಲಿಟರಿ ಒಪ್ಪಂದ ಮತ್ತು ಗಡಿ ಸಮಸ್ಯೆ ನಿರ್ವಹಣೆ ಕುರಿತು ಉಭಯ ರಾಷ್ಟ್ರಗಳ ಮಧ್ಯೆ ರಹಸ್ಯವಾಗಿ ಚರ್ಚೆ ನಡೆದಿತ್ತು ಎಂದು ಹೇಳಿದ್ದಾರೆ. ಅಣ್ವಸ್ತ್ರ ಬಳಕೆ ಮತ್ತು ಶೇಖರಣೆ ಸಂಬಂಧವೂ ಭಾರತ-ಪಾಕ್ ಮಧ್ಯೆ ಶೀತಲ ಸಮರ ಏರ್ಪಟ್ಟಿದೆ. ಅಲ್ಲದೆ, ಕೇಂದ್ರ ಸರ್ಕಾರ, ಜಮ್ಮು-ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷಾಧಿಕಾರವನ್ನು ಕೂಡ ರದ್ದುಪಡಿಸಿ, ಕೇಂದ್ರಾಡಳಿತ ಪ್ರದೇಶವನ್ನಾಗಿಸಿ ಹೆಚ್ಚಿನ ನಿಯಂತ್ರಣ ಸಾಧಿಸಿದೆ.

ಇದರಿಂದಾಗಿ ಪಾಕಿಸ್ತಾನ ಅಸಮಾಧಾನಗೊಂಡಿದ್ದು, ಗಡಿಯಲ್ಲಿ ಮತ್ತೆ ಸಮಸ್ಯೆ ಸೃಷ್ಟಿಸುತ್ತಿದೆ. ಉಭಯ ರಾಷ್ಟ್ರಗಳ ಮಧ್ಯೆ ಸಂಧಾನ ನಡೆಸಿ, ದ್ವಿಪಕ್ಷೀಯ ಸಂಬಂಧ ವೃದ್ಧಿಸುವ ಉದ್ದೇಶದಿಂದ ದುಬೈನಲ್ಲಿ ರಹಸ್ಯವಾಗಿ ಉನ್ನತ ಮಟ್ಟದ ಗುಪ್ತಚರ ಅಧಿಕಾರಿಗಳು ಭೇಟಿಯಾಗಿ ಚರ್ಚಿಸಿದ್ದರು ಎಂದು ಈ ಬಗ್ಗೆ ಮಾಹಿತಿ ಇರುವ ವ್ಯಕ್ತಿಗಳು ತಿಳಿಸಿದ್ದಾರೆ.

ವೃತ್ತಿಯಲ್ಲಿ ವಿಜ್ಞಾನಿ ಆಗಿರುವ ತೇಜಸ್ ಅವರ ನಿರ್ಮಾಣ, ನಿರ್ದೇಶನ ಮತ್ತು ನಟನೆಯ ಚಿತ್ರ 'ರಿವೈಂಡ್' ಬಿಡುಗಡೆ ಆಗಿದೆ. 'ಮೀಸೆ ಚಿಗುರಿದಾಗ'ದಲ್ಲಿ ನಾಯಕನಾಗಿದ್ದ ಅವರು ಕೆಲಕಾಲದ ಅಂತರದ ಬಳಿಕ ಬೆಳ್ಳಿತೆರೆಗೆ ಬಂದಿದ್ದಾರೆ. ಅವರ ಸಿನಿಬದುಕಿನ 'ರಿವೈಂಡ್' ಮತ್ತು 'ಪ್ಲೇ' ಇಲ್ಲಿದೆ.

ವಿಜ್ಞಾನಿಯ ಸಿನಿಬದುಕಿನ 'ರಿವೈಂಡ್'



ತೇಜು

ಶರತ್ ಹೆಗ್ಡೆ

● ವಿಜ್ಞಾನಿಗೆ ಸಿನಿಮಾ ಗೀಳು ಹೇಗೆ ಬಂತು?

ನಾನು ಕಲಾವಿದೆ ಪ್ರಮೀಳಾ ಜೋಷಾಯ್ ಅವರ ತಮ್ಮನ ಮಗ. ಶಂಕರ್‌ನಾಗ್, ಡಾ.ರಾಜ್‌ಕುಮಾರ್, ರವಿ ಅವರ ತಂಡದ ಸಿನಿಮಾಗಳ ಶೂಟಿಂಗ್ ನೋಡಲು ಹೋಗುತ್ತಿದ್ದೆ. ಜೊತೆ ಬೇಸಿಗೆ ರಜೆಯಲ್ಲಿ ಮಾತ್ರ ನನ್ನ ತಾಯಿ ಶೂಟಿಂಗ್ ಸ್ಥಳಕ್ಕೆ ಹೋಗಲು ಬಿಡುತ್ತಿದ್ದರು. ಹಾಗೆ ಹೋಗಿದ್ದಾಗ ಮೈಸೂರಿನಲ್ಲಿ ಶಂಕರ್‌ನಾಗ್ ಅಭಿನಯದ 'ಮಹೇಶ್ವರ್' ಚಿತ್ರದಲ್ಲಿ ಚಿತ್ರದಲ್ಲಿ ಶಂಕರ್‌ನಾಗ್ ಅವರ ಬಾಲ್ಯದ ಸನ್ನಿವೇಶದ ಪಾತ್ರಕ್ಕೆ ಅವಕಾಶ ಸಿಕ್ಕಿತು. ಅದೆಲ್ಲಾ ನೆನೆಸಿಕೊಂಡಾಗ ಈಗ ಆಶ್ಚರ್ಯ ಆಗುತ್ತದೆ. ಅವರೆಲ್ಲರ ಜತೆ ಎರಡು ವಾರ ಕಳೆದಿದ್ದೆ.

ಪತ್ರಿಕಾ ಛಾಯಾಗ್ರಾಹಕ ಕೆ.ಎನ್. ನಾಗೇಶ್‌ಕುಮಾರ್ ಅವರು ಯಾವುದೋ ಸಮಾರಂಭದಲ್ಲಿ ನನ್ನ ಫೋಟೊ ತೆಗೆದಿದ್ದರು. ಅದನ್ನು ನೋಡಿ ಪ್ರವೀಣ್ ನಾಯಕ್ ಅವರು ಚಿತ್ರದಲ್ಲಿ ಅಭಿನಯಿಸುವಂತೆ ಕೋರಿದರು. 'ಮೀಸೆ ಚಿಗುರಿದಾಗ' ಚಿತ್ರ ನಾನು ಎಂಜಿನಿಯರಿಂಗ್ ಓದುತ್ತಿದ್ದಾಗ ಒಂದು ಸೆಮಿಸ್ಟರ್‌ನಲ್ಲಿ ಸಿಗುವ ಮಧ್ಯಂತರ ರಜೆಯ ಅವಧಿಯಲ್ಲಿ ಮಾಡಿದ್ದು.

ನಮ್ಮದು ಮಧ್ಯಮವರ್ಗದ ಕುಟುಂಬ. ನಮಗೆ ಉದ್ಯೋಗ ಬಹಳ ಮುಖ್ಯ. ಎಂಜಿನಿಯರಿಂಗ್, ಎಂಬಿಎ ಆಯಿತು. ಪಿಎಚ್.ಡಿ ಮುಗಿಸಿದೆ. ಗೂಗಲ್, ಮೈಕ್ರೋಸಾಫ್ಟ್ ಕಂಪನಿಗಳಲ್ಲಿ ಕೆಲಸ ಮಾಡಿದೆ. ಈ ನಡುವೆ ಕನ್ನಡ ಸಿನಿಮಾ ಮಾಡಬೇಕು ಎಂಬ ಆಸೆ ಇತ್ತು. ಆದರೆ, ನನಗೆ ನಿರೀಕ್ಷೆಗಳು ದೊಡ್ಡಮಟ್ಟದಲ್ಲಿ ಇವೆ. ಆದ್ದರಿಂದ ನನಗೆ ಬಂದ ಅವಕಾಶಗಳು ಯಾವುವೂ ಕೂಡಾ ನನಗೆ ಹೊಂದಾಣಿಕೆ ಆಗುತ್ತಿರಲಿಲ್ಲ. ಹಾಗೆ ತಮಿಳಿನಲ್ಲಿ ಕೆ.ಟಿ. ಕುಂಜುಮೋನ್ ಅನ್ನುವ ನಿರ್ಮಾಪಕರ ಕಡೆಯಿಂದ ಅವಕಾಶ ಬಂತು. ತಮಿಳಿನಲ್ಲಿ ನಾಲ್ಕು ಸಿನಿಮಾ ಮಾಡಿದೆ. ಒಂದು ಚಿತ್ರ ನಿರ್ಮಿಸಿದೆ.

ಈಗ ಕೆಜಿಎಫ್, ಯುಟರ್ನ್‌ನಂತಹ ಹಲವಾರು ಚಿತ್ರಗಳು ಕನ್ನಡ ಚಿತ್ರರಂಗವನ್ನು ಅತ್ಯಂತ ಉನ್ನತಮಟ್ಟಕ್ಕೆ ಕೊಂಡೊಯ್ದಿವೆ. ಇದು ನಾನು ಚಿತ್ರರಂಗಕ್ಕೆ ಮತ್ತೆ ಪ್ರವೇಶಿಸಲು ಸರಿಯಾದ ಸಮಯ ಎಂದು ಭಾವಿಸಿದ್ದೇನೆ. ಆ ಎಲ್ಲ ಸಿದ್ಧತೆಗಳ ಫಲವೇ 'ರಿವೈಂಡ್'.

● ಏನಿದು 'ರಿವೈಂಡ್'?

ಇದು ಕುಟುಂಬ ಪ್ರಧಾನ ಚಿತ್ರ. ದೃಶ್ಯಂ ಮಾದರಿಯದ್ದು. ನಾವೆಲ್ಲಾ ಈಗ ಕೊರೊನಾದಂಥ ಆತಂಕದ ನಡುವೆ ಇದ್ದೇವೆ. ಕೊರೊನಾ ಇಲ್ಲದ ಕಾಲಘಟ್ಟದಲ್ಲಿ ನಾವು ಹೇಗಿದ್ದೆವು ಎಂಬುದನ್ನು ನೆನಪಿಸಿಕೊಳ್ಳುವ ಅವಕಾಶ ಈಗ ಸಿಕ್ಕಿದೆ. ಅದೇ ರೀತಿ ಈ ಚಿತ್ರದಲ್ಲಿ ನನ್ನದು ಪತ್ರಕರ್ತನ ಪತ್ರ. ವೈಟ್ ಕಾಲರ್ ಅಪರಾಧಗಳ ಬಗೆಗೆ ವರದಿ ಮಾಡುವುದು ಅವನ ಕೆಲಸ. ಶತ್ರುಗಳಿಂದ ತನ್ನ ಕುಟುಂಬವನ್ನು ರಕ್ಷಿಸಿಕೊಳ್ಳುತ್ತಾ ವೃತ್ತಿಧರ್ಮ ಪಾಲಿಸುವ ಪಾತ್ರ ಇದು.

'ರಿವೈಂಡ್' ಎಂದು ಹೇಳಿ ಫಾರ್ವರ್ಡ್ ಟ್ಯಾಗ್ ಹಾಕಿದ್ದೇನೆ. ಏಕೆಂದರೆ ಜೀವನದಲ್ಲಿ ನಾವು ಹಿಂದೆ ನೋಡಿಕೊಂಡು ಮುಂದೆ ಸಾಗಬೇಕು ಎಂದು ಅದರ ಅರ್ಥ.

● ಆತಂಕದ ದಿನಗಳಲ್ಲೇ ಚಿತ್ರ ಬಿಡುಗಡೆ ಮಾಡುತ್ತಿದ್ದೀರಿ?

ಹೌದು. ಕೊರೊನಾ ಆತಂಕ ಇದೆ ನಿಜ. ಈ ವೇಳೆ 7 ಸಿನಿಮಾಗಳು ಬಿಡುಗಡೆಗೆ ಕಾದಿದ್ದವು. ಆದರೆ, ಶೇ 50 ಆಸನ ಭರ್ತಿಗೆ ಅವಕಾಶ ಎಂದಾಕ್ಷಣ ಐದು ಸಿನಿಮಾಗಳು ಬಿಡುಗಡೆಯನ್ನು ಮುಂದಕ್ಕೆ ಹಾಕಿದರು. 'ರಿವೈಂಡ್' ಮತ್ತು 'ಕೃಷ್ಣಾ ಟಾಕೀಸ್' ಎರಡೇ ಚಿತ್ರಗಳು ಬಿಡುಗಡೆ ಆಗುತ್ತಿವೆ. ಹಾಗಾಗಿ ನಮ್ಮ ಸಿನಿಮಾಗಳಿಗೆ ಪ್ರೇಕ್ಷಕರ ಕೊರತೆ ಎದುರಾಗದು. ಆದರೆ ಪ್ರೇಕ್ಷಕರ ಮನಸ್ಥಿತಿ ಬದಲಾಯಿಸುವುದೇ ಸವಾಲು. ಪ್ರೇಕ್ಷಕರು ಮುಂಜಾಗ್ರತಾ ಕ್ರಮಗಳ ಜತೆ ಸಕಾರಾತ್ಮಕ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಕುಟುಂಬ ಸಮೇತ ಸಿನಿಮಾ ನೋಡಬೇಕು. ಜನ ಸಿನಿಮಾ ನೋಡಿದರೆ ನಮ್ಮ ಪರಿಶ್ರಮವನ್ನು ಗೌರವಿಸಿದ ಪುಣ್ಯ ಸಿಗುತ್ತದೆ.

● ಸಹ ಕಲಾವಿದರ ಬಗ್ಗೆ?

ನಾಯಕಿ ಚಂದನಾ, 'ಸಿಂಧೂರ' ಧಾರಾವಾಹಿಯಲ್ಲಿ ಅಭಿನಯಿಸಿದ್ದರು. ಇನ್ನು ಸಂಪತ್ ಮೈತ್ರೇಯ ಒಳ್ಳೆಯ ಪರ್ಫಾರ್ಮರ್. ಹೀಗೆ ಹಲವಾರು ಜನ ಸಹಕಲಾವಿದರು ಒಳ್ಳೆಯ ರೀತಿ ಕೆಲಸ ಮಾಡಿದ್ದಾರೆ. ಸರಿಯಾದ ಯೋಜನೆ ಇದ್ದ ಕಾರಣ, ಸೀಮಿತ ಅವಧಿಯ ಒಳಗೆ ಶೂಟಿಂಗ್ ಹಾಗೂ ಇತರ ಕೆಲಸಗಳು ಮುಗಿದಿವೆ.

● ನಿರ್ಮಾಣ, ನಿರ್ದೇಶಕರೂ ನೀವೇ ಇದ್ದೀರಿ

ನಾನು ಪಾತ್ರದ ಜತೆಗೆ ಹಲವು ಜವಾಬ್ದಾರಿ ನಿಭಾಯಿಸಿದ್ದೇನೆ. ನಿರ್ಮಾಪಕ ಮತ್ತು ನಿರ್ದೇಶಕ. ಮೊದಲು ನಿರ್ಮಾಪಕನಾಗಿ ಗೆಲ್ಲಬೇಕು. ನಿರ್ಮಾಪಕ ಗೆದ್ದರೆ ಮತ್ತೆ ಹೊಸ ನಿರ್ದೇಶಕ, ನಾಯಕರನ್ನು ಸೃಷ್ಟಿಸಬಲ್ಲ. ನೋಡಿ, ಇಲ್ಲಿ ಶೂಟಿಂಗ್ ವೇಳೆ ಪದೇಪದೇ ಮೇಕಪ್, ಟಚ್‌ಅಪ್ ಇಲ್ಲದೆ ನಟಿಸಿದ್ದೇನೆ. ಶೂಟಿಂಗ್ ಆಗುವಾಗ ಇದೊಂದು ಕೊರತೆ ಅನಿಸಿತ್ತು. ಆದರೆ, ನಿರ್ಮಾಣ ಪೂರ್ಣಗೊಂಡಾಗ ತುಂಬಾ ಸಹಜವಾಗಿಯೇ ಬಂದಿದೆ. ಎಲ್ಲರ ಪಾತ್ರವೂ ನೈಜವಾಗಿ ಬಂದಿದೆ.

* ಪೂರ್ಣ ಸಂದರ್ಶನವನ್ನು **ಕನ್ನಡಧ್ವನಿ** ಪ್ರಜಾವಾಣಿ ಪಾಡ್‌ಕಾಸ್ಟ್‌ನಲ್ಲಿ ಕೇಳಿ.

'ಕೃಷ್ಣ ಟಾಕೀಸ್'ನಲ್ಲಿ 'ಅಪೂರ್ವ' ಜೋಡಿ!



ಅಪೂರ್ವ

ಅಭಿಲಾಷ್ ಪಿ.ಎಸ್.

'ಪ್ರೀತಿಯ ರಾಯಭಾರಿ' ಎಂದೇ ಕರೆಸಿಕೊಳ್ಳುವ ನಟ ಅಜಯ್ ರಾವ್ ಜೊತೆಗೂಡಿ ನಟಿ ಅಪೂರ್ವ, ಹಾರರ್ ಥ್ರಿಲ್ಲರ್ 'ಕೃಷ್ಣ ಟಾಕೀಸ್'ಗೆ ಹೆಜ್ಜೆ ಇಟ್ಟಿದ್ದಾರೆ. ಬಬ್ಲಿ ಬಬ್ಲಿಯಾಗೇ ಇರುವ ತಮ್ಮ ನಿಜಜೀವನವನ್ನೇ ಚಿತ್ರದಲ್ಲಿನ ಪಾತ್ರಕ್ಕೂ ಅಪೂರ್ವ ತುಂಬಿಸಿದ್ದಾರೆ. ಸಿನಿ ಪಯಣದ ಬ್ರೇಕ್, ಚಿತ್ರದ ಆಯ್ಕೆ, ತಮ್ಮ ಪಾತ್ರದ ಕುರಿತು ಅವರು 'ಸಿನಿಮಾ ಪುರವಣಿ' ಜೊತೆಗೆ ಮಾತಿಗಿಳಿದರು.

'ಅಪೂರ್ವ' ಚಿತ್ರದ ಬಳಿಕ ಬ್ರೇಕ್ ಯಾಕೆ ಆಯ್ತು ಎಂದರೆ, ಆ ವೇಳೆಯಲ್ಲಿ ನಾನು ಮೊದಲ ವರ್ಷದ ಬಿ.ಕಾಂ. ವಿದ್ಯಾರ್ಥಿನಿ. ಶಿಕ್ಷಣ ಇನ್ನೂ ಪೂರ್ಣಗೊಂಡಿರಲಿಲ್ಲ. ಈ ಸಂದರ್ಭದಲ್ಲಿ ಕುಟುಂಬದವರು, 'ಸಿನಿಮಾ ಕ್ಷೇತ್ರಕ್ಕೆ ಹೋಗುವುದಾದರೆ ಮೊದಲು ಶಿಕ್ಷಣ ಪೂರ್ಣಗೊಳಿಸು' ಎಂದು ಹೇಳಿದರು. ಇದನ್ನು ನಾನು ಗೌರವಿಸಿ, ಮೈಸೂರಿಗೆ ವಾಪಸ್ ಬಂದು ಶಿಕ್ಷಣ ಪೂರ್ಣಗೊಳಿಸಿದೆ. ನನ್ನ ಆಸಕ್ತಿಯ ಕ್ಷೇತ್ರ ನಟನೆ ಎಂದು ಕುಟುಂಬದವರಿಗೂ ಮನದಟ್ಟಾದಾಗ ಅವರು ಮತ್ತಷ್ಟು ಪ್ರೋತ್ಸಾಹ ನೀಡಿದರು ಎನ್ನುತ್ತಾರೆ ಅಪೂರ್ವ.

ಹೆಚ್ಚು ಚ್ಯೂಸಿ ಅಲ್ಲ

'ಶಿಕ್ಷಣ ಮುಗಿಸಿದ ಬಳಿಕ ಸಿನಿಮಾದವರ ಸಂಪರ್ಕ ಇರಲಿಲ್ಲ. ಈ ಸಂದರ್ಭದಲ್ಲಿ ವಿಕ್ಟರಿ-2 ಆಫರ್ ಬಂತು. ನಂತರದಲ್ಲಿ 'ಕೃಷ್ಣ ಟಾಕೀಸ್', 'ಕಾಲಾಪತ್ಥರ್' ಅವಕಾಶವೂ ಬಂದಿತು. ಈಗ, ಚಿತ್ರದ ಕಥೆಯನ್ನು ನೋಡುತ್ತೇನೆ. ಏಕೆಂದರೆ ಚಂದನವನಕ್ಕೆ ನಾನು ಪ್ರವೇಶಿಸಿದ್ದು ಲೆಜೆಂಡ್ ಜೊತೆಗೆ ನಟನೆ ಮಾಡಿ. ಆ ಸಂದರ್ಭದಲ್ಲಿ ಚಿತ್ರದ ಕಥೆಗೆ ನನ್ನ ಆದ್ಯತೆ ಇರಲಿಲ್ಲ. ಏಕೆಂದರೆ, ರವಿಚಂದ್ರನ್ ಅವರ ಜೊತೆ ನಟಿಸುವ ಅವಕಾಶಕ್ಕಿಂತ ಇನ್ನೇನು ಬೇಕು? ಅದೇ ಖುಷಿ ಇತ್ತು. ಹೀಗಾಗಿ, ಮುಂದೆಯೂ ಒಳ್ಳೆಯ ನಟ, ನಿರ್ದೇಶಕರ ಜೊತೆ ಯಶಸ್ವೀ ಸಿನಿಮಾ ಮಾಡುವ ಒಂದು ಇಚ್ಛೆ ಎಲ್ಲರಿಗೂ ಇರುತ್ತದೆ. ನಂತರದಲ್ಲಿ ಒಂದು ಒಳ್ಳೆಯ ತಂಡಕ್ಕಾಗಿ ಕಾಯುತ್ತಿದ್ದೆ. ಹೀಗೆ ಸಿಕ್ಕಿದ ತಂಡ 'ವಿಕ್ಟರಿ-2', 'ಕೃಷ್ಣ ಟಾಕೀಸ್' ಎಂದು ವಿವರಿಸಿದರು.

ಪ್ರೇಕ್ಷಕರ ನಿರ್ಬಂಧದ ನಡುವೆಯೇ ಚಿತ್ರ ಬಿಡುಗಡೆ ಕುರಿತು ಮಾತನಾಡಿರುವ ಅಪೂರ್ವ, 'ಕಳೆದ ಡಿಸೆಂಬರ್‌ನಲ್ಲೇ ಚಿತ್ರದ ಬಿಡುಗಡೆ ಆಗಬೇಕಿತ್ತು. ಆದರೆ ಲಾಕ್‌ಡೌನ್, ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳ ಕಾರಣದಿಂದ ಮುಂದಕ್ಕೆ ಹೋಯಿತು. ಇದಾದ ನಂತರ ಸ್ಟಾರ್‌ನಟರ ಚಿತ್ರಗಳ ಬಿಡುಗಡೆಯಾಯಿತು. ಇನ್ನೇನು ನಮ್ಮ ಚಿತ್ರ ಬಿಡುಗಡೆ ಆಗಬೇಕು ಎನ್ನುವಾಗ, ಪ್ರೇಕ್ಷಕರ ಸಂಖ್ಯೆ ನಿರ್ಬಂಧ ಆದೇಶ ಹೊರಬಿದ್ದಿದೆ. ನಮ್ಮ ನಿರ್ಮಾಪಕರ ಸಾಹಸ ಮೆಚ್ಚಬೇಕು. ನಮಗೇ ಒಂದು ರೀತಿ ಹಿಂಜರಿಕೆ ಇದೆ. ಆದರೆ, ಅವರು ಚಿತ್ರದ ಮೇಲೆ ನಂಬಿಕೆ ಇಟ್ಟಿದ್ದಾರೆ. ಹೀಗಾಗಿ ಇದು ಗೆಲ್ಲಬೇಕು. ಒಂದೂವರೆ ವರ್ಷದಿಂದ ಕಾದಿರುವ ನಿರ್ಮಾಪಕರಿಗೆ ಒಳ್ಳೆಯದಾಗಬೇಕು. ಜನರು ನಿರ್ಭಯವಾಗಿ ಚಿತ್ರಮಂದಿರಗಳಿಗೆ ಬಂದು ಚಿತ್ರ ನೋಡಿ ಪ್ರೋತ್ಸಾಹಿಸಬೇಕು' ಎಂದು ಮನವಿ ಮಾಡಿದರು.

ನಾನು ಅಜಯ್ ರಾವ್ ಫ್ಯಾನ್!

'ಎಕ್ಸ್‌ಕ್ಯೂಸ್ ಮಿ' ಚಿತ್ರದಿಂದ ನಾನು ಅಜಯ್ ಅವರ ಅಭಿಮಾನಿ. ತುಂಬಾ ಸರಳವಾಗಿ ಇರುತ್ತಾರೆ. ಅವರಿಂದ ಕಲಿಯಬೇಕಾದ ಹಲವು ವಿಷಯಗಳಿವೆ. ಅವರ ಜೊತೆಗೆ ಕೆಲಸ ಮಾಡಿರುವ ಖುಷಿ ಇದೆ. ತುಂಬಾ ಒಳ್ಳೆಯ ಸಹಕಲಾವಿದ ಎಂದು ಮೆಚ್ಚುಗೆಯಿಂದ ಹೇಳಿದರು.

ಚಿತ್ರದಲ್ಲಿನ ತಮ್ಮ ಪಾತ್ರದ ಬಗ್ಗೆ ವಿವರಿಸಿದ ಅವರು, 'ಚಿತ್ರದಲ್ಲಿ ಸಿಟಿ ಹುಡುಗಿಯ ಪಾತ್ರವನ್ನು ನಾನು ಮಾಡುತ್ತಿದ್ದೇನೆ. ಇವತ್ತಿನ ಟ್ರೆಂಡ್‌ನಲ್ಲಿ ಬಬ್ಲಿ ಹುಡುಗಿಯ ಪಾತ್ರ ಇದು. ನಗರದಿಂದ ಹಳ್ಳಿಗೆ ಹೋಗುವ ಹುಡುಗಿ, ಹೀರೊನಿಗೆ ಹೇಳುವ ಮಾತು ಮುಂದೆ ಯಾವ ರೀತಿ ತಿರುವುಗಳನ್ನು ಪಡೆಯುತ್ತದೆ, ಆತ ತೆಗೆದುಕೊಳ್ಳುವ ರಿಸ್ಕ್ ಎಂತಹದ್ದು... ಇಂತಹ ಪ್ರಶ್ನೆಗಳನ್ನು ಇಟ್ಟುಕೊಂಡು ಕಥೆ ಪ್ರಾರಂಭವಾಗುವುದೇ ನನ್ನಿಂದ. ಒಂದು ಒಳ್ಳೆಯ ಪ್ರೇಮಕಥೆ ಇದೆ. ಇದೊಂದು ಪ್ಯಾಕೇಜ್ ಸಿನಿಮಾ. ಹಾರರ್ ಥ್ರಿಲ್ಲರ್ ಕಥಾಹಂದರವಿರುವ ಈ ಚಿತ್ರ ಒಂದು ಒಳ್ಳೆಯ ಸಂದೇಶವನ್ನೂ ನೀಡುತ್ತದೆ. ಸಾಮಾಜಿಕ ಜಾಲತಾಣದಿಂದ ಆಗುವ ಅನಾಹುತಗಳ ಕುರಿತೂ ಇದರಲ್ಲಿ ವಿಷಯವಿದೆ. ಹಾರರ್ ಚಿತ್ರವಾಗಿರುವ ಕಾರಣ ಚಿತ್ರೀಕರಣದ ವೇಳೆ ನಡೆದ ಹಲವು ಅನುಭವಗಳು ಭಯ ಹುಟ್ಟಿಸುತ್ತಿದ್ದವು' ಎಂದು ವಿವರಿಸಿದರು.

'ವಿಕ್ಕಿ ವರುಣ್ ಅಭಿನಯದ 'ಕಾಲಾಪತ್ಥರ್'ನಲ್ಲಿ ನಾನು ನಟಿಸಿದ್ದೇನೆ. ಇನ್ನೆರಡು ಚಿತ್ರಗಳಲ್ಲಿ ನಟಿಸಿದ್ದೇನೆ. ಇದು ಇನ್ನಷ್ಟೇ ಘೋಷಣೆಯಾಗಬೇಕಿದೆ. ಇದರಲ್ಲಿ ಒಂದು ಚಿತ್ರದ ಚಿತ್ರೀಕರಣವೂ ಮುಗಿದಿದೆ. ಇನ್ನೊಂದು ಚಿತ್ರದ ಚಿತ್ರೀಕರಣ ಮೈಸೂರಿನಲ್ಲಿ ನಡೆಯುತ್ತಿದೆ' ಎಂದು ತಮ್ಮ ಮುಂದಿನ ಚಿತ್ರಗಳ ವಿವರಗಳನ್ನು ಅಪೂರ್ವ ನೀಡಿದರು.

ಪ್ಯಾನ್ ಇಂಡಿಯಾ ಸಿನಿಮಾದಲ್ಲಿ ಅರ್ಚನಾ ಜೋಯಿಸ್



ಅರ್ಚನಾ ಜೋಯಿಸ್

ಕೆಜಿಎಫ್ ಚಿತ್ರದಲ್ಲಿ ಅಮ್ಮನ ಪಾತ್ರದ ಮೂಲಕ ಸಿನಿ ಪ್ರೇಕ್ಷಕರ ಮೆಚ್ಚುಗೆ ಪಡೆದಿದ್ದ ಅರ್ಚನಾ ಜೋಯಿಸ್, ಈಗ ಮತ್ತೊಮ್ಮೆ ತೆರೆಯ ಮೇಲೆ ಮಿಂಚಲು ಸದ್ದಿಲ್ಲದೆ ಸಜ್ಜಾಗಿದ್ದಾರೆ.

ಇ.ಕೆ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಜಿ.ಗಂಗಾಧರ್ ಅವರ ನಿರ್ಮಾಣದ ಹೊಸ ಚಿತ್ರ '#ಮ್ಯೂಟ್'ನಲ್ಲಿ ಅರ್ಚನಾ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ಜಿ.ಗಂಗಾಧರ್ ಅವರು ಮುಂಗಾರುಮಳೆ ಹಾಗೂ ಮೊಗ್ಗಿನಮನಸು ಚಿತ್ರಗಳಲ್ಲೂ ಎಕ್ಸಿಕ್ಯುಟಿವ್ ಪ್ರೊಡ್ಯೂಸರ್ ಆಗಿ ಕೆಲಸ ಮಾಡಿದ್ದರು. ಮುಂಗಾರುಮಳೆ 2 ಚಿತ್ರದಲ್ಲಿ ನಿರ್ದೇಶಕ ಶಶಾಂಕ್ ಅವರೊಂದಿಗೆ ಕೆಲಸ ಮಾಡಿದ್ದ ಪ್ರಶಾಂತ್ ಚಂದ್ರ ಅವರ ನಿರ್ದೇಶನದಲ್ಲಿ ಈ ಸಿನಿಮಾ ಚಿತ್ರೀಕರಣವನ್ನೂ ಪೂರ್ಣಗೊಳಿಸಿದೆ.

ಚಿತ್ರವು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಈ ಸಿನಿಮಾದ ಶೀರ್ಷಿಕೆಯನ್ನು ನಟ ರಿಷಿ ಇತ್ತೀಚೆಗೆ ಬಿಡುಗಡೆಗೊಳಿಸಿದರು. ವಿಶೇಷವೆಂದರೆ ಈ ಸಿನಿಮಾದಲ್ಲಿ ತಮಿಳಿನ ಪ್ರಖ್ಯಾತ ನಟ ಆಡುಕಲಂ ನರೇನ್ ನಟಿಸಿದ್ದಾರೆ. ಸಿದ್ಧಾರ್ಥ್ ಮಾಧ್ಯಮಿಕ ಕೂಡ ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಂಡಿದ್ದಾರೆ. ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾ ಆಗಿರುವುದರಿಂದ ಪಾತ್ರಗಳ ಬಗ್ಗೆ ಸಿನಿಮಾ ತಂಡ ಯಾವುದೇ ಗುಟ್ಟು ಬಿಟ್ಟುಕೊಟ್ಟಿಲ್ಲ. 'ನಿರ್ದೇಶಕನಾಗಿ ಇದು ನನಗೆ ಚೊಚ್ಚಲ ಚಿತ್ರ. ಸಿನಿಮಾದ ಕಥೆ ವಿಭಿನ್ನವಾಗಿದೆ. ಥ್ರಿಲ್ಲರ್ ಸಿನಿಮಾ ಆಗಿರುವುದರಿಂದ ಸಾಕಷ್ಟು ತಿರುವುಗಳು ಚಿತ್ರದಲ್ಲಿವೆ' ಎನ್ನುತ್ತಾರೆ ನಿರ್ದೇಶಕ ಪ್ರಶಾಂತ್ ಚಂದ್ರ.

ಬಿಡುಗಡೆಯತ್ತ 'ಚೇಸ್'



'ಚೇಸ್' ಚಿತ್ರದ ಪೋಸ್ಟರ್

ಕಳೆದ ವರ್ಷ ಸೆಟ್ಟೇರಿದ ಚಿತ್ರ 'ಚೇಸ್'ನ ನಿರ್ಮಾಣ ಬಹುತೇಕ ಪೂರ್ಣಗೊಂಡಿದೆ. ಈ ನಡುವೆ ಚಿತ್ರದ 'ಮನದ ಹೊಸಿಲ...' ಎಂಬ ಲಿರಿಕಲ್ ಹಾಡಿನ ವಿಡಿಯೊ ಬಿಡುಗಡೆಯಾಗಿದೆ.

ವಿಜಯ್ ಪ್ರಕಾಶ್ ಹಾಗೂ ಮೊಹಮ್ಮದ್ ಮಕ್ಬುಲ್ ಮನ್ಸೂರ್ ಈ ಹಾಡಿನ ಗಾಯಕರು. ಕಾರ್ತಿಕ್ ಆಚಾರ್ಯ ಸಂಗೀತ ಸಂಯೋಜಿಸಿದ್ದಾರೆ. ವೈದ್ಯ ಉಮೇಶ್ ಪಿಲಿಕುಡೇಲು ಸಾಹಿತ್ಯ ಬರೆದಿದ್ದಾರೆ. ಉಮೇಶ್ ಅವರು ಕನ್ನಡ, ತುಳು ಭಾಷೆಯ ಹಲವಾರು ಚಿತ್ರಗಳಿಗೆ ಹಾಡುಗಳ ಸಾಹಿತ್ಯ ಬರೆದು ಗಮನಸೆಳೆದವರು. ವಿಲೋಕ್ ಶೆಟ್ಟಿ ಚಿತ್ರದ ನಿರ್ದೇಶಕರು. ರಾಧಿಕಾ ನಾರಾಯಣ್, ಅವಿನಾಶ್ ನರಸಿಂಹರಾಜು, ಶೀತಲ್ ಶೆಟ್ಟಿ, ಅರ್ಜುನ್ ಯೋಗಿ, ಶ್ವೇತಾ ಸಂಜೀವುಲು, ಸುಶಾಂತ್ ಪೂಜಾರಿ, ಪ್ರಮೋದ್ ಶೆಟ್ಟಿ, ಅರವಿಂದ್ ರಾವ್, ಸುಧಾ ಬೆಳವಾಡಿ ತಾರಾಗಣದಲ್ಲಿದ್ದಾರೆ. ಇದು ಕ್ರೈಂ, ಥ್ರಿಲ್ಲರ್ ಚಿತ್ರ ಎಂದಿದ್ದಾರೆ ವಿಲೋಕ್ ಶೆಟ್ಟಿ. ಸಿಂಪ್ಲಿ ಫನ್ ಮೀಡಿಯಾ ನೆಟ್ವರ್ಕ್ ಬ್ಯಾನರ್ ಅಡಿಯಲ್ಲಿ ಚಿತ್ರ ನಿರ್ಮಾಣವಾಗಿದೆ. ಮನೋಹರ್ ಸುವರ್ಣ, ಪ್ರದೀಪ್ ಶೆಟ್ಟಿ, ಪ್ರಶಾಂತ್ ಶೆಟ್ಟಿ ನಿರ್ಮಾಪಕರು. ಶಿವ್ ಶೆಟ್ಟಿ ಕಾರ್ಯಕಾರಿ ನಿರ್ಮಾಪಕರು. ಮಂಗಳೂರು, ಬೆಂಗಳೂರು, ಕೊಚ್ಚಿಯಲ್ಲಿ ಚೇಸ್ ಸಿನಿಮಾ ಚಿತ್ರೀಕರಣಗೊಂಡಿದೆ. ಮೇ ವೇಳೆಗೆ ಬಿಡುಗಡೆಗೆ ಸಿದ್ಧತೆ ಮಾಡಿಕೊಂಡಿದೆ ಚಿತ್ರತಂಡ.

ಎರಡು ಧರ್ಮಗಳ ಪ್ರೇಮ ಯುದ್ಧ

ಪ್ರೇಮಕ್ಕಾಗಿ ಎರಡು ಧರ್ಮಗಳ ನಡುವೆ ನಡೆಯುವುದೇ 'ಲವ್ ವಾರ್'. ಚಿತ್ರದ ಹೆಸರೇ ಹೇಳುವಂತೆ ಎರಡು ಧರ್ಮಗಳ ಮಧ್ಯೆ ಪ್ರೇಮ ಯುದ್ಧ ನಡೆಯುತ್ತದೆ.

ಹಿಂದೂ ಹುಡುಗಿ, ಮುಸ್ಲಿಂ ಹುಡುಗ. ಧರ್ಮದ ಕಾರಣಕ್ಕಾಗಿ ಕುಟುಂಬಗಳ ನಡುವೆ ಸಂಘರ್ಷ ನಡೆಯುತ್ತದೆ. ಎಸ್‌ಕೆಎಫ್ ಬ್ಯಾನರ್ ಅಡಿಯಲ್ಲಿ ಇಮ್ರಾನ್ ಆರಿಫ್ ಪಾಶಾ ಐದು ಭಾಷೆಗಳಲ್ಲಿ ನಿರ್ಮಾಣ ಮಾಡುತ್ತಿದ್ದಾರೆ. ಎಸ್. ಮಂಜು ಪ್ರೀತಮ್ ಅವರ ಕಥೆ, ಚಿತ್ರಕಥೆ, ನಿರ್ದೇಶನ ಈ ಚಿತ್ರಕ್ಕಿದೆ.



'ಲವ್ ವಾರ್'ನಲ್ಲಿ ಸಾಹಿಲ್ ಖಾನ್, ಪಾಯಲ್

ಸಾಹಿಲ್ ಖಾನ್ ನಾಯಕ. ಮುಂಬೈ ಮೂಲದ ಪಾಯಲ್ ನಾಯಕಿ.

ರವಿಶಂಕರ್, ಸಾಧುಕೋಕಿಲ ಜತೆಗೆ ತೆಲುಗು, ಹಿಂದಿ, ತಮಿಳು ಮತ್ತು ಮಲೆಯಾಳಂ ಚಿತ್ರರಂಗದ ಒಬ್ಬೊಬ್ಬ ಕಲಾವಿದರು ನಟಿಸುತ್ತಿದ್ದಾರೆ. ಸಂಗೀತ ಸಂಯೋಜಕ ಕಾರ್ತಿಕ್ ವೆಂಕಟೇಶ್ ಈಗ ಆರೋನ್ ಕಾರ್ತಿಕ್ ಎಂದು ನಾಮಕರಣ ಮಾಡಿಕೊಂಡಿದ್ದಾರೆ. ನಾಲ್ಕು ಹಾಡುಗಳಿಗೆ ರಾಗ ಹೊಸೆಯುತ್ತಿದ್ದಾರೆ. ಛಾಯಾಗ್ರಹಣ ಆಶು ಮೋಹನ್ ಕುಮಾರ್, ಸಂಕಲನ ನಾಗರಾಜ ಜಿ.ಹಾರಸೂರ್, ಸಂಭಾಷಣೆ ಚಂದ್ರು, ಸಾಹಸ ಥ್ರಿಲ್ಲರ್‌ಮಂಜು, ನೃತ್ಯ ಕರಿಯಾನಂದ ಅವರದ್ದು. ಚಿತ್ರದುರ್ಗ, ಚಿಕ್ಕಮಗಳೂರು, ಮಡಿಕೇರಿ ಸೇರಿದಂತೆ ಗೋವಾ ಮತ್ತು ಮಹಾರಾಷ್ಟ್ರ ಕಡೆಗಳಲ್ಲಿ ಚಿತ್ರೀಕರಣ ನಡೆಸಲು ಯೋಜನೆ ರೂಪಿಸಲಾಗಿದೆ.

ಆಗಸ್ಟ್ 19ಕ್ಕೆ 'ವಿಕ್ರಾಂತ್ ರೋಣ' ತೆರೆಗೆ



ಸುದೀಪ್

ನಟ ಕಿಚ್ಚ ಸುದೀಪ್ ನಟನೆಯ ಪ್ಯಾನ್ ಇಂಡಿಯಾ ಬಿಗ್‌ಬಜೆಟ್ ಚಿತ್ರ 'ವಿಕ್ರಾಂತ್ ರೋಣ' ಆಗಸ್ಟ್ 19ರಂದು ತೆರೆಯ 3ಡಿ ರೂಪದಲ್ಲಿ ತೆರೆಯ ಮೇಲೆ ಬರಲಿದೆ.

ಈ ಕುರಿತು ಟ್ವೀಟ್ ಮೂಲಕ ಮಾಹಿತಿ ಹಂಚಿಕೊಂಡಿರುವ ಸುದೀಪ್, 'ವಿಕ್ರಾಂತ್ ರೋಣ ಸಿನಿಮಾದ ಚಿತ್ರೀಕರಣ ಸಿದ್ಧತೆ ಮತ್ತು ಪ್ರಕ್ರಿಯೆಯ ಆನಂದವನ್ನು ಅನುಭವಿಸಿದ ನಂತರ ಈಗ 'ರೋಮಾಂಚನಕಾರಿ' ಸುದ್ದಿಯೊಂದನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಸಮಯ!
ವಿಕ್ರಾಂತ್ ರೋಣ ಸಿನಿಮಾ ಆಗಸ್ಟ್ 19 ರಂದು ಭಾರತದಾದ್ಯಂತ ಬಿಡುಗಡೆಗೊಳ್ಳುತ್ತಿದೆ ಎಂದು ತಿಳಿಸಲು ನಮ್ಮ ವಿಕ್ರಾಂತ್ ರೋಣ ತಂಡವು ಹರ್ಷಿಸುತ್ತದೆ' ಎಂದು ಪೋಸ್ಟ್ ಮಾಡಿದ್ದಾರೆ.

ಚಿತ್ರದ ಟೀಸರ್ ಹಾಗೂ ಕಟೌಟ್ ದುಬೈನಲ್ಲಿರುವ ವಿಶ್ವದ ಅತ್ಯಂತ ಎತ್ತರದ ಕಟ್ಟಡ ಬುರ್ಜ್ ಖಲೀಫಾ ಮೇಲೆ ರಾರಾಜಿಸಿ ವಿಶ್ವದ ಗಮನಸೆಳೆದಿತ್ತು. ಅನೂಪ್ ಭಂಡಾರಿ ನಿರ್ದೇಶನದ ಈ ಚಿತ್ರದಲ್ಲಿ ನಿರೂಪ್ ಭಂಡಾರಿ ಹಾಗೂ ನೀತಾ ಅಶೋಕ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ಜ್ಯಾಕ್ ಮಂಜು ಈ ಚಿತ್ರದ ನಿರ್ಮಾಪಕರು. ಕನ್ನಡದ ಜೊತೆಗೆ ಹಿಂದಿ, ತಮಿಳು, ತೆಲುಗು ಹಾಗೂ ಮಲಯಾಳಂನಲ್ಲೂ ಈ ಚಿತ್ರ ತೆರೆ ಕಾಣಲಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಜಗತ್ತಿನ ಅರ್ಧ ಭಾಗದಲ್ಲಿ ಕತ್ತಲೆ ಮತ್ತೆ ಅರ್ಧ ಭಾಗದಲ್ಲಿ ಬೆಳಕು ಇರುವಂತೆ, ಜೀವನದಲ್ಲಿಯೂ ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಇರುತ್ತವೆ. ಬೆಳಕಿನಲ್ಲಿ ಇದ್ದು ಒಳ್ಳೆಯವರಾಗಿ ಉಳಿಯುವುದು ನಮ್ಮ ಕರ್ತವ್ಯ.

–ಅನಿತಾ ನಾಯರ್

ಮಕ್ಕಳ ಪರೀಕ್ಷೆಗಳನ್ನು ಮತ್ತೆ ಪರೀಕ್ಷೆಗೆ ಒಡ್ಡಿದ ಕೊರೊನಾ

ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಪ್ರಸಕ್ತ ಶೈಕ್ಷಣಿಕ ಸಾಲಿನ ಹತ್ತನೇ ತರಗತಿ ಪರೀಕ್ಷೆಯನ್ನು ರದ್ದುಗೊಳಿಸಿದ್ದು, 12ನೇ ತರಗತಿ ಪರೀಕ್ಷೆಯನ್ನು ಮುಂದೂಡಲು ತೀರ್ಮಾನಿಸಿದೆ. ಕೋವಿಡ್‌ನ ಎರಡನೇ ಅಲೆ ಏರುಗತಿಯಲ್ಲಿರುವ ಸಂದರ್ಭದಲ್ಲಿ ಸಿಬಿಎಸ್‌ಇ ಕೈಗೊಂಡಿರುವ ಈ ನಿರ್ಧಾರದಿಂದ ವಿದ್ಯಾರ್ಥಿಗಳಲ್ಲಿ ಒಂದು ರೀತಿಯ ನಿರಾಳಭಾವ ಮೂಡಿರಬೇಕು. ಕಳೆದ ವರ್ಷ ಬೀಸಿದ ಸಾಂಕ್ರಾಮಿಕದ ಅಲೆಗೂ ಈ ವರ್ಷ ಶುರುವಾಗಿರುವ ಅದರ ಎರಡನೇ ಅಲೆಗೂ ವ್ಯತ್ಯಾಸವಿದೆ. ಏಕೆಂದರೆ, ಈಗ ಚಿಕ್ಕ ವಯಸ್ಸಿನವರೂ ದೊಡ್ಡಸಂಖ್ಯೆಯಲ್ಲಿ ಸೋಂಕುಪೀಡಿತ-ರಾಗುತ್ತಿದ್ದಾರೆ. ಆರೋಗ್ಯ ಇಲಾಖೆಯೇ ನೀಡಿರುವ ಮಾಹಿತಿ ಪ್ರಕಾರ, ಹದಿಹರೆಯದ ಮಕ್ಕಳೂ ಈಗ ಸಾಂಕ್ರಾಮಿಕದಿಂದ ಬಳಲುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ವಿದ್ಯಾರ್ಥಿಗಳ ಸುರಕ್ಷತೆಗೆ ಒತ್ತು ನೀಡಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎನ್ನುವುದು ಸಿಬಿಎಸ್‌ಇ ಸ್ಪಷ್ಟನೆ. ವಿದ್ಯಾರ್ಥಿಗಳ ಶಿಕ್ಷಣದ ಮಟ್ಟವನ್ನು ಅಳೆಯುವ ಆಂತರಿಕ ವ್ಯವಸ್ಥೆಯೊಂದು ಅದರ ಪಠ್ಯಕ್ರಮದಲ್ಲಿ ಮೊದಲಿನಿಂದಲೂ ಇದೆ. ಅಂಕಗಳನ್ನು ನೀಡಲು ಈಗ ಮಾನದಂಡವನ್ನೂ ಅದು ಸಿದ್ಧಪಡಿಸುತ್ತಿದೆ. ಹೀಗಾಗಿ ಹತ್ತನೇ ತರಗತಿಯ ಪರೀಕ್ಷೆಯನ್ನು ನಡೆಸದೆಯೇ ಫಲಿತಾಂಶ ಘೋಷಿಸಲು ಸಿಬಿಎಸ್‌ಇಗೆ ಹೆಚ್ಚಿನ ಕಷ್ಟವೇನೂ ಆಗಲಿಕ್ಕಿಲ್ಲ. ಅಲ್ಲದೆ, ಅಂಕಗಳು ತೃಪ್ತಿ ತಂದಿಲ್ಲ ಎಂದು ಭಾವಿಸುವ ವಿದ್ಯಾರ್ಥಿಗಳಿಗೆ ಪರಿಸ್ಥಿತಿ ಸುಧಾರಿಸಿದ ಮೇಲೆ ಪರೀಕ್ಷೆ ಬರೆಯಲೂ ಅವಕಾಶ ನೀಡುವುದಾಗಿ ತಿಳಿಸಲಾಗಿದೆ. ಹಾಗೆಯೇ 12ನೇ ತರಗತಿ ಪರೀಕ್ಷೆಯನ್ನು ಸದ್ಯ ಮುಂದೂಡಿದ್ದು ಕೂಡ ಸಿಬಿಎಸ್‌ಇ ಪಾಲಿಗೆ 'ತೀರಾ ಅನಿವಾರ್ಯ-ವಾಗಿದ್ದ ನಿರ್ಧಾರ'. ಆ ತರಗತಿಯ ವಿದ್ಯಾರ್ಥಿಗಳು ಸದ್ಯಕ್ಕೆ ನಿರಾಳರಾಗಿರಬಹುದು. ಆದರೆ, ಪರೀಕ್ಷೆಗೆ ಸಂಬಂಧಿಸಿದಂತೆ ಮುಂದಿನ ನಿರ್ಧಾರವನ್ನು ಜೂನ್ ಒಂದರಂದು ಕೈಗೊಳ್ಳುವುದಾಗಿ ಮಂಡಳಿ ಹೇಳಿದೆ. ಅಲ್ಲಿಯವರೆಗೂ ಒತ್ತಡ ಇದ್ದೇ ಇರುತ್ತದೆ.



ವಿದ್ಯಾರ್ಥಿಗಳ ಪಾಲಿಗೆ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯು ಪರೀಕ್ಷೆಗಳು ನಿರ್ಣಾಯಕ. ಈ ಅಂಶವನ್ನು ಪರಿಗಣಿಸಿ ಸರ್ಕಾರ ಮುಂದಡಿ ಇಡಬೇಕು

ಸಿಬಿಎಸ್‌ಇ ಕೈಗೊಂಡ ತೀರ್ಮಾನದ ಬೆನ್ನಹಿಂದೆಯೇ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯು ಪರೀಕ್ಷೆಗಳ ಸಂಬಂಧ ರಾಜ್ಯ ಸರ್ಕಾರ ಏನು ನಿರ್ಧಾರ ಕೈಗೊಳ್ಳಲಿದೆ ಎಂಬುದನ್ನು ಕಾದು ನೋಡಬೇಕಿದೆ. ಸಿಬಿಎಸ್‌ಇ ರೀತಿಯಲ್ಲಿ ಪರೀಕ್ಷೆಯನ್ನೇ ರದ್ದುಗೊಳಿಸುವುದು ಎಸ್‌ಎಸ್‌ಎಲ್‌ಸಿ ಓದುತ್ತಿರುವ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಸೂಕ್ತ ನಿರ್ಧಾರವಾಗದು. ಹಲವು ದೃಷ್ಟಿಯಿಂದ ವಿದ್ಯಾರ್ಥಿಗಳ ಪಾಲಿಗೆ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯು ಪರೀಕ್ಷೆಗಳು ನಿರ್ಣಾಯಕ. ಇಂತಹ ನಿರ್ಣಾಯಕ ಪರೀಕ್ಷೆಗಳನ್ನು ರದ್ದುಗೊಳಿಸುವುದು ಇಲ್ಲವೆ ದೀರ್ಘಾವಧಿಗೆ ಮುಂದೂಡುವುದು ಸಮಸ್ಯೆಗೆ ಪರಿಹಾರವಲ್ಲ. ಕಳೆದ ವರ್ಷ ಕೊರೊನಾ ಸೋಂಕು ತೀವ್ರವಾಗಿದ್ದ ಸಂದರ್ಭದಲ್ಲೇ ಪರೀಕ್ಷೆಯ ಸವಾಲನ್ನು ಎದುರಿಸಿ ಯಶಸ್ವಿಯಾದ ಉದಾಹರಣೆ ನಮ್ಮ ಬೆನ್ನಿಗಿದೆ. 'ಪರೀಕ್ಷೆ ನಡೆಸುವುದಕ್ಕಿದು ಸರಿಯಾದ ಸಮಯವಲ್ಲ' ಎಂದು ಹುಯಿಲು ಎಬ್ಬಿಸುವುದಕ್ಕಿಂತ ಸಾಮೂಹಿಕವಾಗಿ ಲಸಿಕೆ ಅಭಿಯಾನವನ್ನು ತೀವ್ರಗೊಳಿಸಿ, ಸೋಂಕು ಹರಡುವ ಭೀತಿಯನ್ನು ಕಡಿಮೆ ಮಾಡುವುದು ಇಂದಿನ ತುರ್ತು. ಅಮೆರಿಕದಲ್ಲಿ 16 ವರ್ಷದ ಮೇಲಿನ ಎಲ್ಲರಿಗೂ ಲಸಿಕೆ ಹಾಕುವ ಅಭಿಯಾನ ನಡೆದಿದೆ. 12ರಿಂದ 15 ವರ್ಷದೊಳಗಿನ ಮಕ್ಕಳಿಗೂ ಲಸಿಕೆ ಹಾಕಬಹುದೇ ಎಂಬ ಪ್ರಯೋಗಗಳು ಕೂಡ ಅಲ್ಲಿ ನಡೆಯುತ್ತಿವೆ. ವಿದ್ಯಾರ್ಥಿಗಳಲ್ಲಿ ಸೋಂಕಿನ ಭೀತಿ ದೂರ ಮಾಡಲು ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಇಲಾಖೆ ಜಂಟಿಯಾಗಿ ಕಾರ್ಯಪ್ರವೃತ್ತವಾಗಬೇಕು. ಏಕೆಂದರೆ, ಪರೀಕ್ಷೆಗಳನ್ನು ನಡೆಸದೆ ಅರ್ಹ ವಿದ್ಯಾರ್ಥಿಗಳಿಗೆ ಮುಂದಿನ ಅವಕಾಶಗಳನ್ನು ದೊರಕಿಸಿಕೊಡುವ ಪರ್ಯಾಯ ಆಯ್ಕೆಗಳು ನಮ್ಮ ಮುಂದೆ ಇಲ್ಲ. ಪರೀಕ್ಷೆಗಳನ್ನು ರದ್ದುಗೊಳಿಸುವುದರಿಂದ ಇಲ್ಲವೆ ಅನಿರ್ದಿಷ್ಟ ಅವಧಿಗೆ ಮುಂದೂಡುವುದರಿಂದ ಅನುಕೂಲಕ್ಕಿಂತ ಸಮಸ್ಯೆಗಳೇ ಹೆಚ್ಚು. ಪರೀಕ್ಷೆಗಳನ್ನು ದೀರ್ಘಕಾಲ ಮುಂದೂಡಿದರೆ ಅದರಿಂದ ವಿದ್ಯಾರ್ಥಿಗಳ ಮೇಲಿನ ಮಾನಸಿಕ ಒತ್ತಡ ಹೆಚ್ಚಾಗುವ ಸಾಧ್ಯತೆಯೂ ಉಂಟು. ಪರಸ್ಪರ ಅಂತರ ಕಾಯ್ದುಕೊಳ್ಳುವುದು ಮತ್ತು ಮಾಸ್ಕ್ ಧರಿಸುವುದು ಸೋಂಕು ಹರಡುವುದನ್ನು ತಡೆಯಲು ಇರುವ ಮಾರ್ಗೋ-ಪಾಯಗಳಲ್ಲಿ ಎರಡು ಮುಖ್ಯ ಉಪಕ್ರಮಗಳು ಎಂದು ತಜ್ಞರು ಪದೇ ಪದೇ ಹೇಳಿದ್ದಾರೆ. ಅವುಗಳನ್ನು ಅಳವಡಿಸಿಕೊಂಡು ಸುರಕ್ಷಿತ ವಾತಾವರಣದಲ್ಲಿ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಕುರಿತು ಸರ್ಕಾರ ಯೋಚಿಸಬಹುದು. ಸೋಂಕು ಹರಡುವಿಕೆ ತಡೆಯಲು ಹೊರಡಿಸಿರುವ ಮಾರ್ಗಸೂಚಿಯನ್ನು ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಕಟ್ಟುನಿಟ್ಟಾಗಿ ಪಾಲನೆ ಆಗುವಂತೆ ನೋಡಿಕೊಳ್ಳಬೇಕು. ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಮೂಲಕ ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಆತ್ಮವಿಶ್ವಾಸವನ್ನು ತುಂಬಿ, ಪರೀಕ್ಷೆಗಳು ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಲು ಸರ್ಕಾರಕ್ಕೆ ಸಮಯ ಮತ್ತು ಅವಕಾಶ ಇದೆ.

ಬಸನಗೌಡ ಪಾಟೀಲ ಯತ್ನಾಳ, ಈಶ್ವರಪ್ಪ ಧ್ವನಿಯ ಹಿಂದೆ...?

ಎಂದೆಂದೂ ಮುಗಿಯದ ಕತೆ



ಗತಿಬಿಂಬ

ವೈ.ಗ.ಜಗದೀಶ್

ರಾಜ್ಯದಲ್ಲಿ ಅಡ್ಡಮಾರ್ಗದಿಂದ ಅಧಿಕಾರ ಹಿಡಿದ ಬಿಜೆಪಿಯಲ್ಲೀಗ ಭಿನ್ನಮತದ ಹೊಗೆ ಎದ್ದಿದೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧ ಹಿರಿಯ ಸಚಿವ ಕೆ.ಎಸ್.ಈಶ್ವರಪ್ಪ ರಾಜ್ಯಪಾಲರಿಗೆ ದೂರಿತ್ತಿದ್ದಾರೆ. ಮುಖ್ಯಮಂತ್ರಿ ಮತ್ತು ಅವರ ಮಗ ಬಿ.ವೈ.ವಿಜಯೇಂದ್ರ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದು ಬಸನಗೌಡ ಪಾಟೀಲ ಯತ್ನಾಳ ಮುಲಾಜಿಲ್ಲದೇ ಹೇಳಿಕೊಂಡು ತಿರುಗುತ್ತಿದ್ದಾರೆ. ದಶಕದ ಹಿಂದೆ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಎದ್ದಿದ್ದ ಅಪಸ್ವರಗಳು ಮತ್ತೆ ಕೇಳಲಾರಂಭಿಸಿವೆ.

ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಇದು ಸಾಮಾನ್ಯ ಎಂಬಷ್ಟರ ಮಟ್ಟಿಗೆ ವ್ಯಾಜ್ಯ ರಾಜಕಾರಣ ಕಾಣಿಸತೊಡಗಿದೆ. ಇದು ಬಿಜೆಪಿಯ ಜಾಯಮಾನವೇ ಅಥವಾ ಚಾರಿತ್ರ್ಯವೇ ಎಂಬ ಸಂಶಯವೂ ಮೊಳೆಯುತ್ತಿದೆ.

1989ರಿಂದ 1994ರವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್‌ನಲ್ಲಿ ಮೇಲಾಟದಿಂದಾಗಿ ಮೂವರು ಮುಖ್ಯ-ಮಂತ್ರಿಗಳು ಆಗಿಹೋಗಿದ್ದರು. ಎಸ್.ಎಂ.ಕೃಷ್ಣ ಮತ್ತು ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿದ ಅವಧಿಯಲ್ಲಿ ನಾಯಕತ್ವದ ಬಗ್ಗೆ ಬಹಿರಂಗ ಬಂಡಾಯ ಕಾಣಿಸಿಕೊಂಡಿದ್ದೇ ಇಲ್ಲ. ಸಂಪುಟ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ನಿರ್ಣಯ ಕೈಗೊಳ್ಳುವ ಜಾಣ್ಮೆ, ಕುಟುಂಬ ಸದಸ್ಯರ ಹಸ್ತಕ್ಷೇಪಕ್ಕೆ ಅವಕಾಶ ಇಲ್ಲದಂತೆ ನೋಡಿಕೊಳ್ಳುವ ಚಾಣಾಕ್ಷತನಗಳೇ ಇವರ ಯಶಸ್ಸಿಗೆ ಕಾರಣವಾದವು. ಸಣ್ಣಪುಟ್ಟ ಅಸಮಾಧಾನ ಇದ್ದರೂ ಅದನ್ನು ಸಚಿವ ಸಂಪುಟ ಸಭೆಯಲ್ಲೋ ಮುಖ್ಯಮಂತ್ರಿ ಖಾಸಗಿ ಕೊಠಡಿಯಲ್ಲೋ ಕುಳಿತು ಬಗೆಹರಿಸಿಕೊಳ್ಳುವ ಔದಾರ್ಯವನ್ನು ತೋರಿಸಿದ್ದುಂಟು.

ಪ್ರಜಾಸತ್ತೆಯ ಋಜುಮಾರ್ಗವಾದ ಚುನಾವಣೆಯಲ್ಲಿ ಬಹುಮತ ಪಡೆದು ಅಧಿಕಾರ ಹಿಡಿದ ಕಾರಣಕ್ಕೆ ಕೃಷ್ಣ ಹಾಗೂ ಸಿದ್ದರಾಮಯ್ಯ ತಮ್ಮ ನಡೆಯಲ್ಲಿ ಜನತಂತ್ರದ ಆಶಯಗಳನ್ನು ಬಿಂಬಿಸಿಕೊಂಡಿದ್ದಿರಬಹುದು. ಆದರೆ, ಬಿಜೆಪಿಗೆ ಆ ದರ್ದಿಲ್ಲ; ಕರ್ನಾಟಕದಲ್ಲಿ ಬಿಜೆಪಿ ಎರಡು ಅವಧಿ ಅಧಿಕಾರ ಹಿಡಿದಿದ್ದು, ಉಳಿಸಿಕೊಂಡಿದ್ದು 'ಆಪರೇಷನ್ ಕಮಲ'ದ ಮೂಲಕವೇ. 2008ರಲ್ಲಿ ಪಕ್ಷೇತರರಾಗಿ ಗೆದ್ದವರನ್ನು ಸೆಳೆದು ಅಧಿಕಾರ ಹಿಡಿದ ಯಡಿಯೂರಪ್ಪ, ಆಪರೇಷನ್ ಕಮಲವೆಂಬ ಹೀನ ಪದ್ಧತಿಯನ್ನು ದೇಶದಲ್ಲಿ ಹುಟ್ಟುಹಾಕಿದರು. ವಿವಿಧ ರಾಜ್ಯಗಳಲ್ಲಿ ಅಧಿಕಾರ ಹಿಡಿಯಲು ಬಿಜೆಪಿಯ ಈಗಿನ ರಾಷ್ಟ್ರ ನಾಯಕರು ಅದನ್ನೇ ಮಾದರಿಯಾಗಿ ಬಳಸಿಕೊಂಡಿದ್ದು ಈಗ 'ಇತಿಹಾಸ'.

2018ರ ಚುನಾವಣೆಯಲ್ಲಿ ಬಿಜೆಪಿಗೆ ಸರಳ ಬಹುಮತ ಬರಲಿಲ್ಲ. 'ಛಲ' ಬಿಡದ ಯಡಿಯೂರಪ್ಪ ಮತ್ತೆ ಕಾಂಗ್ರೆಸ್, ಜೆಡಿಎಸ್ ಶಾಸಕರಿಗೆ 'ಆಪರೇಷನ್' ಮಾಡಿ ಗದ್ದುಗೆ ಏರಿದರು. ಇದು ಜನಾದೇಶದಿಂದ ಪಡೆದ ಅಧಿಕಾರವಲ್ಲ. ಆಸ್ತಿಯೊಂದನ್ನು ಸಂಪಾದಿಸುವ ರೀತಿಯಲ್ಲಿ ಶಾಸಕರನ್ನು ಖರೀದಿಸಿ, ಅಧಿಕಾರ ದಕ್ಕಿಸಿಕೊಂಡಿದ್ದು. ತಾನು ಸಂಪಾದಿಸಿದ ಆಸ್ತಿ ತಮ್ಮ ಮಕ್ಕಳು, ಮೊಮ್ಮಕ್ಕಳ ಪಾರುಪತ್ಯದಲ್ಲೇ ಇರಬೇಕೆಂಬ ವಂಶಪಾರಂಪರ್ಯ ಮನೋಧೋರಣೆಯು ಅಧಿಕಾರ ದಕ್ಕಿಸಿಕೊಂಡ ಯಡಿಯೂರಪ್ಪ ಅವರಿಗೆ ಇದ್ದೀತು. ಇದೇ ಕಾರಣಕ್ಕೆ ರಾಜ್ಯ ಸರ್ಕಾರವೀಗ ಉರಿವ ಕೆಂಡದ ಮೇಲೆ ನಿಂತಂತಿದೆ.

ಈಗಿನ ಅಸಹನೆಗಳು ದಶಕದ ಹಿಂದಿನ ಘಟನಾವಳಿಗಳನ್ನು ಕಣ್ಮುಂದೆ ತರುತ್ತವೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾರೆ. ಅಧಿಕಾರ ನಿಯಂತ್ರಿಸುವ ವ್ಯಕ್ತಿಗಳಷ್ಟೇ ಬದಲಾಗಿದ್ದಾರೆ. ಅಂದು ಶೋಭಾ ಕರಂದ್ಲಾಜೆ ಇದ್ದ ಜಾಗದಲ್ಲಿ ಇಂದು ವಿಜಯೇಂದ್ರ ಇದ್ದಾರೆ. ಎಲ್ಲವನ್ನೂ ತಮ್ಮ ಬೆರಳ ತುದಿಯಲ್ಲಿ ಕುಣಿಸುವುದನ್ನು ಕರಗತ ಮಾಡಿಕೊಂಡಿರುವ ವಿಜಯೇಂದ್ರ, ಎಲ್ಲರ ಕಣ್ಣನ್ನು ಕುಕ್ಕುವ ಮಟ್ಟಕ್ಕೆ ಬೆಳೆದಿದ್ದಾರೆ; ಬೆಳೆಯುತ್ತಿದ್ದಾರೆ.

'2008ರಲ್ಲಿ ಅಧಿಕಾರ ದಕ್ಕಿಸಿಕೊಂಡಿದ್ದ ಯಡಿಯೂರಪ್ಪ, ತಾವು ಹೇಳಿದಂತೆಯೇ ಎಲ್ಲವೂ ನಡೆಯಬೇಕೆಂಬ ಧೋರಣೆ ಹೊಂದಿದ್ದರು. ಅದು ಎಷ್ಟರ ಮಟ್ಟಿಗೆ ಎಂದರೆ, ಸಚಿವ ಸಂಪುಟ ಸಭಾಂಗಣದಲ್ಲಿ ಮುಖ್ಯಮಂತ್ರಿ ಮಧ್ಯೆ ಕುಳಿತರೆ ಸುತ್ತ ಸಚಿವರು ಕುಳಿತುಕೊಳ್ಳುವುದು ವಾಡಿಕೆ. ಮುಖ್ಯಮಂತ್ರಿ ಕುರ್ಚಿ ಎದುರು ಶೋಭಾ ಅವರಿಗೆ ಕುರ್ಚಿ ಇರುತ್ತಿತ್ತು. ಶೋಭಾ ಹಾಜರಾಗುವವರೆಗೆ ಸಚಿವ ಸಂಪುಟ ಸಭೆ ಆರಂಭವಾಗುತ್ತಿರಲಿಲ್ಲ. ಸಭೆ ಆರಂಭವಾಗಿ ಕಾರ್ಯಸೂಚಿಯ ವಿಷಯ ಮಂಡನೆಯಾದಾಗ ಯಡಿಯೂರಪ್ಪ ಅವರು ಶೋಭಾ ಕಡೆ ನೋಡಿ, ಅವರು ತಲೆ ಅಲ್ಲಾಡಿಸಿದರೆ ವಿಷಯಕ್ಕೆ ಅನುಮೋದನೆ ದೊರಕಿದಂತೆ. ಅನೇಕ ವೇಳೆ ಚರ್ಚೆಯೇ ಇಲ್ಲದೆ 'ಕಣ್ಸನ್ನೆ'ಯಲ್ಲೇ ಸಂಪುಟ ಸಭೆ ಮುಗಿದು ಹೋಗಿದ್ದುಂಟು' ಎಂದು ಅಂದು ಸಚಿವರಾಗಿದ್ದವರು ಹೇಳುತ್ತಿದ್ದುದು ಉಂಟು.

2009ರಲ್ಲಿ ಬಂಡಾಯದ ಬಾವುಟ ಹಾರಿದಾಗ ಯಡಿಯೂರಪ್ಪನವರ ಮೇಲೆ ಯಾರಿಗೂ ಸಿಟ್ಟಿರಲಿಲ್ಲ; ಇದ್ದದ್ದೆಲ್ಲ ಶೋಭಾ ಕರಂದ್ಲಾಜೆ ಮತ್ತು ಅಂದು ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿಯಾಗಿದ್ದ ವಿ.ಪಿ. ಬಳಿಗಾರ್ ಮೇಲೆ. ಅದು ಎಲ್ಲಿಗೆ ಹೋಗಿ ನಿಂತಿತೆಂದರೆ, ಶೋಭಾ ಸಚಿವ ಸ್ಥಾನ ತ್ಯಜಿಸಬೇಕಾಯಿತು. ಬಳಿಗಾರ್ ಆ ಹುದ್ದೆಯಿಂದ ವರ್ಗ ಆಗಬೇಕಾಯಿತು.

ಈಗಲೂ ವಿಜಯೇಂದ್ರ ದರ್ಬಾರಿನ ವಿರುದ್ಧವೇ ಎಲ್ಲರ ಸಿಡಿಮಿಡಿ. ಯಾವುದಕ್ಕೂ ಅಂಜದೆ, ಪಕ್ಷನಿಷ್ಠೆಯಲ್ಲಿ ಪ್ರಶ್ನಾತೀತರಾದ ಕೆ.ಎಸ್.ಈಶ್ವರಪ್ಪ ಈಗ ಧ್ವನಿ ಎತ್ತಿರುವುದು ಕೂಡ ಇದೇ ಮಾದರಿಯಲ್ಲಿ ಇದ್ದಂತಿದೆ. ಕಟ್ಟಾ ಹಿಂದುತ್ವವಾದಿಯಾಗಿರುವ ಹಾಗೂ ಬಿಜೆಪಿಯ ಒಳದನಿಯಂತೆ ಮಾತನಾಡುತ್ತಿರುವ ಯತ್ನಾಳ ಕೂಡ ನೇರವಾಗಿ ಹಾಯುತ್ತಿರುವುದು ವಿಜಯೇಂದ್ರ ವಿರುದ್ಧವೇ. 'ನಾವೆಲ್ಲ ಪಕ್ಷ ಕಟ್ಟುವಾಗ ವಿಜಯೇಂದ್ರಗೆ ಚೆಡ್ಡಿ ಹಾಕಿಕೊಳ್ಳಲು ಬರುತ್ತಿರಲಿಲ್ಲ. ಈಗ ಅವರೆದುರು ನಿಂತು ಸರ್ ಎನ್ನಬೇಕೇ' ಎಂದು ಯತ್ನಾಳ ಪ್ರಶ್ನಿಸಿರುವುದು ಇದಕ್ಕೆ ಸಾಕ್ಷಿ.



ಶೋಭಾ ಅಂದು ಎಲ್ಲ ನಿರ್ಧಾರದ ಸೂತ್ರ ಹಿಡಿದಿದ್ದರೆ ಇಂದು ವಿಜಯೇಂದ್ರ, ಮುಖ್ಯಮಂತ್ರಿಯ ಕುರ್ಚಿಯನ್ನೇ ತಮ್ಮ ಅಂಗೈಯಲ್ಲಿ ಆಡಿಸುತ್ತಿದ್ದಾರೆ ಎಂದು ಸಚಿವರೇ ಹೇಳುವುದುಂಟು. ಬಹಿರಂಗವಾಗಿ ಮಾತನಾಡಿದರೆ ತಮ್ಮ ಕೆಲಸಕ್ಕೆ ಕಲ್ಲು ಬೀಳುತ್ತದೆಯೋ ಎಂದು ಹೆದರಿ ಸುಮ್ಮನೆ ಕುಳಿತಿದ್ದಾರೆ. ಹೀಗಾಗಿಯೇ ಸಿ.ಟಿ. ರವಿಯಂತಹವರು 'ಯಡಿಯೂರಪ್ಪ ಮಾಲೀಕರಲ್ಲ; ನಾಯಕ' ಎಂದು ರೂಪಕದಲ್ಲಿ ಮಾತನಾಡುತ್ತಿದ್ದಾರೆ.

ದಶಕದ ಹಿಂದೆ ಬಿಜೆಪಿಯಲ್ಲಿ ಬಂಡಾಯ ಮೊಳಗಿದಾಗ ಪಕ್ಷದ ವರಿಷ್ಠರು ಇಷ್ಟು ಬಲಿಷ್ಠರಾಗಿರಲಿಲ್ಲ. ಇಂದು ಅಮಿತ್ ಶಾ ಮುಂದೆ ನಿಂತು ಮಾತನಾಡುವುದಕ್ಕೆ ಮುಖ್ಯಮಂತ್ರಿಗಳೇ ಹೆದರುವ ಪರಿಸ್ಥಿತಿ ಇದೆ. ಅಷ್ಟರಮಟ್ಟಿಗೆ ಬಿಜೆಪಿ ಪ್ರಬಲವಾಗಿದೆ. ಇಂತಹ ಹೊತ್ತಿನಲ್ಲಿಯೂ ಭಿನ್ನಮತದ ಬೇಗೆ ಆ ಪಕ್ಷವನ್ನು ಸುಡಲಾರಂಭಿಸಿದೆ ಎಂದರೆ ಅದಕ್ಕೆ ವರಿಷ್ಠರ ಕುಮ್ಮಕ್ಕು ಇದೆ ಎಂದೇ ಭಾವಿಸಬೇಕಾಗುತ್ತದೆ.

ಆಡಳಿತ ಪಕ್ಷದ ನಾಯಕನ ಮೇಲೆ ವಿಶ್ವಾಸ ಇಲ್ಲವೆಂದಾಗ, ಆಡಳಿತ ಸೂತ್ರ ಮತ್ಯಾರದೋ ಹಿಡಿತದಲ್ಲಿದೆ ಎಂದಾಗ ಅಭಿವೃದ್ಧಿ ಎಂಬುದು ಕನಸಿನ ಮಾತಾಗುತ್ತದೆ. ಪ್ರಗತಿಪಥದಲ್ಲಿ ಸಾಗುತ್ತಿದ್ದ ರಾಜ್ಯ ಕೆಲವೇ ವರ್ಷಗಳಲ್ಲಿ ಹಿಮ್ಮುಖ ಚಲನೆಯತ್ತ ಹೊರಳಲಿದೆ ಎಂಬುದನ್ನು ಇತ್ತೀಚಿನ ಅಂಕಿ ಅಂಶಗಳೇ ಸಾಬೀತುಪಡಿಸುತ್ತವೆ. ಉದ್ಯೋಗ ಸೃಷ್ಟಿಯ ಸಾಧ್ಯತೆಯೇ ಕಡಿಮೆಯಾಗಿದ್ದು, ಕೃಷಿ ಕೂಡ ತೀವ್ರ ಬಿಕ್ಕಟ್ಟಿನ ಸ್ಥಿತಿಯಲ್ಲಿದೆ. ಅಭಿವೃದ್ಧಿಗೆ ಪಾರ್ಶ್ವವಾಯು ಬಡಿದಿದೆ.

ಒಂದು ವರ್ಷ ಕಾಡಿದ ಕೋವಿಡ್‌ನಿಂದಾಗಿ ಜನ ಕಂಗೆಟ್ಟು ಕುಳಿತಿದ್ದರು. ಯಥಾಸ್ಥಿತಿಗೆ ಜನಜೀವನ ಮರಳುತ್ತಿದೆ ಎಂದು ನಿಟ್ಟುಸಿರು ಬಿಡುವ ಹೊತ್ತಿಗೆ ಎರಡನೇ ಅಲೆ ಅಟಕಾಯಿಸಿಕೊಂಡಿದೆ. ಇದೇನು ಅನಿರೀಕ್ಷಿತವಲ್ಲ. ಎರಡನೇ ಅಲೆ ಬಗ್ಗೆ ತಜ್ಞರು ಮುನ್ನೆಚ್ಚರಿಕೆ ನೀಡಿದ್ದರೂ ಸರ್ಕಾರ ಯಾವುದೇ ಸಿದ್ಧತೆ ಮಾಡಿಕೊಂಡಿಲ್ಲ. ಕೋವಿಡ್ ಪೀಡಿತರ ಸಂಖ್ಯೆ ಏಕಾಏಕಿ ಏರತೊಡಗಿದಾಗ ಸರ್ಕಾರ ಎಚ್ಚರಗೊಂಡಂತೆ ಆಡುತ್ತಿದೆ. ಯಾರದೋ 'ಮರ್ಜಿ'ಗೆ ಬಿದ್ದು, ಆಯಕಟ್ಟಿನ ಹುದ್ದೆಯಲ್ಲಿದ್ದವರ ವರ್ಗಾವಣೆ-ಗಳಿಂದಾಗಿ ಆಡಳಿತ ಅಂಕೆ ತಪ್ಪಿದಂತಿದೆ. ಸರ್ಕಾರದ ಗೊಂದಲ, ಕುಟುಂಬ ರಾಜಕಾರಣದ ಪರಿಣಾಮ ಜನರ ಮೇಲೆ ಆಗುತ್ತಿದೆ.

ವಿಧಾನಸಭೆ ಚುನಾವಣೆ ವೇಳೆ ಕರ್ನಾಟಕದಲ್ಲಿ 10 ಪರ್ಸೆಂಟ್ ಸರ್ಕಾರ ಇದೆ ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದರು. 'ಈಗಿನದು 20 ಪರ್ಸೆಂಟ್ ಸರ್ಕಾರ' ಎಂದು ಸಿದ್ದರಾಮಯ್ಯ ಹಂಗಿಸುತ್ತಿದ್ದಾರೆ. ತಮ್ಮ ಪಕ್ಷದ ನೇತೃತ್ವದ ಸರ್ಕಾರದ ಬಗ್ಗೆ ಬಂದಿರುವ ಟೀಕೆಗೆ ಪ್ರಾಮಾಣಿಕವಾಗಿ ಪ್ರತಿಕ್ರಿಯಿಸಿ, ಜನರಿಗೆ ಉತ್ತರದಾಯಿಯಾಗುವ ಹೊಣೆಯನ್ನು ಪ್ರಧಾನಿ ಮೋದಿ ಹೊರಲೇಬೇಕು.

ಚುರುಮುರಿ



ಕೊರಕೊರೋನ...

● ಬಿ.ಎನ್.ಮಲ್ಲೇಶ್

'ಕೊರಕೊರೋನ ಕಳೆದರೂ ಕೊರೋನ ಮರಳಿ ಬರುತಿದೆ, ಹೊಸ ವರುಷಕೆ ಹೊಸ ಕೊರೋನವ ಹೊಸತು ಹೊಸತು ತರುತಿದೇ... ಕೊರಕೊರೋ...'

'ಏಯ್... ನಿಲ್ಸಲೆ, ಅದೇನ್ ಕೊರಕೊರ ಅಂತೀಯಲೆ, ನಿನ್ ಮಕ ನಾಯಿ ನೆಕ್ಕ, ಈಗಿನ್ನೂ ಹಬ್ಬ ಮಾಡಿ ಹೋಳಿಗಿ ತಿಂದು ಕುಂತಿದೀವಿ, ಬಂದ ಕೊರೊಕೊರ ಅನ್ನೊಕ್ತ...' ತೆಪರೇಸಿ ಮೇಲೆ ದುಬ್ಬೀರ ರೇಗಿದ.

'ಅದ್ಯಾಕಂಗೆ ಸಿಟ್ ಮಾಡ್ತೀಯಲೆ, ಕೊರೋನಾ ಅಬ್ಬರಿಸ್ತಾ ಐತಲ್ಲ ಅದ್ಕೆ ಹಂಗಂದ್ನೆಪ. ಹೋಗ್ಲಿ ಹಬ್ಬ ಜೋರಾತ? ಎಣ್ಣೆ ನೀರು, ಬೇವು ಬೆಲ್ಲ, ಹೋಳಿಗಿ ತುಪ್ಪ ಎಲ್ಲ ಮಸ್ತ್ ಆತು ಅನ್ರಿ...' ತೆಪರೇಸಿ ವಿಚಾರಿಸಿದ.

'ನಮ್ಮದೇನೋ ಎಣ್ಣೆ ನೀರು, ನಿಂದು ಎಣ್ಣೆಗೆ ನೀರಾ?' ಗುಡ್ಡೆ ನಕ್ಕ.

'ಈ ಸಲ ಚಂದ್ರ ಕಾಣ್ಲೆಲ್ಲ, ಏನೋ ಗಂಡಾಂತರ ಇರಬೇಕು ಅನುಸ್ತತಿ' ಕೊಟ್ರೇಶಿ ಆತಂಕ ವ್ಯಕ್ತಪಡಿಸಿದ.

'ಏನು? ಚಂದ್ರ ಕಾಣಿಸ್ಲಿಲ್ವ? ನಮ್ ಕಡಿ ಕಾಣ್ತಲ್ಲ...?' ತೆಪರೇಸಿಗೆ ಆಶ್ಚರ್ಯ.

'ಚಂದ್ರ ಕಂಡ್ನಾ? ನಿನಿಗೆ ಮೋಸ್ಟ್‌ಲೀ ಎರಡೆರಡು ಕಂಡಿರಬೇಕು...' ದುಬ್ಬೀರನ ಕೀಟಲೆಗೆ ಎಲ್ಲರೂ ನಕ್ಕರು.

'ಅದಿರ್ಲಿ, ಈ ಗಂಡಾಂತರ ಅಂದ್ಯಲ್ಲ ಕೊಟ್ರ, ಅದು ಗಂಡಾಂತರನೇ ಯಾಕೆ? ಹೆಂಡಾಂತರ ಅಂತ ಯಾಕಿಲ್ಲ?' ತೆಪರೇಸಿ ಮಾತು ಬದಲಿಸಿದ.

'ನಿನ್ನಂಥ ಗಂಡಂದಿರೇ ಜಾಸ್ತಿ ಕಂಟಕ ತರೋದ್ರಿಂದ ಗಂಡಾಂತರ ಅಂತ ಮಾಡಿರಬೇಕು' ಕೊಟ್ರೇಶಿ ತನಗೆ ತಿಳಿದದ್ದು ಹೇಳಿದ.

'ಯಾಕಲೆ ಹೆಂಡತೀರು ಕಂಟಕ ತರಲ್ವ? ಹೆಂಡತಿ ಅಂದ್ರೆ ಏನಂತ ತಿಳಿದಿದಿ? ಹೆಂಡ + ಅತಿ ಹೆಂಡತಿ ಅಂತ...' ತೆಪರೇಸಿ ಪಾಂಡಿತ್ಯ ಪ್ರದರ್ಶಿಸಿದ.

ಹೆಂಡ + ಅತಿ ಹೆಂಡತಿ ಯಾವ ಸಂಧಿ ಗೊತ್ತಾ?' ಗುಡ್ಡೆ ಕೇಳಿದ.

'ಲೋಪ ಸಂಧಿ ಇರಬೇಕು'.

'ಯಾವ ಲೋಪ?'

'ಹೆಂಡತಿ ಮುಂದೆ ಬಾಲ ಬಿಚ್ಚಿದ್ರೆ ಚಾಪೆ ದಿಂಬು ಲೋಪ!' ದುಬ್ಬೀರನ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ದಿನದ ಟ್ವೀಟ್



ಮಾಡಬೇಕಾದುದು...

ಟ್ವಿಟರ್‌ನಲ್ಲಿ ಅಂಬೇಡ್ಕರ್ ಆರಾಧನೆ ಚೆನ್ನಾಗಿಯೇ ನಡೆಯುತ್ತಿದೆ! ವಿಶೇಷವಾಗಿ ದಲಿತ ವಿದ್ಯಾವಂತ ಹಾಗೂ ಉದ್ಯೋಗಸ್ಥರಲ್ಲಿ ಒಂದು ಮನವಿ. ನೀವು ಪ್ರತಿಯೊಬ್ಬರೂ ನಿಮ್ಮ ಚೈತನ್ಯಕ್ಕೆ ಅನುಗುಣವಾಗಿ 1 ಅಥವಾ 10 ಅಥವಾ 100 ಅಥವಾ 1000ದಂತೆ, ಅವಕಾಶವಂಚಿತ ಇತರ ದಲಿತ ಕುಟುಂಬಗಳನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ತರಲು ಸಂಕಲ್ಪ ಮಾಡಿ!

ಪ್ರಹ್ಲಾದ್ ಕೆ. ಹನುಮಂತಯ್ಯ, ಎಂಜಿನಿಯರ್

25 ವರ್ಷಗಳ ಹಿಂದೆ

ಮಂಗಳವಾರ, 16-4-1996

● **ಅಭ್ಯರ್ಥಿಗಳು ಕೇಳಿದರೆ ರಕ್ಷಣೆಗೆ ಸೂಚನೆ**

ಬೆಂಗಳೂರು, ಏ. 15– ಲೋಕಸಭಾ ಚುನಾವಣೆಗೆ ರಾಜ್ಯದಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಪೈಕಿ ಯಾರೇ ತಮಗೆ ರಕ್ಷಣೆ ಒದಗಿಸಬೇಕು ಎಂದು ಕೇಳಿದರೂ ಅಂಥವರಿಗೆ ರಕ್ಷಣೆ ಕೊಡಲು ಗೃಹ ಇಲಾಖೆಗೆ ಸೂಚನೆ ನೀಡಲಾಗಿದೆ. ಆದರೆ, ಈವರೆವಿಗೆ ಇಂತಹ ಯಾವ ಮನವಿಗಳೂ ಬಂದಿಲ್ಲ ಎಂದು ಮುಖ್ಯಮಂತ್ರಿ ಎಚ್.ಡಿ.ದೇವೇಗೌಡ ಅವರು ಇಂದು ಇಲ್ಲಿ ತಿಳಿಸಿದರು.

ಭಟ್ಕಳ ಕ್ಷೇತ್ರದ ಬಿಜೆಪಿ ಶಾಸಕ ಡಾ. ಯು.ಚಿತ್ತರಂಜನ್ ಅವರ ಕಗ್ಗೊಲೆ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಲು ರಾಜ್ಯ ಸಚಿವ ಸಂಪುಟ ಇಂದು ತನ್ನ ಒಪ್ಪಿಗೆಯನ್ನು ನೀಡಿದೆ ಎಂದು ಅವರು ಹೇಳಿದರು.

● **ಭ್ರಷ್ಟಾಚಾರ ನಿರ್ಮೂಲನೆಗೆ 8 ಅಂಶದ ಕಾರ್ಯಕ್ರಮ**

ನವದಹೆಲಿ, ಏ. 15 (ಯುಎನ್‌ಐ)– ಸಾರ್ವಜನಿಕ ಜೀವನದಿಂದ ಭ್ರಷ್ಟಾಚಾರದ ನಿರ್ಮೂಲನಕ್ಕೆ ಎಂಟು ಅಂಶಗಳ ಸಮಗ್ರ ಕಾರ್ಯಕ್ರಮ, ಕೇಂದ್ರೀಯ ತನಿಖಾ ಸಂಸ್ಥೆಯನ್ನು (ಸಿಬಿಐ) ಸರ್ಕಾರಿ ಹತೋಟಿಯಿಂದ ಮುಕ್ತಗೊಳಿಸಿ ಸ್ವಾಯತ್ತ ತನಿಖಾ ವ್ಯವಸ್ಥೆಯಾಗಿ ಮಾರ್ಪಡಿಸುವುದು, ಸಮಗ್ರ ಬೆಳೆ ವಿಮಾ ಯೋಜನೆ, ಕೃಷಿ ಉತ್ಪನ್ನ ಸಾಗಣೆ ಮೇಲಿನ ನಿಯಂತ್ರಣ ರದ್ದು. ಇವು, ಜನತಾದಳ ಇಂದು ಬಿಡುಗಡೆ ಮಾಡಿದ ಲೋಕಸಭಾ ಚುನಾವಣಾ ಪ್ರಣಾಳಿಕೆಯ ಮುಖ್ಯ ಅಂಶಗಳು.

50 ವರ್ಷಗಳ ಹಿಂದೆ

ಶುಕ್ರವಾರ, 16-4-1971

● **ರಾಜ್ಯದ ಸರ್ಕಾರಿ ಕಚೇರಿಗಳಿಗೆ ಶನಿವಾರ– ಭಾನುವಾರ ಎರಡೂ ದಿನ ರಜೆ ಸಂಭವ**

ಬೆಂಗಳೂರು, ಏ. 15– ಇನ್ನು ಮುಂದೆ ರಾಜ್ಯ ಸರ್ಕಾರದ ನೌಕರರಿಗೆ ವಾರಕ್ಕೆರಡು ದಿನ ರಜಾ. ಶನಿವಾರ ಹಾಗೂ ಭಾನುವಾರ ಬಿಟ್ಟು ಉಳಿದ ದಿನಗಳು ಈಗಿರುವ ಏಳು ಗಂಟೆ ಕೆಲಸದ ಅವಧಿಯ ಬದಲು (ಬೆಳಿಗ್ಗೆ 10.30ರಿಂದ ಸಂಜೆ 5.30) ಇನ್ನು ಮೇಲೆ ಬೆಳಿಗ್ಗೆ 10ರಿಂದ 5.45ರವರೆಗೆ ಇರುವುದು. ಮಾಮೂಲಿನಂತೆ ಪ್ರತಿದಿನ ಅರ್ಧಗಂಟೆ ಊಟದ ಬಿಡುವು ಮುಂದುವರಿಯಲಿದೆ. ಈ ಬಗ್ಗೆ ಸದ್ಯದಲ್ಲೇ ಸರ್ಕಾರದ ಆಜ್ಞೆ ಹೊರಡಲಿದೆ.

ಮೇಲ್ಕಂಡ ಕೆಲಸದ ಕಾಲ ಸೆಕ್ರೆಟೇರಿ-ಯಟ್‌ಗೆ ಅನ್ವಯಿಸಲಿದೆ. ಬೇರೆ ಕಚೇರಿಗಳ ಕೆಲಸದ ಕಾಲ ಬೆಳಿಗ್ಗೆ 9ರಿಂದ ಸಂಜೆ 4.45ರವರೆಗೆ. ಬೆಂಗಳೂರು ನಗರದ ಮಟ್ಟಿಗೆ ಮಾತ್ರ ಈ ರೀತಿ ಕೆಲಸದ ಕಾಲದಲ್ಲಿ ಬದಲಾವಣೆ ಮಾಡಲಾಗುವುದು. ವಾರಕ್ಕೆ ಎರಡು ದಿನ ರಜಾ ಪದ್ಧತಿ ಅಂತರ ರಾಷ್ಟ್ರೀಯ ಮಾದರಿಯಾಗಿದೆ. ಈಗಾಗಲೇ ಪಂಜಾಬ್‌ನಲ್ಲಿ ಈ ಪದ್ಧತಿ ಜಾರಿಯಲ್ಲಿ ಬಂದಿದೆ.

● **ಪೂರ್ವ ಬಂಗಾಳದ ಸಮರ: ಪಾಕಿಸ್ತಾನದ ಆಂತರಿಕ ವ್ಯವಹಾರವಲ್ಲ ಎಂದು ರಾಯಭಾರಿ ಕೀಟಿಂಗ್**

ಮುಂಬೈ, ಏ. 15– ಪೂರ್ವ ಬಂಗಾಳದಲ್ಲಿನ ದಾರುಣ ಘಟನೆಗಳು ಪಾಕಿಸ್ತಾನದ ಆಂತರಿಕ ವ್ಯವಹಾರಗಳೆಂದು ಅಮೆರಿಕ ಸರ್ಕಾರ ಭಾವಿಸದೆಂದು ಭಾರತದಲ್ಲಿನ ಅಮೆರಿಕದ ರಾಯಭಾರಿ ಕೆನೆತ್ ಬಿ. ಕೀಟಿಂಗ್ ಅವರು ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಂಗತ

ಆರೋಗ್ಯಕ್ಕಾಗಿ ಸ್ವಯಂ 'ಲಾಕ್‌ಡೌನ್'

ಈಗಲೂ ಕಾಲ ಮಿಂಚಿಲ್ಲ, ಸ್ವಸ್ಥರಾಗಿ ಉಳಿಯಲು ಮುನ್ನೆಚ್ಚರಿಕೆ ವಹಿಸೋಣ

● ಡಾ. ಚನ್ನು ಅ. ಹಿರೇಮಠ

ಕೊರೊನಾ ಕಾರಣದಿಂದಾಗಿ ಕಂಗೆಟ್ಟಿರುವ ಜನಸಾಮಾನ್ಯರು ಅದಕ್ಕಿಂತಲೂ ಹೆಚ್ಚು ಕಂಗಾಲಾಗಿರುವುದು ಲಾಕ್‌ಡೌನ್‌ನ ಭೀತಿಯಿಂದಾಗಿ! ಲಾಕ್‌ಡೌನ್ ಪ್ರಸ್ತಾವ ಇಲ್ಲ ಎಂದು ಸರ್ಕಾರ ಹೇಳಿದೆ. ಕೋವಿಡ್ ಬಗ್ಗೆ ಚರ್ಚಿಸಲು ಇದೇ 18ರಂದು ಸರ್ವಪಕ್ಷ ನಾಯಕರ ಸಭೆ ಕರೆದಿದೆ. ಆದರೆ, ದೃಶ್ಯಮಾಧ್ಯಮಗಳಲ್ಲಿ ಮಾತ್ರ ಅದೇ ಊಹಾಪೋಹ. ಲಾಕ್‌ಡೌನ್ ಬಗ್ಗೆಯೇ ಹೆಚ್ಚು ಚರ್ಚೆ. ಕಳೆದ ವರ್ಷ ಲಾಕ್‌ಡೌನ್ ಜಾರಿಗೊಳಿಸಿದ್ದರ ಪರಿಣಾಮವನ್ನು ಜನ ಕಂಡುಂಡಿದ್ದಾರೆ. ಸರ್ಕಾರದ ಅರ್ಥ ವ್ಯವಸ್ಥೆಯೂ ಅಧೋಗತಿಗಿಳಿದಿದ್ದನ್ನು ಅಲ್ಲಗಳೆಯಲಾಗದು.

ಕೊರೊನಾ ಪ್ರಸರಣವನ್ನು ಬರೀ ಲಾಕ್‌ಡೌನ್‌ನಿಂದ ಪರಿಹರಿಸಲು ಸಾಧ್ಯವಿಲ್ಲ. ಜನಸಂಚಾರದಿಂದ ಸೋಂಕು ಹರಡುವ ಸಾಧ್ಯತೆ ಹೆಚ್ಚಾಗಿರುವ ಕಾರಣ, ಜನರು ಅಲ್ಲಲ್ಲಿಯೇ ತಾತ್ಕಾಲಿಕವಾಗಿ ನೆಲೆಗೊಳ್ಳಲಿ ಎಂಬುದು ಲಾಕ್‌ಡೌನ್‌ನ ಮೂಲ ಆಶಯ.

ಲಾಕ್‌ಡೌನ್ ಜಾರಿಯಾಗುತ್ತದೆಯೋ ಇಲ್ಲವೋ, ಆದರೆ ಊಹಾಪೋಹದ ಮಾತುಗಳೇ ಜನರಲ್ಲಿ ಅನಗತ್ಯ ಆತಂಕ ಹುಟ್ಟಿಸುತ್ತಿವೆ. ಮಿಗಿಲಾಗಿ ವ್ಯಾಪಾರ ವಹಿವಾಟುಗಳ ಮೇಲೆ ಪರಿಣಾಮವನ್ನೂ ಬೀರಲಾರಂಭಿಸಿವೆ. ಕಾರ್ಮಿಕರು ಹಿಂದಿನ ಕಹಿ ಅನುಭವದ ಕಾರಣ ತಮ್ಮ ಊರುಗಳತ್ತ ತೆರಳಲಾರಂಭಿಸಿದ್ದಾರೆ. ಕಳೆದ ವರ್ಷ ಊರಿಗೆ ತೆರಳಿದ್ದ ಎಷ್ಟೋ ಕಾರ್ಮಿಕರು ವಾಪಸ್ ಬಂದೇ ಇಲ್ಲ. ಯಾವುದೇ ಉದ್ಯಮಿಯನ್ನು ಮಾತನಾಡಿಸಿದರೂ ಕಾರ್ಮಿಕರದ್ದೇ ದೊಡ್ಡ ಸಮಸ್ಯೆ ಎಂದು ಹೇಳುತ್ತಾರೆ. ಮಾರುಕಟ್ಟೆ ಇದೀಗ ಅಲ್ಪಸ್ವಲ್ಪ ಚೇತರಿಕೆ ಕಾಣುತ್ತಿರುವ ಸಮಯದಲ್ಲಿ ಮತ್ತೆ ಲಾಕ್‌ಡೌನ್‌ನ ಪ್ರಸ್ತಾಪ ಕೂಲಿ ಕಾರ್ಮಿಕರಿಂದ ಹಿಡಿದು ದೊಡ್ಡ ದೊಡ್ಡ ಉದ್ದಿಮೆದಾರರನ್ನೂ ಆತಂಕಕ್ಕೀಡು ಮಾಡಿದೆ.

ಕಳೆದ ವಾರ ವ್ಯಾಪಾರಿ ಸ್ನೇಹಿತನೊಬ್ಬನ ಜತೆ ಮಾತನಾಡುತ್ತಿದ್ದಾಗ ಆತ 'ಅಗತ್ಯ ಸರಕು-ಸಾಮಗ್ರಿಗಳು ಸಮಯಕ್ಕೆ ಸರಿಯಾಗಿ ಎಲ್ಲಿಯೂ ಲಭಿಸುತ್ತಿಲ್ಲ. ಲಭಿಸಿದರೂ ಉತ್ಪಾದನಾ ಮಟ್ಟ, ಪ್ರಮಾಣ ಕಡಿಮೆ ಇರುವ ಕಾರಣ ದುಬಾರಿ ಬೆಲೆಗೆ ಮಾರಾಟವಾಗುತ್ತಿವೆ. ಉದ್ಯಮಗಳು ಸರಿದಾರಿಗೆ ಬರಬೇಕೆಂದರೆ ಕನಿಷ್ಠ ಎರಡು ವರ್ಷಗಳಾದರೂ ಬೇಕಿತ್ತು. ಆದರೆ ಇದೀಗ ಕೊರೊನಾ ಎರಡನೇ ಅಲೆ ವ್ಯಾಪಾರೋದ್ದಿಮೆಗಳನ್ನು ಮತ್ತೆ ನಲುಗಿಸುತ್ತಿದೆ' ಎಂದು ಹೇಳಿದ.

ಎರಡನೇ ಅಲೆ ಅಂದಾಜಿಸಿದ ಸಮಯದಲ್ಲಿ ಯಾವಾಗ ಜೀವ ಹಿಂಡಲಿಲ್ಲವೋ ಅದು ಜನರಲ್ಲಿ ಭ್ರಮಾತ್ಮಕ ಉತ್ಸಾಹವನ್ನು ಹುಟ್ಟುಹಾಕಿತು. ಹಳ್ಳಿ-ಪಟ್ಟಣಗಳಲ್ಲಿ ಯಥಾಪ್ರಕಾರ ಮಾರಿಹಬ್ಬ ಆಚರಿಸಲಾಯಿತು. ಮದುವೆ ಮುಂಜಿಗಳ ಅಬ್ಬರ ಶುರುವಾಯಿತು. ರಾಜಕೀಯ ಪಕ್ಷಗಳು ಜಿದ್ದಿಗೆ ಬಿದ್ದಂತೆ ಸಮಾವೇಶಗಳನ್ನು ಏರ್ಪಡಿಸಿದವು. ಉಪಚುನಾವಣೆಗಳು, ರಾಜಕೀಯ ಸಭೆಗಳು ನಿರಾತಂಕವಾಗಿ ನಡೆದವು. ಯಾವ ರಾಜಕೀಯ ನೇತಾರರಿಗೂ ಸಮಾವೇಶಗಳಿಂದ ದೂರವುಳಿಯಲು ಕೊರೊನಾ ವೈರಾಣು ಒಂದು ಕಾರಣವೇ ಆಗಲಿಲ್ಲ.

ಇವೆಲ್ಲದರ ಪರಿಣಾಮವಾಗಿ, ಕೊರೊನಾ ಮತ್ತೆ ದಾಂಗುಡಿ ಇಟ್ಟಿದೆ. ಲಸಿಕೆ ನೀಡುವ ಪ್ರಕ್ರಿಯೆ ಆರಂಭವಾಗಿದ್ದರೂ ಎಲ್ಲರಿಗೂ ದೊರಕಿಸಿಕೊಡಲು ಇನ್ನೂ ಬಹುದೂರ ಕ್ರಮಿಸಬೇಕಾಗಿದೆ. ಕೆಲವರು ಆರೋಗ್ಯಕ್ಕಾಗಿ ಮಾಸ್ಕ್ ಧರಿಸಬಯಸದೆ, ದಂಡ ತೆರಬೇಕಲ್ಲ ಎಂಬ ಭಯಕ್ಕೆ ಬೇಕಾಬಿಟ್ಟಿ ಧರಿಸುತ್ತಿದ್ದಾರೆ. ಬೀದಿಬದಿ ಅಂಗಡಿಗಳ ವ್ಯಾಪಾರ ಶೈಲಿ ಯಥಾವತ್ ಇದೆ. ಕೊರೊನಾ ಕಾರಣವಾಗಿ ಮಾರ್ಗಸೂಚಿ ಪಾಲನೆ, ಆರೋಗ್ಯಕರ ವಾತಾವರಣದ ಪಾಲನೆ ಎಲ್ಲಿಯೂ ಕಂಡು ಬರುತ್ತಿಲ್ಲ. ಹೀಗಾದರೆ ನಾವು ಕೊರೊನಾವನ್ನು ಹೇಗೆ ಹಿಮ್ಮೆಟ್ಟಿಸಲು ಸಾಧ್ಯ?

ಕೊರೊನಾದಿಂದ ಸಾವಿಗೀಡಾದವರ, ಸೋಂಕಿಗೀಡಾದವರ ಮನೆಯವರ ಅನುಭವಗಳನ್ನು ಆಲಿಸಬೇಕು. ಅದರ ಭಯಾನಕತೆ, ಆರ್ಥಿಕ ಮುಗ್ಗಟ್ಟು, ಆತಂಕ, ಕೆಲವು ಆಸ್ಪತ್ರೆಗಳಲ್ಲಿನ ಸುಲಿಗೆ, ಆಮ್ಲಜನಕಕ್ಕಾಗಿ ಪರದಾಟ, ಬೆಡ್‌ಗಾಗಿ ಪರಿತಪಿಸಿದ ಪರಿಗಳ ವಿವರ ಅರಿತರೆ ಇತರರು ನಿಶ್ಚಿತವಾಗಿಯೂ ಜಾಗರೂಕರಾಗುತ್ತಾರೆ.



ಈಗಲೂ ಕಾಲ ಮಿಂಚಿಲ್ಲ. ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವ ಬದಲು, ಬದುಕಿನ ಗಳಿಕೆಯು ಆಸ್ಪತ್ರೆಯ ಖರ್ಚುವೆಚ್ಚಗಳಿಗೆ ವಿನಿಯೋಗವಾಗುವ ಬದಲು, ಸಮಾಜದ ಕಣ್ಣಲ್ಲಿ ಬೇಡದವರಂತೆ ಪರಿಗಣಿತವಾಗಿ ಹಿಂಸೆಗೆ ಒಳಗಾಗುವ ಬದಲು ಕೆಲವೇ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡರೆ ಮೊದಲು ನಾವು ಸ್ವಸ್ಥರಾಗಿ ಇರಬಹುದು, ತನ್ಮೂಲಕ ಸಮುದಾಯವನ್ನೂ ಸ್ವಸ್ಥವಾಗಿ ಇಡಬಹುದು.

ಮುಂದಿನ ಕೆಲವು ದಿನಗಳ ಕಾಲ ಮನೆಯಿಂದ ಅನಗತ್ಯವಾಗಿ ಹೊರಬರದೆ ಗೃಹ ವಾಸ್ತವ್ಯವನ್ನೇ ಮಾಡೋಣ. ಅಧಿಕ ಜನ ಸೇರುವ ಸಭೆ ಸಮಾರಂಭಗಳಲ್ಲಿ ಭಾಗಿಯಾಗದಿರೋಣ. ಅಗತ್ಯ ಸಾಮಗ್ರಿಗಳನ್ನು ವಾರಕ್ಕೆ ಒಮ್ಮೆ ಖರೀದಿಸಿ ಇಟ್ಟುಕೊಳ್ಳೋಣ. ಬಂಧುಬಳಗ-ಮಿತ್ರರ ಕೂಟಗಳನ್ನು ಮೊಬೈಲ್‌ನಲ್ಲಿಯೇ ನಿಭಾಯಿಸೋಣ. ವೈಯಕ್ತಿಕ ಶುಚಿತ್ವ ಎಷ್ಟು ಮಹತ್ವವೋ ಸಾಮುದಾಯಿಕ ಸ್ವಚ್ಛತೆಯೂ ಅಷ್ಟೇ ಮುಖ್ಯ. ಪರಸ್ಪರ ಅಂತರ ಕಾಯ್ದುಕೊಳ್ಳುವಿಕೆ, ಮುಖಗವಸು ಧರಿಸುವುದನ್ನು ಮರೆಯದಿರೋಣ.

ಕೊರೊನಾವೋ ಮತ್ತಾವುದೋ ಕಾರಣದಿಂದ ನಾವು ಸಾಯಬಹುದು. ಆದರೆ ನಮ್ಮ ನಿರ್ಗಮನವು ನಮ್ಮನ್ನು ಅವಲಂಬಿಸಿದವರ ಮೇಲೆ ಉಂಟು ಮಾಡುವ ಆಘಾತ, ಅನನುಕೂಲಗಳನ್ನು ನೆನಪಿಸಿಕೊಳ್ಳೋಣ. ನಮ್ಮವರನ್ನು ಪ್ರೀತಿಸುವ ನಾವು, ನಮ್ಮ-ವರಿಗಾಗಿಯೇ ಸ್ವಲ್ಪ ಕಾಳಜಿ ವಹಿಸಿದರೆ ನಾವೂ ಸುಖಿಗಳು, ಅನ್ಯರೂ ಸುಖಿಗಳು. ಸಾತ್ವಿಕ ಚಿಂತನೆಗಳು-ಸಮಷ್ಟಿ ಪ್ರಜ್ಞೆಯಿಂದ ಮಾತ್ರ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯ.

ವಾಚಕರ ವಾಣಿ

ಪುರಾತತ್ವ ಸ್ಮಾರಕ: ದುರುಪಯೋಗ ತಪ್ಪಲಿ

ಐಹೊಳೆಯಲ್ಲಿನ ಹಲವು ಐತಿಹಾಸಿಕ ಸ್ಮಾರಕಗಳು ಸ್ಥಳೀಯರ ಬಯಲು ಶೌಚಕ್ಕೆ, ಸಾಕುಪ್ರಾಣಿಗಳನ್ನು ಕಟ್ಟಲು ಹಾಗೂ ಇತರ ಸ್ವಂತ ಕೆಲಸಗಳಿಗೆ ಬಳಕೆಯಾಗುತ್ತಿರುವುದನ್ನು ಓದಿ (ಪ್ರ.ವಾ., ಏ. 15) ಮನಸ್ಸಿಗೆ ನೋವಾಯಿತು. ಐತಿಹಾಸಿಕ ಸ್ಮಾರಕಗಳ ಬಗ್ಗೆ ಯಾವುದೇ ಕಾಳಜಿ ಇಲ್ಲದಿರುವ ಸ್ಥಳೀಯರು ಒಂದೆಡೆಯಾದರೆ, ಸಂಬಂಧಪಟ್ಟ ಇಲಾಖಾ ಸಿಬ್ಬಂದಿಯ ಬೇಜವಾಬ್ದಾರಿತನ ಮತ್ತೊಂದೆಡೆ ಎದ್ದು ಕಾಣುತ್ತದೆ. ಸ್ಮಾರಕಗಳ ದುರುಪಯೋಗ, ಅತಿಕ್ರಮಣ, ಹಾನಿ, ವಿಗ್ರಹಗಳ ಕಳ್ಳತನದಂತಹ ಸಂದರ್ಭಗಳಲ್ಲಿ ಇಲಾಖೆಯವರು ಸಿಬ್ಬಂದಿ ಕೊರತೆಯ ನೆಪ ಹೇಳಿ ಕೈತೊಳೆದುಕೊಂಡು ಬಿಡುತ್ತಾರೆ. ಸ್ಮಾರಕಗಳನ್ನು ಕಾಪಾಡಿಕೊಳ್ಳುವುದರಲ್ಲಿ ಇಲಾಖೆಯ ಜವಾಬ್ದಾರಿ ಎಷ್ಟಿರುತ್ತದೋ ಅದಕ್ಕಿಂತ ಹೆಚ್ಚಿನ ಹೊಣೆಯನ್ನು ಸ್ಥಳೀಯರು ಹೊರಬೇಕಾಗುತ್ತದೆ.

ಈ ತರಹದ ಸ್ಮಾರಕಗಳನ್ನು ಈಗ ಸುಲಭವಾಗಿ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಆದರೆ ಇರುವುದನ್ನು ಕಾಪಾಡಿ-ಕೊಳ್ಳುವುದರ ಬಗ್ಗೆ ಯೋಚಿಸಬೇಕಲ್ಲವೇ? ಮುಂದಿನ ಪೀಳಿಗೆಯವರು ಐತಿಹಾಸಿಕ ಸ್ಮಾರಕಗಳನ್ನು ನೋಡುವಂತಹ ಅವಕಾಶಕ್ಕಾಗಿ ಅವುಗಳನ್ನು ಉಳಿಸುವುದು ಸರ್ಕಾರದ ಮತ್ತು ನಮ್ಮೆಲ್ಲರ ಜವಾಬ್ದಾರಿ. ಐತಿಹಾಸಿಕ ಸ್ಮಾರಕಗಳಿಗೆ ಪ್ರವಾಸಿಗರನ್ನು ಸೆಳೆಯುವಲ್ಲಿ ಪ್ರವಾಸೋದ್ಯಮ ಇಲಾಖೆ ರೂಪುರೇಷೆಯನ್ನು ಸಿದ್ಧಪಡಿಸುವುದು ಅತ್ಯಂತ ಅವಶ್ಯಕ. ಸರ್ಕಾರ ಸರಿಯಾದ ಸಾರಿಗೆ ಸೌಕರ್ಯ ಒದಗಿಸಿ, ಹೆಚ್ಚಿನ ಪ್ರವಾಸಿಗರು ಭೇಟಿ ನೀಡುವಂತೆ ನೋಡಿಕೊಳ್ಳಬೇಕು. ಇದರಿಂದ ಬರುವ ಆದಾಯವನ್ನು ಸ್ಮಾರಕಗಳ ಸೂಕ್ತ ನಿರ್ವಹಣೆಗೆ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಜೊತೆಗೆ ಸ್ಮಾರಕಗಳ ದುರುಪಯೋಗವನ್ನೂ ತಡೆಯಬಹುದು.

ಕೆ.ಪ್ರಭಾಕರ, ಬೆಂಗಳೂರು

ರಸ್ತೆಗುಂಡಿಗೆ ಪೊಲೀಸರು ಹೊಣೆ?

ರಾಜಧಾನಿಯಲ್ಲಿ ಹೆಚ್ಚಾಗುತ್ತಿರುವ ಅಪಘಾತ ಪ್ರಕರಣಗಳನ್ನು ನಿಯಂತ್ರಿಸುವ ಸಲುವಾಗಿ, ದ್ವಿಚಕ್ರ ವಾಹನಗಳ ಎರಡೂ ಬದಿಗಳಲ್ಲಿ ಕನ್ನಡಿ ಮತ್ತು ಇಂಡಿಕೇಟರ್‌ಗಳನ್ನು ಪೊಲೀಸರು ಕಡ್ಡಾಯಗೊಳಿಸಿದ್ದಾರೆ. ಇಲ್ಲದಿದ್ದರೆ ₹ 500 ದಂಡ ವಿಧಿಸಲು ಬೆಂಗಳೂರು ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಬಿ.ಆರ್.ರವಿಕಾಂತೇಗೌಡ ಆದೇಶ ಹೊರಡಿಸಿದ್ದಾರೆ.

ವಿಪರ್ಯಾಸವೆಂದರೆ, ರಾಜ್ಯದಲ್ಲಿ ದ್ವಿಚಕ್ರವಾಹನ ಸವಾರರು ನೆಮ್ಮದಿಯಿಂದ ವಾಹನ ಸವಾರಿ ಮಾಡಲು ಯೋಗ್ಯವಿರುವ ರಸ್ತೆಗಳೇ ಇಲ್ಲ. ರಸ್ತೆಗಳಲ್ಲಿ ಇರುವ ಗಂಡಾಂತರ ಗುಂಡಿಗಳನ್ನು ಮುಚ್ಚದೇ ತೆಪ್ಪಗಿರುವುದು ಕರ್ನಾಟಕ ಪೊಲೀಸ್ ಕಾಯ್ದೆಯ ಅನ್ವಯ ದಂಡನಾರ್ಹ ಅಪರಾಧ! ರಾಜ್ಯದಲ್ಲಿ ಗುಂಡಿರಹಿತ ರಸ್ತೆಗಳು ಹುಡುಕಿದರೂ ಸಿಗುವುದಿಲ್ಲ. ಇಂತಹ ಗುಂಡಾ-ಗುಂಡಿ ರಸ್ತೆಗಳಲ್ಲಿ ಚಲಿಸುವ ದ್ವಿಚಕ್ರವಾಹನ ಸವಾರರು ತಮ್ಮ ವಾಹನಗಳ ಎರಡೂ ಕಡೆ ಕನ್ನಡಿ ಹಾಗೂ ಇಂಡಿಕೇಟರ್ ಅಳವಡಿಸುವ ಜೊತೆಗೆ ಐಎಸ್‌ಐ ಗುರುತಿರುವ ಹೆಲ್ಮೆಟ್ ಧರಿಸಿ ಅದರೊಂದಿಗೆ ಬುಲೆಟ್ ಪ್ರೂಫ್ ಜಾಕೆಟ್ ತೊಟ್ಟು ಸಂಚರಿಸಿದರೂ ಕೆಲವೊಮ್ಮೆ ಅಪಘಾತಗಳಿಂದ ತಪ್ಪಿಸಿ-ಕೊಳ್ಳಲು ಸಾಧ್ಯವಾಗುವುದಿಲ್ಲ.

ದ್ವಿಚಕ್ರ ವಾಹನ ಸವಾರರನ್ನು ಬೇಟೆಯಾಡುವುದೊಂದೇ ಪೊಲೀಸರ ಕರ್ತವ್ಯವೇ? ರಸ್ತೆಗಳು ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳುವುದು ಸಂಬಂಧಿಸಿದ ನಗರಪಾಲಿಕೆಯ ಜವಾಬ್ದಾರಿ. ಈ ಜವಾಬ್ದಾರಿಯನ್ನು ನಿರ್ವಹಿಸಲು ವಿಫಲವಾದ ಪಾಲಿಕೆಗಳ ವಿರುದ್ಧ ದೂರು ದಾಖಲಿಸಿಕೊಂಡು ಕಾನೂನು ಕ್ರಮ ಕೈಗೊಳ್ಳಬೇಕಾದ ಜವಾಬ್ದಾರಿ ಪೊಲೀಸರದ್ದು. ಈ ಕೂಡಲೇ ಪೊಲೀಸ್ ಅಧಿಕಾರಿಗಳು ಎಚ್ಚೆತ್ತು, ರಾಜ್ಯದ ಎಲ್ಲಾ ರಸ್ತೆಗಳಲ್ಲಿ ಇರುವ ಒಂದೊಂದೂ ಗುಂಡಿ, ಹಳ್ಳ-ಕೊಳ್ಳಗಳ ವಿಚಾರವಾಗಿ ಸಂಬಂಧಿಸಿದ ನಗರಪಾಲಿಕೆಯ ವಿರುದ್ಧ 'ಕರ್ನಾಟಕ ಪೊಲೀಸ್ ಕಾಯ್ದೆ'ಯ ಅನ್ವಯ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಮುಲಾಜಿಲ್ಲದೇ ಕಾನೂನು ಕ್ರಮ ಜರುಗಿಸಲಿ.

ಪಿ.ಜೆ.ರಾಘವೇಂದ್ರ, ಮೈಸೂರು

'ವರ್ಷ ತೊಡಕು' ಹಿಂದಿದೆ ರಹಸ್ಯ!

ಯುಗಾದಿ ಮರುದಿನದ 'ವರ್ಷ ತೊಡಕು'ಗಾಗಿ ಮಾಂಸದಂಗಡಿಗಳ ಮುಂದೆ ಕಿ.ಮೀ. ದೂರದಿಂದ ಜನ ಸರದಿಯಲ್ಲಿ ನಿಂತಿದ್ದ ಬಗ್ಗೆ ವರದಿಯಾಗಿದೆ (ಪ್ರ.ವಾ., ಏ. 15). ವರ್ಷ ತೊಡಕು ಎಂಬ ಪದವು 'ವರ್ಷ ತೊಡಗು', 'ಹೊಸ್ತಡಕು', 'ವರ್ಷ ತಡಕು' ಮೊದಲಾದ ರೂಪಗಳಲ್ಲಿ ಬಳಕೆಯಲ್ಲಿದೆ. ಆಡುನುಡಿಯಲ್ಲಿ ಇವುಗಳಿಗೆ ತಮ್ಮದೇ ರೀತಿ ಅರ್ಥ ಸಮರ್ಥನೆಗಳನ್ನೂ ಕೆಲವರು ಕೊಟ್ಟುಕೊಳ್ಳುತ್ತಾರೆ. ಹೊಸ ವರ್ಷದಲ್ಲಿ ತೊಡಗುವುದರಿಂದ ವರ್ಷ ತೊಡಗು ಎಂದೂ ಮರುದಿನವೂ ಹೋಳಿಗೆ ಸಿಕ್ಕೀತೇ ಎಂದು 'ತಡಕು'ವುದರಿಂದ ವರ್ಷ ತಡಕು ಎಂದೂ ಕೆಲವರು ವಿವರಿಸುವುದುಂಟು. ಆದರೆ ಈ ಯಾವ ರೂಪಗಳೂ ಭಾಷಿಕವಾಗಿ ಸರಿಯಾದುವಲ್ಲ. ರಾಜ್ಯದ ವಿವಿಧ ಸಮುದಾಯ, ಪ್ರದೇಶಗಳ ಆಚಾರ ಸಂಪ್ರದಾಯಾದಿಗಳನ್ನು ಹಲವು ದಶಕಗಳಿಂದ ಅಧ್ಯಯನ ಮಾಡಿದ, ಕಾಲೇಜುಗಳಲ್ಲಿ ಭಾಷೆ, ಸಾಹಿತ್ಯವನ್ನೂ ಬೋಧಿಸಿದ ಅನುಭವದ ನನಗೆ ಅರಿವಾಗಿರುವುದೆಂದರೆ, ಭಾಷೆ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಇದರ ಸರಿ ರೂಪ ಹೊಸತು + ಅಡಗು ಅಥವಾ ವರ್ಷದಡಗು ಎಂಬುದು.


ಹಳಗನ್ನಡದಲ್ಲಿ ಅಡಗು ಎಂದರೆ ಬಾಡು ಅಥವಾ ಮಾಂಸ. ಯುಗಾದಿಯಂದು ಸಿಹಿಯೂಟ ಸವಿದ ಮೇಲೆ ಮಾಂಸಾಹಾರ ಪ್ರಿಯರಿಗೆ ಮಾರನೇ ದಿನ ಮೀಸಲಾಯಿತು. ಸಿಹಿ ಖಾರಗಳೆರಡೂ ವರ್ಷಪೂರ್ತಿ ದೊರಕಲೆಂಬ ಆಶಯ ಇದರದು. ಆದರೆ ಅನೇಕರಿಗೆ ಹಣ ಕೊಟ್ಟು ಮಾಂಸ ಖರೀದಿಯ ಸಾಮರ್ಥ್ಯ ಇರಲಿಲ್ಲ. ಊರೆಲ್ಲಕ್ಕೂ ಮಾಂಸ ಒದಗಿಸಬೇಕಾದ ಅಗತ್ಯವೂ ಕೆಲವೆಡೆ ಇತ್ತು. ಅಂತೆಯೇ ಯುಗಾದಿಯ ಮಾರನೆಯ ಮುಂಜಾನೆ ಊರ ದೇವರ ಹೆಸರಲ್ಲಿ ಪಕ್ಕದ ಕಾಡು ಮೇಡಿಗೆ ಗಂಡಸರೆಲ್ಲಾ ಹೋಗಿ ಕಾಡುಪ್ರಾಣಿಗಳನ್ನು ಬೇಟೆಯಾಡಿ ತಂದು, ದೇವರಿಗೂ ಒಪ್ಪಿಸಿ ಎಲ್ಲರೂ ಹಂಚಿಕೊಳ್ಳುವ ಸಂಪ್ರದಾಯ ಬೆಳೆಯಿತು. ಕಾಡುಪ್ರಾಣಿಗಳ ಸಂತತಿ ನಿಯಂತ್ರಣದ ಆಶಯವೂ ಇದರಲ್ಲಿದೆ. ಈಗಲೂ ಅನೇಕ ಊರುಗಳಲ್ಲಿ ಈ ಆಚರಣೆ ಇದೆ. ಅಂದರೆ ಹೊಸ ವರ್ಷದ ಆರಂಭದಲ್ಲಿ ಸೇವಿಸುವ ಅಡಗು ಎಂಬುದೇ ಕಾಲಾಂತರದಲ್ಲಿ ಅವರವರಿಗೆ ತೋಚಿದ ರೂಪದ ಅಪಭ್ರಂಶಗಳಾಗಿವೆ. ಇದು ಮಾಂಸ ಪ್ರಧಾನ-ವಾದುದೆಂಬುದನ್ನು ಗ್ರಹಿಸಿದರೆ ಮಿಕ್ಕದ್ದು ತಾನೇ ಅರ್ಥವಾಗುತ್ತದೆ.

ಬುದ್ಧಿವಂತರು ಎನಿಸಿಕೊಂಡವರು ಇನ್ನಾದರೂ ಈ ಸರಿ ರೂಪ ಬಳಸಿದರೆ ಜನಸಾಮಾನ್ಯರೂ ಅದನ್ನು ಒಪ್ಪಿ ಬಳಸುತ್ತಾರೆ. ಸಾವಿರಾರು ವರ್ಷಗಳ ಹಿಂದಿನ ಹಳಗನ್ನಡದ ಅಪ್ಪಟ ಕನ್ನಡ ಪದವೊಂದು ನಮ್ಮೊಂದಿಗೆ ಜೀವಂತ ಉಳಿಯುವಂತಾಗುತ್ತದೆ ಅಲ್ಲವೇ?

ಡಾ. ಟಿ.ಗೋವಿಂದರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ದೇಶದಲ್ಲಿ ಕೋವಿಡ್ ಲಸಿಕೆ ಕೊರತೆ?




‘ಕೋವಿಡ್‌-19 ಲಸಿಕೆ ಕೊರತೆಯಾಗಿದೆ. ತಕ್ಷಣವೇ ಲಸಿಕೆ ಪೂರೈಸದಿದ್ದರೆ, ಲಸಿಕೆ ನೀಡಿಕೆ ಕಾರ್ಯಕ್ರಮವನ್ನು ಸ್ಥಗಿತಗೊಳಿಸಬೇಕಾಗುತ್ತದೆ’ ಎಂದು ದೇಶದ 10 ರಾಜ್ಯಗಳು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿವೆ. ಕೆಲವು ರಾಜ್ಯಗಳಲ್ಲಿ ಹಲವು ಲಸಿಕಾ ಕೇಂದ್ರಗಳನ್ನು ಮುಚ್ಚಲಾಗಿದೆ. ಕೇಂದ್ರ ಸರ್ಕಾರವು ಹಾಕಿಕೊಂಡಿರುವ ಗುರಿಯನ್ನು ಮುಟ್ಟಲು ಭಾರಿ ಪ್ರಮಾಣದಲ್ಲಿ ಲಸಿಕೆಯ ಡೋಸ್‌ಗಳು ಅಗತ್ಯವಿದೆ. ಇವು ಪೂರೈಕೆ ಆಗದಿದ್ದಲ್ಲಿ, ಲಸಿಕೆ ಕಾರ್ಯಕ್ರಮಕ್ಕೆ ಹಿನ್ನಡೆ ಆಗುತ್ತದೆ ಎಂದು ರಾಜ್ಯ ಸರ್ಕಾರಗಳು ವಿವರಿಸಿವೆ.

ಭಾರತವು ಜುಲೈ ಅಂತ್ಯದ ವೇಳೆಗೆ 30 ಕೋಟಿ ಜನರಿಗೆ ಲಸಿಕೆ ನೀಡುವ ಗುರಿ ಹಾಕಿಕೊಂಡಿದೆ. 30 ಕೋಟಿ ಜನರಿಗೆ 2 ಡೋಸ್‌ನಂತೆ ಲಸಿಕೆ ನೀಡಿದರೆ, ಒಟ್ಟು 60 ಕೋಟಿ ಡೋಸ್‌ಗಳಷ್ಟು ಲಸಿಕೆ ಬೇಕಾಗುತ್ತದೆ. ಇದರಲ್ಲಿ ಶೇ 6.5ರಷ್ಟು ಲಸಿಕೆ ಪೋಲಿನ ಪ್ರಮಾಣ ಸೇರಿಸಿಕೊಂಡರೆ, 64 ಕೋಟಿ ಡೋಸ್‌ಗಳಷ್ಟು ಲಸಿಕೆ ಬೇಕಾಗುತ್ತದೆ. ಆದರೆ ದೇಶದಲ್ಲಿ ಲಸಿಕೆ ತಯಾರಿಕೆ ಪ್ರಮಾಣ ಈ ಮಟ್ಟದಲ್ಲಿ ಇಲ್ಲದ ಕಾರಣ, ಈ ಕಾಲಮಿತಿಯಲ್ಲಿ 30 ಕೋಟಿ ಜನರಿಗೆ ಲಸಿಕೆ ನೀಡಲು ಸಾಧ್ಯವೇ ಎಂಬ ಪ್ರಶ್ನೆ ಮೂಡಿದೆ.

ಪ್ರತಿದಿನ ಗರಿಷ್ಠ ಸಂಖ್ಯೆಯಲ್ಲಿ ಕೋವಿಡ್ ಲಸಿಕೆ ನೀಡುತ್ತಿರುವ ದೇಶಗಳ ಸಾಲಿನಲ್ಲಿ ಭಾರತವು ಮೊದಲ ಸ್ಥಾನವನ್ನು ಕಾಯ್ದುಕೊಂಡಿದೆ. ಈಗ ಪ್ರತಿದಿನ ಸರಾಸರಿ 32 ಲಕ್ಷ ಡೋಸ್‌ನಷ್ಟು ಲಸಿಕೆ ನೀಡಲಾಗುತ್ತಿದೆ. ಆದರೆ ಇಷ್ಟೇ ಮಟ್ಟದಲ್ಲಿ ಲಸಿಕೆ ಪೂರೈಕೆ ಆಗುತ್ತಿಲ್ಲವಾದುದರಿಂದ, ಲಸಿಕೆ ಕಾರ್ಯಕ್ರಮಕ್ಕೆ ಹಿನ್ನಡೆಯಾಗುತ್ತಿದೆ. ಮುಂದಿನ ದಿನಗಳಲ್ಲಿ ಪ್ರತಿದಿನ ನೀಡಲಾಗುತ್ತಿರುವ ಡೋಸ್‌ಗಳ ಸಂಖ್ಯೆ ಇಳಿಕೆಯಾಗುವ ಅಪಾಯವಿದೆ.

ಈಗಿನ ಸ್ಥಿತಿಗತಿ



ಆಧಾರ: ಪಿಟಿಐ, ರಾಯಿಟರ್ಸ್‌, ಕೇಂದ್ರ ಆರೋಗ್ಯ ಸಚಿವಾಲಯ

ಭಾರತದಲ್ಲಿ ಲಸಿಕೆ ಕೊರತೆಗೆ ಕಾರಣಗಳು

ಭಾರತದಲ್ಲಿ ಕೋವಿಡ್ ಲಸಿಕೆ ಕೊರತೆಯಾಗಲು ಹಲವು ಕಾರಣಗಳನ್ನು ಗುರುತಿಸಲಾಗಿದೆ. ವಿಶ್ವದ ಅತ್ಯಂತ ದೊಡ್ಡ ಲಸಿಕೆ ತಯಾರಿಕಾ ಕಂಪನಿಯಾದ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಭಾರತದಲ್ಲಿ ಕೋವಿಡ್ ಲಸಿಕೆ ಉತ್ಪಾದಿಸುತ್ತಿದೆ. ಬ್ರಿಟನ್‌ನ ಆಸ್ಟ್ರಾ ಜೆನೆಕಾ ಕಂಪನಿಯ ಕೋವಿಶೀಲ್ಡ್ ಲಸಿಕೆಯನ್ನು ಸೀರಂ ತಯಾರಿಸುತ್ತಿದೆ.

ಕೋವಿಡ್ ಲಸಿಕೆ ಪೂರೈಕೆ ಬದ್ಧತೆಯ ಕೋವ್ಯಾಕ್ಸ್ ಕಾರ್ಯಕ್ರಮದ ಅಡಿ ಕೋವಿಶೀಲ್ಡ್ ಅನ್ನು ತಯಾರಿಸುವ ಗುತ್ತಿಗೆ ಸೀರಂಗೆ ದೊರೆತಿದೆ. ಈ ಒಪ್ಪಂದದ ಪ್ರಕಾರ ಸೀರಂ ಕಂಪನಿಯು, ಕೋವಿಶೀಲ್ಡ್ ಲಸಿಕೆಯ 100 ಕೋಟಿ ಡೋಸ್‌ಗಳನ್ನು ಕೋವ್ಯಾಕ್ಸ್‌ಗೆ ಪೂರೈಕೆ ಮಾಡಬೇಕಿದೆ. ಇದರಲ್ಲಿ 2020ರ ಡಿಸೆಂಬರ್ ಅಂತ್ಯದ ವೇಳೆಗೆ 40 ಕೋಟಿ ಡೋಸ್‌ಗಳನ್ನು ಪೂರೈಕೆ ಮಾಡಬೇಕಿತ್ತು. ಆದರೆ ಏಪ್ರಿಲ್ 14ರ ಅಂತ್ಯದ ವೇಳೆಗೆ 2.8 ಕೋಟಿ ಡೋಸ್‌ಗಳನ್ನು ಮಾತ್ರ ಪೂರೈಕೆ ಮಾಡಿದೆ. ನಿಗದಿತ ಪ್ರಮಾಣದಲ್ಲಿ ಲಸಿಕೆ ಪೂರೈಕೆ ಮಾಡುತ್ತಿಲ್ಲ ಎಂದು ಆಸ್ಟ್ರಾ ಜೆನೆಕಾ ಕಂಪನಿ ಸೀರಂಗೆ ನೋಟಿಸ್ ನೀಡಿತ್ತು.

ಸೀರಂ ಕಂಪನಿಯು ಪ್ರತಿ ತಿಂಗಳು ಗರಿಷ್ಠ 10 ಕೋಟಿ ಡೋಸ್‌ನಷ್ಟು ಲಸಿಕೆ ತಯಾರಿಸುವ ಸಾಮರ್ಥ್ಯ ಹೊಂದಿದೆ. ಆದರೆ, ವಿವಿಧ ಕಾರಣಗಳಿಂದ ಈಗ ಪ್ರತಿ ತಿಂಗಳು 6ರಿಂದ 6.5 ಕೋಟಿ ಡೋಸ್‌ನಷ್ಟು ಲಸಿಕೆ ಮಾತ್ರ ತಯಾರಿಸುತ್ತಿದೆ. ಭಾರತ್ ಬಯೋಟೆಕ್ ಕಂಪನಿಯು ಪ್ರತಿ ತಿಂಗಳು 1.5 ಕೋಟಿ ಡೋಸ್‌ನಷ್ಟು ಕೋವ್ಯಾಕ್ಸಿನ್ ಲಸಿಕೆ ತಯಾರಿಸುತ್ತಿದೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಜುಲೈ ಅಂತ್ಯದ ವೇಳೆಗೆ ಎರಡೂ ಕಂಪನಿಗಳು 28 ಕೋಟಿ ಡೋಸ್‌ಗಳನ್ನಷ್ಟೇ ತಯಾರಿಸುತ್ತವೆ. ಅಷ್ಟೂ ಡೋಸ್‌ಗಳು ಭಾರತಕ್ಕೇ ಲಭ್ಯವಾಗುತ್ತವೆ ಎಂಬ ಖಾತರಿ ಇಲ್ಲ. ಏಕೆಂದರೆ ಒಡಂಬಡಿಕೆ ಪ್ರಕಾರ ಕೋವ್ಯಾಕ್ಸ್‌ಗೆ ಲಸಿಕೆ ಪೂರೈಕೆ ಮಾಡಬೇಕಿದೆ.

ಪ್ರತಿ ತಿಂಗಳು 10 ಕೋಟಿ ಡೋಸ್ ತಯಾರಿಸುವ ಸಾಮರ್ಥ್ಯ ಇದ್ದರೂ, ಸೀರಂ ಕಂಪನಿ ಈಗ 65 ಕೋಟಿ ಡೋಸ್‌ಗಳನ್ನಷ್ಟೇ ಉತ್ಪಾದಿಸುತ್ತಿದೆ. ಲಸಿಕೆ ತಯಾರಿಕೆಗೆ ಅಗತ್ಯವಾದ ಬಾಟಲಿ, ಫಿಲ್ಟರ್ ಮತ್ತಿತರ ಪೂರಕ ವಸ್ತುಗಳನ್ನು ಅಮೆರಿಕದಿಂದ ಆಮದು ಮಾಡಿಕೊಳ್ಳಬೇಕು. ಈ ವಸ್ತುಗಳ ರಫ್ತನ್ನು ಅಮೆರಿಕವು ಈಗ ನಿಷೇಧಿಸಿದೆ. ಈ ಕಾರಣದಿಂದ ಈ ಕಚ್ಚಾವಸ್ತುಗಳ ಕೊರತೆ ಉಂಟಾಗಿದೆ. ಹೀಗಾಗಿಯೇ ಗರಿಷ್ಠ ಪ್ರಮಾಣದಲ್ಲಿ ಲಸಿಕೆ ತಯಾರಿಸಲು ಸಾಧ್ಯವಾಗುತ್ತಿಲ್ಲ ಎಂದು ಸೀರಂ ವಿವರಿಸಿದೆ.

ಲಸಿಕೆಗಳಿಗೆ ಅನುಮತಿ

ಇನ್ನೂ ಮೂರು-ನಾಲ್ಕು ಕೋವಿಡ್ ಲಸಿಕೆಗಳ ಬಳಕೆಗೆ ಕೇಂದ್ರ ಸರ್ಕಾರವು ಶೀಘ್ರವೇ ಅನುಮತಿ ನೀಡುವ ಸಾಧ್ಯತೆ ಇದೆ. ಅನುಮತಿ ದೊರೆತರೆ, ಈ ಲಸಿಕೆಗಳ ತಯಾರಿಕೆ ಆರಂಭವಾಗುತ್ತದೆ. ಆಗ ದೇಶದಲ್ಲಿ ಲಸಿಕೆ ಪೂರೈಸುವಲ್ಲಿ ಯಾವುದೇ ತೊಡಕು ಆಗುವುದಿಲ್ಲ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಬುಧವಾರ ಹೇಳಿದ್ದಾರೆ.

10 ರಾಜ್ಯಗಳಲ್ಲಿ ಲಸಿಕೆ ಕೊರತೆ

ನಮಗೆ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಪೂರೈಕೆಯಾಗುತ್ತಿಲ್ಲ. ಈಗ ಇರುವ ಲಸಿಕೆ ಮೂರು-ನಾಲ್ಕು ದಿನಗಳಿಗಷ್ಟೇ ಸಾಕಾಗುತ್ತದೆ ಎಂದು 10 ರಾಜ್ಯಗಳು ಹೇಳಿವೆ.

ಮಹಾರಾಷ್ಟ್ರ : ರಾಜ್ಯದಲ್ಲಿ ಇನ್ನು 5 ದಿನಕ್ಕೆ ಆಗುವಷ್ಟು ಲಸಿಕೆ ಮಾತ್ರ ಇದೆ. ಹಲವು ಲಸಿಕಾ ಕೇಂದ್ರಗಳನ್ನು ಮುಚ್ಚಲಾಗಿದೆ ಎಂದು ಮಹಾರಾಷ್ಟ್ರ ಆರೋಗ್ಯ ಇಲಾಖೆ ಶನಿವಾರ ಹೇಳಿಕೆ ನೀಡಿತ್ತು

ಪಂಜಾಬ್: ರಾಜ್ಯದಲ್ಲಿ 5.7 ಲಕ್ಷ ಡೋಸ್ ಲಸಿಕೆ ಇದ್ದು, ಇದು ಕೇವಲ 5 ದಿನಕ್ಕೆ ಸಾಕಾಗುತ್ತದೆ. ಕೇಂದ್ರ ಸರ್ಕಾರ ಶೀಘ್ರವೇ ಲಸಿಕೆ ಪೂರೈಕೆ ಮಾಡಬೇಕು ಎಂದು ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಶನಿವಾರ ಮನವಿ ಸಲ್ಲಿಸಿದ್ದರು

ರಾಜಸ್ಥಾನ: ರಾಜ್ಯದಲ್ಲಿ ಲಸಿಕೆ ಕೊರತೆಯಾಗಿದೆ. ಶೀಘ್ರವೇ ಲಸಿಕೆ ಪೂರೈಸಿ ಎಂದು ಶುಕ್ರವಾರ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರು ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದರು

ಛತ್ತೀಸಗಡ: ರಾಜ್ಯದಲ್ಲಿ ಇರುವ ಲಸಿಕೆ ಮೂರು ದಿನಗಳಿಗಷ್ಟೇ ಸಾಕಾಗುತ್ತದೆ. ತಕ್ಷಣವೇ ಲಸಿಕೆ ಪೂರೈಸಿ ಎಂದು ಛತ್ತೀಸಗಡ ಸರ್ಕಾರ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಸೋಮವಾರ ಪತ್ರ ಬರೆದಿದೆ

ದೆಹಲಿ: ರಾಜ್ಯದಲ್ಲಿರುವ ಲಸಿಕೆ ಸಂಗ್ರಹವು ಇನ್ನು 7 ದಿನಗಳಿಗಷ್ಟೇ ಸಾಕಾಗುತ್ತದೆ ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸೋಮವಾರ ಹೇಳಿದ್ದಾರೆ

ಒಡಿಶಾ: ರಾಜ್ಯದಲ್ಲಿ 4.2 ಲಕ್ಷ ಡೋಸ್‌ನಷ್ಟು ಲಸಿಕೆ ಮಾತ್ರ ಇದೆ. ಇದು ಮೂರು ದಿನಕ್ಕೆ ಸಾಕಾಗುತ್ತದೆ. ತಕ್ಷಣವೇ 25 ಲಕ್ಷ ಡೋಸ್ ಪೂರೈಕೆ ಮಾಡಿ ಎಂದು ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಶುಕ್ರವಾರ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದರು. ರಾಜ್ಯದಲ್ಲಿ ಈಗ 11 ಜಿಲ್ಲೆಗಳಲ್ಲಿ ಲಸಿಕೆ ಕಾರ್ಯಕ್ರಮ ಸ್ಥಗಿತಗೊಳಿಸಲಾಗಿದೆ.

ಆಂಧ್ರಪ್ರದೇಶ: ರಾಜ್ಯದಲ್ಲಿರುವ 3 ಲಕ್ಷ ಕೋವಿಡ್ ಲಸಿಕೆ ಡೋಸ್‌ಗಳು ಇನ್ನೆರಡು ದಿನದಲ್ಲಿ ಖಾಲಿಯಾಗುತ್ತವೆ. 45 ವರ್ಷ ಮೇಲ್ಪಟ್ಟ 1 ಕೋಟಿ ಜನರು ರಾಜ್ಯದಲ್ಲಿದ್ದಾರೆ. ಲಸಿಕೆಯ ತೀವ್ರ ಕೊರತೆ ಇದೆ ಎಂದು ರಾಜ್ಯದ ಆರೋಗ್ಯ ಇಲಾಖೆ ಅಧಿಕಾರಿಗಳು ಮಂಗಳವಾರ ಮಾಹಿತಿ ನೀಡಿದ್ದಾರೆ

ಜಾರ್ಖಂಡ್: ರಾಜ್ಯದಲ್ಲಿರುವ ಕೋವಿಡ್ ಲಸಿಕೆ ಡೋಸ್‌ಗಳು ಎರಡು ದಿನದಲ್ಲಿ ಖಾಲಿಯಾಗುತ್ತವೆ. ತಕ್ಷಣವೇ ಲಸಿಕೆ ಪೂರೈಕೆ ಮಾಡಿ ಎಂದು ರಾಜ್ಯ ಸರ್ಕಾರವು ಮಂಗಳವಾರವಷ್ಟೇ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಮನವಿ ಸಲ್ಲಿಸಿದೆ

ಉತ್ತರಾಖಂಡ: ರಾಜ್ಯದಲ್ಲಿರುವ ಲಸಿಕೆಯು ಒಂದೆರಡು ದಿನದಲ್ಲಿ ಖಾಲಿಯಾಗುತ್ತದೆ. ಲಸಿಕೆ ಪೂರೈಸದಿದ್ದರೆ, ಲಸಿಕಾ ಕಾರ್ಯಕ್ರಮ ಸ್ಥಗಿತವಾಗುತ್ತದೆ ಎಂದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ

ಅಸ್ಸಾಂ: ರಾಜ್ಯದಲ್ಲಿರುವ ಲಸಿಕೆಯು ಒಂದೆರಡು ದಿನದಲ್ಲಿ ಖಾಲಿಯಾಗುತ್ತದೆ. ಲಸಿಕೆ ಪೂರೈಸದಿದ್ದರೆ, ಲಸಿಕಾ ಕಾರ್ಯಕ್ರಮ ಸ್ಥಗಿತವಾಗುತ್ತದೆ ಎಂದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ

ಶೀಘ್ರದಲ್ಲಿ ಸ್ಪುಟ್ನಿಕ್–ವಿ ಲಸಿಕೆ ಲಭ್ಯ



ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಬಳಿಕ ಇದೀಗ ಭಾರತದಲ್ಲಿ ಮೂರನೇ ಲಸಿಕೆಯ ತುರ್ತು ಬಳಕೆಗೆ ಅನುಮತಿ ಸಿಕ್ಕಿದೆ. ರಷ್ಯಾದ ‘ಸ್ಪುಟ್ನಿಕ್‌-ವಿ’ ಲಸಿಕೆಯು ಕೆಲವೇ ದಿನಗಳಲ್ಲಿ ಲಭ್ಯವಾಗಲಿದೆ. ದೇಶದಲ್ಲಿ ಉಂಟಾಗಿರುವ ಲಸಿಕೆ ಅಭಾವ ಒಂದಿಷ್ಟು ಕಡಿಮೆಯಾಗುವ ವಿಶ್ವಾಸ ವ್ಯಕ್ತವಾಗಿದೆ.

ಲಸಿಕೆಯು ಶೇ 91.6ರಷ್ಟು ಪರಿಣಾಮಕಾರಿ ಎಂದು ರಷ್ಯಾ ಹೇಳಿದೆ. ‘21 ದಿನಗಳ ಅಂತರದಲ್ಲಿ ಎರಡು ಡೋಸ್‌ಗಳನ್ನು ನೀಡಲಾಗುತ್ತದೆ. ಎರಡೂ ಡೋಸ್‌ಗಳಲ್ಲಿ ಬಳಸಿರುವ ಫಾರ್ಮುಲಾ ಬೇರೆ ಬೇರೆ. ಇದರಿಂದ ಮನುಷ್ಯನ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ’ ಎಂದು ಲಸಿಕೆ ಪೂರೈಸುವ ರಷ್ಯಾದ ಆರ್‌ಡಿಐಎಫ್ ತಿಳಿಸಿದೆ.

ಭಾರತದ ಡಾ. ರೆಡ್ಡೀಸ್ ಲ್ಯಾಬೊರೇಟರಿ ಜೊತೆ ರಷ್ಯಾ ಒಪ್ಪಂದ ಮಾಡಿಕೊಂಡಿದೆ. ಆರಂಭದಲ್ಲಿ ರಷ್ಯಾದಿಂದ ಲಸಿಕೆ ಆಮದಾಗಲಿದ್ದು, ಮೇ ತಿಂಗಳ ಮಧ್ಯಭಾಗದಲ್ಲಿ ಭಾರತಕ್ಕೆ ಬರಲಿವೆ. ಸೆಪ್ಟೆಂಬರ್ ಹೊತ್ತಿಗೆ ಭಾರತದಲ್ಲೇ ಲಸಿಕೆ ಉತ್ಪಾದನೆಯಾಗಲಿದೆ. ವಿವಿಧ ಔಷಧ ಉತ್ಪಾದಕ ಸಂಸ್ಥೆಗಳ ಜೊತೆ ರಷ್ಯಾ ಮಾತುಕತೆ ನಡೆಸುತ್ತಿದೆ. ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಸಹ ಲಸಿಕೆ ಉತ್ಪಾದನೆಗೆ ಒಲವು ತೋರಿದೆ.

ವಾರ್ಷಿಕವಾಗಿ 85 ಕೋಟಿ ಡೋಸ್ ಲಸಿಕೆ ಉತ್ಪಾದಿಸುವ ಗುರಿ ಹಾಕಿಕೊಳ್ಳಲಾಗಿದೆ. ಈ ಲಸಿಕೆ ಬಂದ ಬಳಿಕ ದೇಶದ ಲಸಿಕಾ ಕಾರ್ಯಕ್ರಮಕ್ಕೆ ಇನ್ನಷ್ಟು ವೇಗ ಸಿಗುವ ವಿಶ್ವಾಸದಲ್ಲಿ ಸರ್ಕಾರ ಇದೆ. ಸ್ಪುಟ್ನಿಕ್ ವಿ ಲಸಿಕೆಗೆ ಜಗತ್ತಿನ ಸುಮಾರು 60 ದೇಶಗಳು ಅನುಮತಿ ನೀಡಿದ್ದು, ಜಗತ್ತಿನ ಶೇ 40ರಷ್ಟು ಜನರಿಗೆ ಈ ಲಸಿಕೆ ಲಭ್ಯವಾಗಲಿದೆ.

ರೆಮ್‌ಡಿಸಿವಿರ್ ಔಷಧದ ಕೊರತೆ

ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ಅತ್ಯಗತ್ಯ ಎನಿಸಿರುವ ರೆಮ್‌ಡಿಸಿವಿರ್ ಔಷಧದ ಅಭಾವ ಕಾಡಲಾರಂಭಿಸಿದೆ. ಕೋವಿಡ್ ಎರಡನೇ ಅಲೆ ವ್ಯಾಪಿಸಿರುವ ಈ ಹೊತ್ತಿನಲ್ಲಿ ರೆಮ್‌ಡಿಸಿವಿರ್ ಅಲಭ್ಯತೆಯು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಬಹುತೇಕ ಆಸ್ಪತ್ರೆಗಳು ರೆಮ್‌ಡಿಸಿವಿರ್ ಇಲ್ಲದ ಕಾರಣ ಚಿಕಿತ್ಸೆಯನ್ನು ಮುಂದೂಡಬೇಕಾದ ಪರಿಸ್ಥಿತಿ ಬಂದೊದಗಿದೆ. ಪ್ರತಿ ರೋಗಿಯ ಚಿಕಿತ್ಸೆಗೆ 8–10 ರೆಮ್‌ಡಿಸಿವಿರ್ ಶೀಶೆಗಳು ಅಗತ್ಯ.

ಅತಿಯಾದ ಬೇಡಿಕೆಯೇ ಔಷಧದ ಅಭಾವಕ್ಕೆ ಕಾರಣ. ಪ್ರಸಕ್ತ ಮೈಕ್ರೋಲ್ಯಾಬ್ಸ್, ಮೈಲಾನ್ ಮತ್ತು ಜುಬಿಲಂಟ್ ಕಂಪನಿಗಳು ಮಾತ್ರ ಈ ಔಷಧವನ್ನು ಉತ್ಪಾದಿಸುತ್ತಿವೆ. ಆದರೂ ಬೇಡಿಕೆಗೆ ತಕ್ಕಷ್ಟು ಔಷಧ ಪೂರೈಕೆಯಾಗುತ್ತಿಲ್ಲ.


ಸಿಪ್ಲಾ, ಡಾ. ರೆಡ್ಡೀಸ್ ಲ್ಯಾಬ್, ಜುಬಿಲಂಟ್ ಸೇರಿದಂತೆ ಹಲವು ಕಂಪನಿಗಳು ಈ ಔಷಧವನ್ನು ಉತ್ಪಾದಿಸುತ್ತಿದ್ದವು. 2020ರ ಸೆಪ್ಟೆಂಬರ್‌ನಲ್ಲಿ ಒಟ್ಟು 24.4 ಲಕ್ಷ ಶೀಶೆಗಳನ್ನು ಉತ್ಪಾದಿಸಿದ್ದವು. ಈ ಪ್ರಮಾಣವನ್ನು 31.6 ಲಕ್ಷ ಶೀಶೆಗಳಿಗೆ ಹೆಚ್ಚಿಸಲಾಗಿತ್ತು. ಆದರೆ, ಡಿಸೆಂಬರ್ ಹೊತ್ತಿಗೆ ಕೋವಿಡ್ ಪ್ರಕರಣಗಳು ತಗ್ಗಲು ಆರಂಭವಾಗಿ, ಔಷಧದ ಬೇಡಿಕೆ ಕುಸಿಯಿತು. ಬಳಕೆಯಾಗದ ರೆಮ್‌ಡಿಸಿವಿರ್ ಔಷಧಗಳು ವಾಪಸ್ ಬರಲಾರಂಭಿಸಿದ್ದರಿಂದ ಉತ್ಪಾದನೆ ಸ್ಥಗಿತಗೊಳಿಸಲಾಯಿತು.

ಇದೀಗ ಎರಡನೇ ಅಲೆ ತೀವ್ರವಾಗುತ್ತಿದ್ದು, ರೆಮ್‌ಡಿಸಿವಿರ್‌ಗೆ ಹಾಹಾಕಾರ ಉಂಟಾಗಿದೆ. ಆದರೆ ಅಲ್ಲಿ ಉತ್ಪಾದನೆ ನಿಂತುಹೋಗಿದೆ. ಈಗ ಹೊಸದಾಗಿ ಉತ್ಪಾದನೆ, ಸಾಗಣೆ, ಪೂರೈಕೆ, ವಿತರಣೆಯ ಚಕ್ರ ತಿರುಗಬೇಕಿದೆ. ಕಾಳಸಂತೆಯಲ್ಲಿ ಮಾರಾಟ ಆರಂಭವಾಗಿದ್ದ ಕಾರಣ, ಕಳೆದ ವಾರವಷ್ಟೇ ಕೇಂದ್ರ ಸರ್ಕಾರವು ರೆಮ್‌ಡಿಸಿವಿರ್ ರಫ್ತು ಮೇಲೆ ನಿಷೇಧ ಹೇರಿ ಆದೇಶ ಹೊರಡಿಸಿತ್ತು.

ಮೂಲತಃ ಎಬೋಲಾ ವೈರಸ್ ಮತ್ತು ರಕ್ತಸ್ರಾವದ ಜ್ವರ ಚಿಕಿತ್ಸೆಗಾಗಿ 2014ರಲ್ಲಿ ತಯಾರಿಸಲಾದ ರೆಮ್‌ಡೆಸಿವಿರ್, ಈ ಎರಡೂ ಕಾಯಿಲೆಗಳಿಗೆ ಪರಿಣಾಮಕಾರಿ ಎನಿಸಲಿಲ್ಲ. ಆದರೆ ಇದು ಕೋವಿಡ್ ವಿರುದ್ಧ ಫಲಪ್ರದ ಎನಿಸಿತು. ಹೀಗಾಗಿ ಕೋವಿಡ್ ಚಿಕಿತ್ಸೆಯಲ್ಲಿ ಇದನ್ನು ಬಳಸುವಂತೆ ಸರ್ಕಾರವು ಮಾರ್ಗಸೂಚಿಯಲ್ಲಿ ತಿಳಿಸಿತ್ತು.


ವರದಿ: ಜಯಸಿಂಹ ಆರ್., ಅಮೃತಕಿರಣ ಬಿ.ಎಂ., ಪ್ರ.ವಾ. ಗ್ರಾಫಿಕ್ಸ್: ವಿಜಯಕುಮಾರಿ ಆರ್.

1.4 ಕೋಟಿ ಜನರಿಗಷ್ಟೇ ಎರಡನೇ ಡೋಸ್



ದೇಶದಲ್ಲಿ ಈವರೆಗೆ ಒಟ್ಟು **11.44** ಕೋಟಿ ಡೋಸ್‌ಗಳಷ್ಟು ಲಸಿಕೆ ನೀಡಲಾಗಿದ್ದರೂ, ಎರಡೂ ಡೋಸ್‌ಗಳನ್ನು ಪಡೆದವರ ಪ್ರಮಾಣ ಅತ್ಯಂತ ಕಡಿಮೆ ಇದೆ. ಈವರೆಗೆ **1.43** ಕೋಟಿ ಜನರಿಗಷ್ಟೇ ಕೋವಿಡ್ ಲಸಿಕೆಯ ಎರಡನೇ ಡೋಸ್ ನೀಡಲಾಗಿದೆ. ಮೊದಲೇ ಡೋಸ್ ಪಡೆದವರಿಗೆ ನಿಗದಿತ ಅವಧಿಯಲ್ಲಿ ಎರಡನೇ ಡೋಸ್ ನೀಡದೇ ಇದ್ದರೆ, ಮೊದಲ ಡೋಸ್ ಪಡೆದಿರುವುದು ವ್ಯರ್ಥವಾಗುತ್ತದೆ.

ರಾಜ್ಯಗಳಲ್ಲಿ ಲಸಿಕೆ ನೀಡಿಕೆ



*ಸೂಚನೆ: ಏಪ್ರಿಲ್ 15ರ ಬೆಳಿಗ್ಗೆವರೆಗೆ ನೀಡಲಾದ ಲಸಿಕೆಯ ಡೋಸ್‌ಗಳ ವಿವರ


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಕೋವಿಡ್‌-19** ಲಸಿಕೆ ತಯಾರಿಕೆಯಲ್ಲಿ ಭಾರತವು ಏಕಸ್ವಾಮ್ಯ ಸಾಧಿಸಿದೆ. ಆದರೆ ಈಗ ದೇಶದಲ್ಲಿ ಕೋವಿಡ್‌-19ನ ಹೊಸ ಪ್ರಕರಣಗಳು ವಿಪರೀತ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವ ಕಾರಣ, ಲಸಿಕೆ ರಫ್ತು ಮಾಡುವುದನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ನಿಷೇಧಿಸಿದೆ. ಲಸಿಕೆ ಪೂರೈಕೆಯಲ್ಲಿ ದೇಶದ ಅಗತ್ಯಕ್ಕೆ ಆದ್ಯತೆ ನೀಡಲಾಗಿದೆ. ಹೀಗಾಗಿ ದೇಶದ ಎಲ್ಲಾ ರಾಜ್ಯಗಳಿಗೂ ಲಸಿಕೆ ಸರಿಯಾಗಿ ಪೂರೈಕೆಯಾಗುತ್ತದೆ ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿದೆ. ಬಿಜೆಪಿಯ ಕೆಲವು ಬೆಂಬಲಿಗರು, ‘ಕೋವಿಡ್ ಲಸಿಕೆ ರಫ್ತು ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿ ಎಂದು ತಯಾರಿಕಾ ಕಂಪನಿಗಳಿಗೆ ಸರ್ಕಾರವು ಸೂಚನೆ ನೀಡಿದೆ’ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದಾರೆ.

✓ **ಆದರೆ,** ಕೋವಿಡ್ ಲಸಿಕೆ ರಫ್ತು ಮಾಡುವುದನ್ನು ನಿಷೇಧಿಸುವ ಯಾವ ಆದೇಶವನ್ನೂ ಹೊರಡಿಸಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಏಪ್ರಿಲ್ ಎರಡನೇ ವಾರದಲ್ಲಿಯೇ ಸ್ಪಷ್ಟನೆ ನೀಡಿದೆ. ‘ಲಸಿಕೆ ರಫ್ತು ಮಾಡುವುದನ್ನು ನಿಲ್ಲಿಸಿ ಎಂದು ಯಾವ ಕಂಪನಿಗೂ ಸೂಚನೆ ನೀಡಿಲ್ಲ. ಈಗ ದೇಶದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಹೀಗಾಗಿ ವಿದೇಶಗಳಿಗೆ ಲಸಿಕೆ ಪೂರೈಕೆ ಮತ್ತು ದೇಶಕ್ಕೆ ಲಸಿಕೆ ಪೂರೈಕೆ ಅನುಪಾತವನ್ನು ಬದಲಿಸುವ ಬಗ್ಗೆ ಚಿಂತನೆ ನಡೆದಿದೆ’ ಎಂದು ವಿದೇಶಾಂಗ ಸಚಿವಾಲಯವು ಮಾರ್ಚ್ 26ರಂದು ಸ್ಪಷ್ಟನೆ ನೀಡಿತ್ತು. ‘ಭಾರತದ ಸರ್ಕಾರದ ‘ಲಸಿಕೆ ಮೈತ್ರಿ’ ಕಾರ್ಯಕ್ರಮವನ್ನು ಮುಂದುವರಿಸುತ್ತೇವೆ. ಅದರಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ’ ಎಂದು ಏಪ್ರಿಲ್ 2ರಂದು ಸಹ ಸಚಿವಾಲಯವು ಸ್ಪಷ್ಟನೆ ನೀಡಿತ್ತು.

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ 16 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಅಶ್ವಿನಿ ಚತುರ್ಥಿ ಗಂ. 20-42 (ಹ. 2-31) ಶುಕ್ರವಾರ ನಿತ್ಯ ನಕ್ಷತ್ರ ರೋಹಿಣಿ ಗಂ. 35-22 (ರಾ. 8-22) ಸೌಭಾಗ್ಯ ನಾಮ ಯೋಗ ಗಂ 23-28 ಭದ್ರೆ ಕರಣ ಗಂ. 20-42 ವಿಷ ಗಂ. 13-3 ಪುರ್ವಿಷ ಗಂ. 50-44 ಅಮೃತ ಗಂ. 26-13 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-11 ಸೂರ್ಯಾಸ್ತ: 6-29 ಅದೃಷ್ಟ ಸಂಖ್ಯೆ 1, 8

ಮೇಷ: ಗಂಡಾಂತರಕ್ಕೆ ಬಲಿಯಾಗದಂತೆ ಹಿರಿಯರಿಂದ ಸಕಾಲಿಕ ಸಲಹೆಗಳು. ವೈಮನಸ್ಸು ನಿವಾರಣೆಯಾಗಿ ದೃಢ ಸಂಕಲ್ಪ. ಆರೋಗ್ಯದಲ್ಲಿ ಪ್ರಗತಿ. ಬಂಧುಗಳ ಆಗಮನ ಸಾಧ್ಯತೆ.

ವೃಷಭ: ಕೆಲಸ–ಕಾರ್ಯಗಳಲ್ಲಿ ಉತ್ತಮ ಪ್ರಗತಿ. ನಿಕಟವರ್ತಿಗಳಿಂದ ಅನುಕೂಲಕರ ಸಹಾಯ. ಆತ್ಮಸ್ಥೈರ್ಯ ಮೂಡುವುದು. ವ್ಯಾಪಾರದಲ್ಲಿ ಹೆಚ್ಚಿನ ಲಾಭದ ನಿರೀಕ್ಷೆ. ಗಣ್ಯರ ಭೇಟಿ ಸಂಭವ.

ಮಿಥುನ: ಭಿನ್ನಾಭಿಪ್ರಾಯದಿಂದಾಗಿ ನಿಂತು ಹೋದ ಕಾರ್ಯಗಳು ಒಮ್ಮತದಿಂದ ಸಾಧಿಸಲ್ಪಡುವವು. ಮದುವೆ ಮುಂತಾದ ಮಂಗಳಕಾರ್ಯಗಳ ನಿಶ್ಚಯ ಸಾಧ್ಯತೆ. ಕೆಲಸ ಕಾರ್ಯಗಳಲ್ಲಿ ಹುಮ್ಮಸ್ಸು.

ಕರ್ಕಾಟಕ: ಕುಟುಂಬದಲ್ಲಿ ಹೊಂದಾಣಿಕೆಯಿಂದ ಬೆಂಬಲ ಗಳಿಸುವಿರಿ. ವ್ಯಕ್ತಿಗಳ ಸಂಪರ್ಕದಿಂದಾಗಿ ಉತ್ತಮ ಲಾಭದ ನಿರೀಕ್ಷೆ. ಸಂಘರ್ಷದಿಂದ ದೂರ. ಗೆಳೆಯರಿಂದ ನೆಮ್ಮದಿ.

ಸಿಂಹ: ಬೇರೆಯವರ ವಿವಾದಗಳನ್ನು ಪರಿಹರಿಸುವಲ್ಲಿ ಮಧ್ಯಸ್ಥಿಕೆ ವಹಿಸಬೇಕಾದೀತು. ಅಡ್ಡಿ ಆತಂಕಗಳಿಲ್ಲದ ಜೀವನದಿಂದಾಗಿ ಉಲ್ಲಾಸ ಮೂಡುವುದು. ಸ್ನೇಹಿತರಿಂದಾಗಿ ಸಂತೋಷದ ವಾತಾವರಣ.

ಕನ್ಯಾ: ಮುಕ್ತ ಭಾವನೆಯಿಂದಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಪ್ರಯಾಣದ ಸಾಧ್ಯತೆ ಕಂಡುಬರುವುದು. ಆಶ್ಚರ್ಯಕರ ರೀತಿಯಲ್ಲಿ ಕೆಲಸ ಕಾರ್ಯಗಳು ಕೂಡಿಬರುವವು.

ತುಲಾ: ಆತ್ಮಶೋಧನೆಯಿಂದ ತಲೆದೋರಿರುವ ಆಂತರಿಕ ಗೊಂದಲಗಳು ನಿವಾರಣೆಯಾಗುವವು. ನಿಷ್ಕಲ್ಮಷ ಭಾವನೆಯಿಂದ ಸಮಾಧಾನ. ಸ್ನೇಹಿತರಿಂದ ಪ್ರಶಂಸೆ, ಸಂಗಾತಿಯಿಂದ ಉತ್ತಮ ಸಹಕಾರ.

ವೃಶ್ಚಿಕ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಿರಿ. ಅಚ್ಚರಿಯ ಸುದ್ದಿಯನ್ನು ಕೇಳುವ ಸಾಧ್ಯತೆ. ಸ್ವಪ್ರಯತ್ನದಿಂದ ಕಾರ್ಯಕ್ಷೇತ್ರಗಳಲ್ಲಿ ಉನ್ನತಿ. ಸಾಮಾಜಿಕ ಮನ್ನಣೆ ನಿಮ್ಮದಾಗಲಿದೆ.

ಧನು: ಬಿಚ್ಚು ಮನಸ್ಸಿನ ಸ್ಪಷ್ಟ ಹೇಳಿಕೆಯಿಂದಾಗಿ ಸಹೋದ್ಯೋಗಿಗಳಿಗೆ ಇರುಸು ಮುರುಸು. ಸತ್ಯದರ್ಶನದಿಂದ ಎಲ್ಲವೂ ನಿರಾಳ. ಸಂತೋಷದ ವಾತಾವರಣ ಮೂಡುವುದು.

ಮಕರ: ಸ್ನೇಹಿತರೊಂದಿಗೆ ವಿಷಯಗಳ ವಿನಿಮಯದಿಂದಾಗಿ ವಾತಾವರಣ ತಿಳಿಗೊಂಡು ಮನಸ್ಸಿಗೆ ನೆಮ್ಮದಿ. ವಿಶೇಷ ಭೋಜನ ಕೂಟಗಳಲ್ಲಿ ಭಾಗವಹಿಸುವ ಸಾಧ್ಯತೆ. ಸಂಗಾತಿಯಿಂದ ಸಹಕಾರ.

ಕುಂಭ: ನಿಮ್ಮ ನಿಲುವಿನಲ್ಲಿ ಆಕಸ್ಮಿಕ ತಿರುವು ಕಂಡುಬರುವುದು. ದೈಹಿಕ ಮತ್ತು ಮಾನಸಿಕ ಶ್ರಮ ಕಡಿಮೆಯಾಗಿ ನಿರಾಳ ಭಾವ. ಕಾರ್ಯನಿರ್ವಹಣೆಯಲ್ಲಿ ಯಶಸ್ಸನ್ನು ಕಾಣುವಿರಿ.

ಮೀನ: ಆತ್ಮೀಯತೆಯಿಂದಾಗಿ ಶುಭ ಸಂದರ್ಭ ನಿರ್ಮಾಣ. ಹೊಣೆಗಾರಿಕೆಯ ವಿಷಯದಲ್ಲಿ ಸಮರ್ಥ ನಿರ್ವಹಣೆ. ವಿಷಯಗಳ ಸ್ಪಷ್ಟ ಅರಿವು ಉಂಟಾಗಿ ವಿಶ್ವಾಸ ಮೂಡುವುದು.

ನಿಮ್ಮ ಜನ್ಮದಿನ 16-ಏಪ್ರಿಲ್ ಈ ದಿನ ಅತ್ಯಂತ ಶುಭಕರ. ಯಾವಾಗಲೂ ಒಂದಿಲ್ಲೊಂದು ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಿರುವಿರಿ. ಏಕಕಾಲದಲ್ಲಿ ಅನೇಕ ಕೆಲಸಗಳನ್ನು ಕಾರ್ಯನಿರ್ವಹಿಸಿ ಯಶಸ್ಸನ್ನು ಸಾಧಿಸುವ ಖ್ಯಾತಿಯನ್ನು ಹೊಂದಿರುವಿರಿ. ದೂರದೃಷ್ಟಿಯನ್ನು ಹೊಂದಿದವರು.

ಬೆರಗಿನ ಬೆಳಕು

ಗುರುರಾಜ ಕರಜಗಿ



ಆತ್ಮವಿಕಾಸದ ರೀತಿ

ಅದರಿಂದ ನೀತಿ ನಯವದರಿಂದ ಕುಲಗೋತ್ರ |
ವದರಿಂದ ರಾಜ್ಯ ಮತಧರ್ಮ ಸಂಸ್ಥೆಗಳು ||
ಬದವುವದರಿಂದೆ ಮಮತಾನಾಶದವಕಾಶ |
ವದರಿನಾತ್ಮವಿಕಾಸ – ಮಂಕುತಿಮ್ಮ || 407 ||

ಪದ-ಅರ್ಥ: ನಯವದರಿಂದ = ನಯವು + ಅದರಿಂದ, ಒದವುವದರಿಂದೆ + ಒದವುದು = ಸಹಕಾರಿಯಾಗುವುದು + ಅದರಿಂದೆ, ಮಮತಾನಾಶದವಕಾಶ = ಮಮತಾ + ನಾಶದ + ಅವಕಾಶ, ಅದರಿನಾತ್ಮವಿಕಾಸ = ಅದರಿ-ನ್(ಅದರಿಂದ) + ಆತ್ಮವಿಕಾಸ.

ವಾಚ್ಯಾರ್ಥ: ನರನಾರಿಯರ ಮೋಹ, ಅದರಿಂದ ವಂಶ, ಮನೆ, ನೆರೆಹೊರೆ, ಊರು, ರಾಷ್ಟ್ರ, ಸಂಘಗಳು. ಇವೆಲ್ಲವುಗಳ ಕೇಂದ್ರ, ವ್ಯಕ್ತಿಯೇ, ಈ ವ್ಯವಸ್ಥೆಯಿಂದ ನೀತಿ, ನಯ. ಅದರಿಂದ ಕುಲಗೋತ್ರ, ಅದರಿಂದ ರಾಜ್ಯ, ಮತ, ಧರ್ಮ, ಸಂಸ್ಥೆಗಳು. ಇವೆಲ್ಲ ಮಮತೆಯ ನಾಶಕ್ಕೆ ಸಹಕಾರಿ-ಯಾಗುತ್ತವೆ. ಅದರಿಂದ ಆತ್ಮವಿಕಾಸ.

ವಿವರಣೆ: ಇದು ಹಿಂದಿನ ಕಗ್ಗದ ಮುಂದುವರೆದ ಭಾಗ. ಒಬ್ಬ ವ್ಯಕ್ತಿಯಿಂದ ಪ್ರಾರಂಭವಾಗಿ ಸರೋವರದ ಕೇಂದ್ರದಿಂದ ಅಲೆಗಳ ಬಳೆಗಳು ಹರಿಯುವಂತೆ ಅವನ ಜೀವನ ವಿಸ್ತಾರವಾಗುತ್ತದೆ. ಇದೇ ಸಂಸಾರದ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಬದುಕಲು ನೀತಿ, ನಯಗಳು ಬೇಕು. ಜನರು ತಮ್ಮ ತಮ್ಮನ್ನು ಬೇರೆ ಗುಂಪುಗಳಾಗಿ ಗುರುತಿಸಿಕೊಂಡರು. ಅವುಗಳನ್ನು ಕುಲಗಳೆಂದು ಕರೆದರು. ಕುಲಗಳ ಮೂಲ ಪುರುಷರ ಹೆಸರುಗಳೇ ಗೋತ್ರಗಳಾದವು. ಕುಲಗಳ ವೃದ್ಧಿಗೆ ಮತಗಳು ಹುಟ್ಟಿಕೊಂಡವು. ಮತಗಳ ವ್ಯವಸ್ಥೆಯಾದ ಮೇಲೆ ಅವುಗಳನ್ನು ನಿಭಾಯಿಸುವ ಧರ್ಮಸಂಸ್ಥೆಗಳು ಬಂದವು.

ಈ ಎಲ್ಲ ಬದಲಾವಣೆಯಿಂದ ಏನಾಯಿತು? ತಾನು ಒಬ್ಬನೇ ಎಂದುಕೊಂಡು ಬೇಕಾದ ಹಾಗೆ ಇರುತ್ತಿದ್ದ ಮನುಷ್ಯ ನಿಧಾನವಾಗಿ ಗುಂಪಿನಲ್ಲಿ, ಉಳಿದವರ ಜೊತೆಗೆ ಬದುಕಲು ಕಲಿತ. ಅವನ ನಡತೆಯಲ್ಲಿ ನಯ, ವಿನಯಗಳು ಮೂಡಿದವು. ಮಕ್ಕಳಿಗಾಗಿ, ಸಮಾಜಕ್ಕಾಗಿ ತನ್ನ ಕುಲಬಾಂಧವರಿಗಾಗಿ ಸಣ್ಣಪುಟ್ಟ ತ್ಯಾಗ ಮಾಡಿದ, ದಾನ ಮಾಡಿದ. ತಾನೇ ಎಲ್ಲರಿಗಿಂತ ಮುಖ್ಯ ಎಂಬುದು ಬದಿಗೆ ಸರಿದು ಸರ್ವರ ಹಿತದಲ್ಲಿ ತನ್ನ ಹಿತವನ್ನು ಕಾಣಲು ಪ್ರಯತ್ನಿಸಿದ. ಇದರಿಂದ ತಾನು, ತನ್ನದು ಎಂಬ ಅತಿಯಾದ ಮಮತೆಯ ಕರಗುವಿಕೆಗೆ ಸಹಾಯವಾಯಿತು. ಮಮತಾನಾಶದಿಂದ ಏನಾದೀತು? ಅದೇ ಮನುಷ್ಯನ ಆತ್ಮವಿಕಾಸಕ್ಕೆ ದಾರಿ.

ಸ್ವಾಮಿ ವಿವೇಕಾನಂದರು ಇದನ್ನು ಆತ್ಯಂತ ಸೂಚ್ಯವಾಗಿ, ಸಮರ್ಥವಾಗಿ ಹೇಳುತ್ತಾರೆ. ಅವರೊಂದು ಪ್ರಶ್ನೆ ಕೇಳುತ್ತಾರೆ, ‘ನೀವು ಜಿಮ್ನಾಶಿಯಂಗೆ (ವ್ಯಾಯಾಮ ಶಾಲೆಗೆ) ಹೋಗುವುದು ಏತಕ್ಕೆ?’ ಅವರೇ ಉತ್ತರಿಸುತ್ತಾರೆ. ‘ನಾವು ಜಿಮ್ನಾಶಿಯಂಗೆ ಹೋಗುವುದು ಅಲ್ಲಿ ವ್ಯಾಯಾಮ ಮಾಡಿ, ಸೈಕಲ್ ಹೊಡೆದು, ಟ್ರೆಡ್‌ಮಿಲ್‌ನಲ್ಲಿ ಬೆವರು ಸುರಿಸಿ, ತೂಕಗಳನ್ನು ಎತ್ತಿ, ಬೊಜ್ಜು ಕರಗಿಸಲು ಪ್ರಯತ್ನಿಸುವುದು. ಮುಖ್ಯವಾಗಿ, ನಮ್ಮ ಉದ್ದೇಶ, ದೇಹವನ್ನು ಗಟ್ಟಿಮಾಡಿಕೊಳ್ಳುವುದು. ನಾವು ಅಲ್ಲಿಗೆ ಜಿಮ್ನಾಶಿಯಂ ಅನ್ನು ಸರಿಮಾಡಲು, ರಿಪೇರಿ ಮಾಡಲು ಹೋಗುವುದಿಲ್ಲ. ಪ್ರಪಂಚವೂ ಒಂದು ಜಿಮ್ನಾಶಿಯಂ ಇದ್ದಂತೆ. ಅಲ್ಲಿ ಬರುವ ನೋವು, ನಲಿವುಗಳು, ಹೃದಯ ತಟ್ಟುವ ಸಂಬಂಧಗಳು, ಸಾಮಾಜಿಕ ಬಂಧಗಳು ಇವೆಲ್ಲ ಈ ಜಿಮ್ನಾಶಿಯಂ ಅಲ್ಲಿರುವ ಉಪಕರಣಗಳು. ಈ ಜಿಮ್ನಾಶಿಯಂ ಅನ್ನು ರಿಪೇರಿ ಮಾಡಲು, ಅಂದರೆ ಪ್ರಪಂಚವನ್ನು ತಿದ್ದಲು, ಬದಲಿಸಲು ಹೋಗಬೇಡಿ. ಅಲ್ಲಿ ಬರುವ ಪರಿವಾರದ, ಸಮಾಜದ, ರಾಷ್ಟ್ರದ, ಮಾನವತೆಯ ಅನುಭವಗಳು, ಆತ್ಮೀಯ ಬಂಧನಗಳು ಮನುಷ್ಯನನ್ನು ಬಲಪಡಿಸುತ್ತವೆ’. ಅದೇ ವ್ಯಕ್ತಿಯ ಆತ್ಮವಿಕಾಸದ ರೀತಿ.

ಪದಬಂಧ 4568


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವೆ ಲಾಯ ಕಂಡಾಗ ಓಡಿ ಹೋಗುವಿಕೆ! (4)
3.ಮಂದಿಯ ಒಳಿತು (4)
5.ಕಡಿಯಲು ಬಂದಿರುವ ಭಲ್ಲೂಕ (3)
6.ತುಂಬಾ ಹದಗೆಟ್ಟ ಸ್ಥಿತಿ (3)
7.ಗಣಪತಿ ಚಿಕ್ಕದಾಗಿ ಮೂಡಿದ್ದಾನೆ (3)
9.ಮಾನಿನಿಯ ಗುಣದ ಬಗ್ಗೆಯೇ ಸಂಶಯ! (3)
11.ಕುದುರೆಯ ಸವಾರನೀತ (3)
12.ಗುಲಾಲು ಹಿಡಿದಿರುವ ಸೇವಕ (3)
13.ಈತ ನೈಪುಣ್ಯವುಳ್ಳವನು (4)
15.ತಿಂಡಿಪೋತನನ್ನು ಹೀಗೂ ಕರೆಯಬಹುದಲ್ಲವೇ? (4)

ಮೇಲಿಂದ ಕೆಳಕ್ಕೆ

1.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)
2.ತಿರುಗಿ ನಿಂತಿರುವ ಮಂದಿ (2)
4.ತುಸುವೇ ಬೀರಿದ ಮಂದಹಾಸ (4)
5.ಕರದಿಂದ ಆರಂಭವಾದ ಉತ್ಸವ (3)
8.ಒಂದೇ ವಿಷಯದಲ್ಲಿ ಬಹಳ ಆಸಕ್ತನಾದವನು (4)
10.ಯಮ ಕೊನೆಗಿದ್ದಾಗಿನ ಸೂತ್ರ (3)
12.ಗುಣಿಸುವ ಸಂಖ್ಯೆಯಿದು (3)
14.ತತ್ತಿ ಪಡೆಯಲು ಸೇರಿರುವ ಗುಂಪು (2)



4567ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಅಣ್ಣ 4.ನಳ್ಳಿ 6.ರತ್ನಾಕರ 7.ಯುಗಳ 9.ಸುಸಂಧಿ 10.ನಕಲಿ 12.ಮನ್ವಂತರ 13.ಸ್ನಾನ 14.ಪಾವು

ಮೇಲಿಂದ ಕೆಳಕ್ಕೆ: 1.ಬಣ್ಣ 2.ಕಳ್ಳಿ 3.ಅಲ್ವಾಯು 4.ನರಭಕ್ಷಕ 5.ನಾಳ 6.ರಕ್ತಸಂಚಾರ 8.ಗಜಗಮನ 10.ನಕ್ಷೆ 11.ಲಿಲಾವು 13.ಸ್ನಾಯು 14.ಪಾರ್ಶ್ವ

ಸುಡೊಕು 4954

		4		7			3	
7			2		3	6		8
8				4			2	
4		3		1		8		6
			9		4		7	
9		8		3		4		1
1		9	3		5		8	7
	6			9				
5		7	4		1	9		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4953 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ಕೋವಿಡ್ ಅಂಕಿ–ಅಂಶ

	ವಿಶ್ವ	ಭಾರತ
ಒಟ್ಟು ಪ್ರಕರಣ	13.95 ಕೋಟಿ	1.42 ಕೋಟಿ
ಸಕ್ರಿಯ ಪ್ರಕರಣ	2.38 ಕೋಟಿ	15.57 ಲಕ್ಷ
ಗುಣಮುಖ	11.84 ಕೋಟಿ	1.25 ಕೋಟಿ
ಸಾವು	29.91 ಲಕ್ಷ	1.74 ಲಕ್ಷ

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	7.45 ಲಕ್ಷ	1,99,584
ಗುಣಮುಖ	4.12 ಲಕ್ಷ	93,425
ಸಾವು	12,931	1,038

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 78,896 ಅಮೆರಿಕ; 75,998 ಬ್ರೆಜಿಲ್; 62,797 ಟರ್ಕಿ

ಎಲ್ಲಿ ಹೆಚ್ಚು ಸಾವು: 59,153 ಮಹಾರಾಷ್ಟ್ರ; 12,999 ತಮಿಳುನಾಡು; 11,652 ದೆಹಲಿ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 68.75 ಅಮೆರಿಕ; 46.93 ಫ್ರಾನ್ಸ್; 10.71 ಬ್ರೆಜಿಲ್

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 36.39 ಮಹಾರಾಷ್ಟ್ರ; 11.97 ಕೇರಳ; 9.42 ಆಂಧ್ರಪ್ರದೇಶ

24 ಗಂಟೆಗಳ ಅವಧಿಯಲ್ಲಿ 14,738 ಮಂದಿಗೆ ಸೋಂಕು

ಕೋವಿಡ್: ಲಕ್ಷದತ್ತ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಏರುಗತಿ ಪಡೆದಿದ್ದು, ಗುರುವಾರ 14,738 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಸೋಂಕಿತರ ಸಂಖ್ಯೆ 11 ಲಕ್ಷದ ಗಡಿ ದಾಟಿದೆ.


ಒಂದು ದಿನದ ಅವಧಿಯಲ್ಲಿ 1.29 ಲಕ್ಷ ಮಾದರಿ ಪರೀಕ್ಷಿಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 11.38ಕ್ಕೆ ಏರಿಕೆಯಾಗಿದೆ. ಈ ತಿಂಗಳು 15 ದಿನಗಳಲ್ಲಿಯೇ 1.12 ಲಕ್ಷಕ್ಕೂ ಅಧಿಕ ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ ಲಕ್ಷದತ್ತ (96,561) ದಾಪುಗಾಲು ಇರಿಸಿದೆ. ಮಾರ್ಚ್ ತಿಂಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 5 ಸಾವಿರಕ್ಕೆ ಇಳಿಕೆಯಾಗಿತ್ತು. ಈಗ ಅಧಿಕ ಸಕ್ರಿಯ ಪ್ರಕರಣಗಳನ್ನು ಹೊಂದಿರುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕವು ಮಹಾರಾಷ್ಟ್ರ, ಛತ್ತೀಸಗಡದ ನಂತರದ ಸ್ಥಾನದಲ್ಲಿದೆ.

ರಾಜ್ಯದ 16 ಜಿಲ್ಲೆಗಳಲ್ಲಿ 100ಕ್ಕೂ ಅಧಿಕ ಹೊಸ ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ ಮತ್ತಷ್ಟು ಏರಿದ್ದು, 10,497 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಕಲಬುರ್ಗಿ (624), ತುಮಕೂರು (387), ಬೀದರ್ (363), ಮೈಸೂರು (327), ಮಂಡ್ಯ (211), ಬಳ್ಳಾರಿ (200) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ಪತ್ತೆಯಾಗಿವೆ. ಉಳಿದಂತೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ದೃಢಪಟ್ಟಿವೆ.

ಸೋಂಕು ಪೀಡಿತರಲ್ಲಿ ಬೆಂಗಳೂರಿನಲ್ಲಿ 30 ಮಂದಿ ಸೇರಿದಂತೆ ರಾಜ್ಯದಲ್ಲಿ 66 ಮಂದಿ ಸಾವಿಗೀಡಾಗಿದ್ದಾರೆ. ಬಳ್ಳಾರಿ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ 6 ಮಂದಿ, ಮೈಸೂರಿನಲ್ಲಿ ಐವರು, ಹಾಸನದಲ್ಲಿ 4 ಮಂದಿ, ಧಾರವಾಡದಲ್ಲಿ ಮೂವರು, ಬೀದರ್, ಉತ್ತರ ಕನ್ನಡ ಹಾಗೂ ತುಮಕೂರಿನಲ್ಲಿ ತಲಾ ಇಬ್ಬರು, ಬೆಳಗಾವಿ, ಕಲಬುರ್ಗಿ, ಕೋಲಾರ, ರಾಮನಗರ, ಶಿವಮೊಗ್ಗ ಹಾಗೂ ವಿಜಯಪುರದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಈ ತಿಂಗಳು 545 ಮಂದಿ ಕೋವಿಡ್‌ನಿಂದ ಸಾವಿಗೀಡಾಗಿರುವುದು ಖಚಿತಪಟ್ಟಿದೆ. ಈವರೆಗೆ ಮೃತಪಟ್ಟವರ ಸಂಖ್ಯೆ 13,112ಕ್ಕೆ ತಲುಪಿದೆ.

ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಸಹ ಹೆಚ್ಚಳವಾಗಿದೆ. ಸದ್ಯ 555 ಮಂದಿ ಐಸಿಯುನಲ್ಲಿ ಇದ್ದಾರೆ. ಕೋವಿಡ್ ಪೀಡಿತರಲ್ಲಿ 3,591 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 10 ಲಕ್ಷದ ಗಡಿ (9.99 ಲಕ್ಷ) ಸಮೀಪಿಸಿದೆ. ರಾಜ್ಯದಲ್ಲಿ ಗುರುವಾರ 3,548 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಿಸಲಾಗಿದೆ. ಈವರೆಗೆ 62.74 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ.

'ಇನ್ನಷ್ಟು ನಗರಗಳಿಗೆ ರಾತ್ರಿ ಕರ್ಫ್ಯೂ ವಿಸ್ತರಣೆ'



ಕಲಬುರ್ಗಿ: 'ಕೊರೊನಾ ನಿಯಂತ್ರಣಕ್ಕಾಗಿ ರಾತ್ರಿ ಕರ್ಫ್ಯೂ ಅನ್ನು ಇನ್ನಷ್ಟು ನಗರಗಳಿಗೆ ವಿಸ್ತರಿಸಲಾಗುವುದು' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

'ಸದ್ಯ ಬೆಂಗಳೂರು, ಮೈಸೂರು, ಕಲಬುರ್ಗಿ, ಬೆಳಗಾವಿ ಸೇರಿದಂತೆ ಕೆಲ ನಗರಗಳಲ್ಲಿ ರಾತ್ರಿ ಕರ್ಫ್ಯೂ ಜಾರಿಯಲ್ಲಿದೆ. ಕೋವಿಡ್ ಪ್ರಕರಣ ಹೆಚ್ಚುತ್ತಿರುವ ನಗರಗಳಲ್ಲಿಯೂ ಇದನ್ನು ಜಾರಿಗೊಳಿಸಲಾಗುವುದು' ಎಂದು ಗುರುವಾರ ಇಲ್ಲಿ ಮಾಧ್ಯಮದವರಿಗೆ ತಿಳಿಸಿದರು.

'ರಾಜ್ಯಾದ್ಯಂತ ನಿಯಂತ್ರಣ ಕ್ರಮಗಳನ್ನು ಇನ್ನಷ್ಟು ಬಿಗಿಗೊಳಿಸಬೇಕು. ಮಹಾರಾಷ್ಟ್ರದಿಂದ ಬರುವವರ ಮೇಲೆ ನಿಗಾ ಇಡಬೇಕು ಎಂದು ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಸಾರ್ವಜನಿಕರು ಕೂಡ ಕೋವಿಡ್ ನಿಯಂತ್ರಣ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು' ಎಂದು ತಿಳಿಸಿದರು.

ಜನರ ಮರಣದಲ್ಲೂ ಮಹೋತ್ಸವ– ಕಾಂಗ್ರೆಸ್ ಟೀಕೆ

ಬೆಂಗಳೂರು: 'ಜನರ ಮರಣದಲ್ಲೂ ಮಹೋತ್ಸವ ಆಚರಿಸಲು ಬಿಜೆಪಿ ನೇತೃತ್ವದ ಲಜ್ಜೆಗೆಟ್ಟ ಸರ್ಕಾರಕ್ಕೆ ಮಾತ್ರ ಸಾಧ್ಯ' ಎಂದು ರಾಜ್ಯ ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

'ರಾಜ್ಯದಲ್ಲಿ ಲಸಿಕೆ ಕೊರತೆ ನೀಗಿಸುವ ಬದಲು 'ಟೀಕಾ ಉತ್ಸವ' ಎನ್ನುವ ಬೂಟಾಟಿಕೆ ಆಡುತ್ತಿದ್ದಾರೆ' ಎಂದು ಟ್ವಿಟರ್‌ನಲ್ಲಿ ಕಾಂಗ್ರೆಸ್ ಕಿಡಿಕಾರಿದೆ.

'ರಾಜ್ಯದಲ್ಲಿ ಲಸಿಕೆಗಳಿಗೆ ತೀವ್ರ ಕೊರತೆಯಾಗಿದೆ. ಆದರೆ, ಬಿಜೆಪಿ ಲಸಿಕಾ ಉತ್ಸವ ಆಚರಿಸಿ ಜನರಲ್ಲಿ ಸುಳ್ಳು ಭ್ರಮೆಗಳನ್ನು ಹುಟ್ಟಿಸುತ್ತಿದೆ. ಪರಿಸ್ಥಿತಿ ಬಿಗಡಾಯಿಸುತ್ತಿದ್ದರೂ ಸರ್ಕಾರಕ್ಕೆ ಗಾಂಭೀರ್ಯತೆ ಬಂದಿಲ್ಲ. ಆರೋಗ್ಯ ಸಚಿವ ಡಾ.ಸುಧಾಕರ್ ಅವರೇ ಲಸಿಕೆ ಕೊರತೆ ನೀಗಿಸಲು ಯಾವ ಕ್ರಮ ಕೈಗೊಂಡಿದ್ದೀರಿ' ಎಂದೂ ಪ್ರಶ್ನಿಸಿದೆ.

ಕೊರೊನಾ ಸಾಂತ್ವನ

ಕೋವಿಡ್ ತೀವ್ರತೆ ತಡೆಗೆ ಲಸಿಕೆ ಸಹಕಾರಿ



ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡಿದ್ದು, ಮೊದಲಿಗಿಂತ ವೇಗವಾಗಿ ವೈರಾಣು ವ್ಯಾಪಿಸಿಕೊಳ್ಳುತ್ತಿದೆ. ಈಗ ಕಾಯಿಲೆಯ ತೀವ್ರತೆಯಿಂದ ರಕ್ಷಿಸಿಕೊಳ್ಳಲು ಲಸಿಕೆ ಪಡೆಯಬೇಕು. ಅರ್ಹತೆ ಇರುವ ಎಲ್ಲರೂ ಆದಷ್ಟು ಬೇಗ ಲಸಿಕೆ ಪಡೆದುಕೊಂಡರೆ ಎರಡನೇ ಅಲೆಯನ್ನು ಧೈರ್ಯವಾಗಿ ಎದುರಿಸಲು ಸಾಧ್ಯ.

60 ವರ್ಷ ಮೇಲ್ಪಟ್ಟವರು ಹಾಗೂ ಗಂಭೀರ ಕಾಯಿಲೆ ಎದುರಿಸುತ್ತಿರುವವರಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರಲಿದೆ. ಇವರಿಗೆ ಸೋಂಕು ತಗುಲಿದರೆ ಹೆಚ್ಚಿನ ಪ್ರಮಾಣದಲ್ಲಿ ಆಸ್ಪತ್ರೆಗೆ ದಾಖಲಾಗುವ ಸಾಧ್ಯತೆ ಇರುತ್ತದೆ. ಈಗಾಗಲೇ ವರದಿಯಾದ ಕೋವಿಡ್ ಮರಣ ಪ್ರಕರಣಗಳನ್ನು ಗಮನಿಸಿದಲ್ಲಿ 60 ವರ್ಷ ಮೇಲ್ಪಟ್ಟವರೇ ಹೆಚ್ಚಿನ ಸಂಖ್ಯೆಯಲ್ಲಿ ಸಾವಿಗೀಡಾಗಿದ್ದಾರೆ. ಹಾಗಾಗಿ, ಹಿರಿಯ ನಾಗರಿಕರಿಗೆ ರಕ್ಷಣೆ ಒದಗಿಸಬೇಕಿದೆ.

ಕಳೆದ ವರ್ಷ ಲಸಿಕೆ ಇರಲಿಲ್ಲ. ಇದರಿಂದಾಗಿ ಹೆಚ್ಚಿನ ಸಾವು–ನೋವು ಸಂಭವಿಸಿತು. ಈಗ ಉತ್ತಮ ಫಲಿತಾಂಶ ನೀಡುವ 'ಕೋವ್ಯಾಕ್ಸಿನ್' ಮತ್ತು 'ಕೋವಿಶೀಲ್ಡ್' ಲಸಿಕೆಯಿದೆ. ಅದರ ಪ್ರಯೋಜನವನ್ನು ಪಡೆದುಕೊಳ್ಳಬೇಕು. ಲಸಿಕೆ ಪಡೆದ ಬಳಿಕ ಸೋಂಕು ತಗುಲುವುದಿಲ್ಲ ಎಂದು ಹೇಳಲಾಗದು. ಆದರೆ, ಸೋಂಕು ತಗುಲಿದರೂ ಜೀವಕ್ಕೆ ಅಪಾಯವಾಗದು ಎಂಬ ಭರವಸೆ ನೀಡಬಹುದು. ಈಗ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾದವರ ಸಂಖ್ಯೆ 500ರ ಗಡಿ ದಾಟಿದೆ. ಕಳೆದ ವರ್ಷ ಸೆಪ್ಟೆಂಬರ್ ಅವಧಿಯಲ್ಲಿ 800 ಮಂದಿ ಐಸಿಯುನಲ್ಲಿ ಇದ್ದರು. ಅವರಲ್ಲಿ ಶೇ 60 ರಷ್ಟು ಮಂದಿ ನಮಗೆ ಕೋವಿಡ್ ಏನು ಮಾಡದು ಎಂಬ ಮನೋಭಾವ ಹೊಂದಿದ್ದರು. ಈಗ ಕೂಡ ಲಸಿಕೆ ಪಡೆದುಕೊಳ್ಳಲು ಹಿಂದೇಟು ಹಾಕಿ, ಕೋವಿಡ್ ಪೀಡಿತರಾಗಿ ಆಸ್ಪತ್ರೆ ಸೇರಿದರೆ ವೆಂಟಿಲೇಟರ್ ಸೇರಿದಂತೆ ವಿವಿಧ ವೈದ್ಯಕೀಯ ಸೌಲಭ್ಯಕ್ಕೆ ಲಕ್ಷಾಂತರ ರೂಪಾಯಿ ಪಾವತಿಸಬೇಕಾಗುತ್ತದೆ.

ಇದು ರೂಪಾಂತರಗೊಂಡ ವೈರಾಣು ಆಗಿರುವ ಕಾರಣ ಹರಡುವಿಕೆ ವೇಗ ಈ ಮೊದಲಿಗಿಂತ ಶೇ 60 ರಷ್ಟು ಹೆಚ್ಚಿರಲಿದೆ. ನಮ್ಮ ಕುಟುಂಬದ ಸದಸ್ಯರೂ ಸೋಂಕಿತರಾಗಿ ಸಮಸ್ಯೆ ಎದುರಿಸುವ ಸಾಧ್ಯತೆಗಳಿರುತ್ತವೆ. ಸಾಮಾಜಿಕ ಕಳಕಳಿ ಮತ್ತು ಆರೋಗ್ಯದ ದೃಷ್ಟಿಯಿಂದ ಲಸಿಕೆ ಪಡೆದುಕೊಳ್ಳುವುದು ನಮ್ಮ ಕರ್ತವ್ಯ. ಲಸಿಕೆ ಹಾಕಿಸಿಕೊಂಡ ಬಳಿಕವೂ ಮುಖಗವಸು ಧರಿಸುವಿಕೆ, ಅಂತರ ಕಾಯ್ದುಕೊಳ್ಳುವಿಕೆ ಸೇರಿದಂತೆ ವಿವಿಧ ನಿಯಮಗಳನ್ನು ಪಾಲಿಸಬೇಕು. ಕೈಗಳ ಶುಚಿತ್ವಕ್ಕೆ ಆದ್ಯತೆ ನೀಡಬೇಕು.

ಡಾ. ವಿಶಾಲ್ ರಾವ್, ಕ್ಯಾನ್ಸರ್ ತಜ್ಞ, ಎಚ್‌ಸಿಜಿ ಆಸ್ಪತ್ರೆ

'ಕೋವಿಡ್ ನಿರ್ವಹಣೆಯಲ್ಲಿ ವಿಫಲ'



ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): 'ದೇಶದಲ್ಲಿರುವ ಕೋವಿಡ್ ಬಿಕ್ಕಟ್ಟನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಲ್ಲಿ ವಿಫಲವಾಗಿರುವ ಸರ್ಕಾರ 'ಲಸಿಕೆ ಉತ್ಸವ'ದ ಮೂಲಕ ಜನರನ್ನು ತೃಪ್ತಿಪಡಿಸಲು ಹೊರಟಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಕೊರೊನಾ ಸೋಂಕಿನ ಪರೀಕ್ಷೆ ಸರಿಯಾಗಿ ನಡೆಯುತ್ತಿಲ್ಲ, ಆಸ್ಪತ್ರೆಗಳಲ್ಲಿ ಹಾಸಿಗೆಗಳಿಲ್ಲ, ಕೆಲವು ಕಡೆ ವೆಂಟಿಲೇಟರ್ ಅಥವಾ ಆಕ್ಸಿಜನ್ ಇಲ್ಲ. ಅಲ್ಲದೆ ಲಸಿಕೆಯೂ ಸಿಗುತ್ತಿಲ್ಲ' ಎಂದು ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಕೋವಿಡ್ 19 ಬಿಕ್ಕಟ್ಟನ್ನು ನಿರ್ವಹಣೆ ಮಾಡುವುದಕ್ಕಾಗಿ ಪಿಎಂ–ಕೇರ್ಸ್‌ಗೆ ಬಹುದೊಡ್ಡ ಪ್ರಮಾಣದಲ್ಲಿ ದೇಣಿಗೆ ಬಂದಿದೆ. ಸರ್ಕಾರ ಆ ಹಣವನ್ನು ಏನು ಮಾಡುತ್ತಿದೆ' ಎಂದು ರಾಹುಲ್ ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದಾರೆ.

'ಆಸ್ಪತ್ರೆಗಳಲ್ಲಿ ಹಾಸಿಗೆಗಳಿಲ್ಲ, ಆಕ್ಸಿಜನ್, ಇಲ್ಲ. ಆದರೆ, ಸರ್ಕಾರ ಲಸಿಕೆ ಉತ್ಸವವನ್ನು ಆಚರಿಸುತ್ತಿದೆ. ಹಾಗಾದರೆ ಪಿಎಂ–ಕೇರ್ಸ್ ಏನು ಮಾಡುತ್ತಿದೆ ? ಎಂದು ರಾಹುಲ್ ಕೇಳಿದ್ದಾರೆ.

ಕುಂಭಮೇಳ: ವಾಪಸ್ ಬಂದವರಿಗೆ ಕ್ವಾರಂಟೈನ್ ಕಡ್ಡಾಯ

ಬೆಂಗಳೂರು: ಹರಿದ್ವಾರದಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಪಾಲ್ಗೊಂಡವರು ಇಲ್ಲಿಗೆ ವಾಪಸ್ಸಾದ ಬಳಿಕ ಕಡ್ಡಾಯವಾಗಿ ಮನೆ ಕ್ವಾರಂಟೈನ್‌ಗೆ ಒಳಗಾಗಿ, ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಯನ್ನು ಮಾಡಿಸಿಕೊಳ್ಳಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಕುಂಭಮೇಳದಲ್ಲಿ ಭಾಗವಹಿಸಿದ ಯಾತ್ರಿಗಳಲ್ಲಿ ಕೆಲವರು ಕೋವಿಡ್ ಪೀಡಿತರಾಗಿದ್ದಾರೆ. ಹಾಗಾಗಿ, ಅಲ್ಲಿಂದ ಮರಳಿದವರು ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕೋವಿಡ್ ಪರೀಕ್ಷೆಯ ವರದಿ ಬರುವವರೆಗೂ ಕಡ್ಡಾಯವಾಗಿ ಮನೆ ಕ್ವಾರಂಟೈನ್‌ನಲ್ಲಿಯೇ ಇರಬೇಕು. ಸೋಂಕು ತಗುಲಿಲ್ಲ ಎಂಬುದು ದೃಢಪಟ್ಟ ಬಳಿಕ ಈ ಮೊದಲಿನಂತೆ ದೈನಂದಿನ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕು' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ರಾಜಕಾರಣಿ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

'ರಾಜಕೀಯ ಮತ್ತು ಧಾರ್ಮಿಕ ಮುಖಂಡರು ಈ ವಿಷಯಗಳಲ್ಲಿ ಮಾದರಿಯಾಗಿ ಇರಬೇಕಿತ್ತು. ಆದರೆ, ಅದು ಆಗುತ್ತಿಲ್ಲ. ಈ ಕಾರಣದಿಂದ ಅವರ ವಿರುದ್ಧವೇ ತ್ವರಿತವಾಗಿ ಕ್ರಮಗಳು ಜಾರಿಯಾಗಬೇಕು' ಎಂದು ಪೀಠ ತಿಳಿಸಿತು.

'ಬೆಂಗಳೂರು ನಗರದಲ್ಲಿ ನಡೆದ ರ್‍ಯಾಲಿಗಳಲ್ಲಿ ಕೋವಿಡ್ ನಿಯಮ ಉಲ್ಲಂಘನೆ ಆಗಿದ್ದು, ಸಂಘಟಕರಿಗೆ ಮಾತ್ರ ದಂಡ ವಿಧಿಸಲಾಗಿದೆ. ಇದು ಕಾಯ್ದೆಯ ನಿಬಂಧನೆಗಳನ್ನು ಅನುಷ್ಠಾನಗೊಳಿಸುವ ಸರಿಯಾದ ಮಾರ್ಗ ಅಲ್ಲ. ರ್‍ಯಾಲಿಗಳಲ್ಲಿ ಭಾಗವಹಿಸಿ ನಿಯಮ ಉಲ್ಲಂಘಿಸಿದ ಪ್ರತಿಯೊಬ್ಬರ ವಿರುದ್ಧವೂ ಪ್ರಕರಣ ದಾಖಲಾಗಬೇಕು' ಎಂದೂ ಪೀಠ ಹೇಳಿತು.

'ಈ ಕಾಯ್ದೆಯಡಿ ಇರುವ ಸೆಕ್ಷನ್‌ಗಳ ಬಗ್ಗೆ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ಇದ್ದಂತಿಲ್ಲ. ಅವರಿಗೆ ತಿಳಿವಳಿಕೆ ನೀಡುವ ಅಗತ್ಯ ಇದೆ. ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಎಲ್ಲ ಪೊಲೀಸ್ ಅಧಿಕಾರಿಗಳಿಗೆ ಡಿಜಿಪಿ ಕೂಡಲೇ ನಿರ್ದೇಶನ ನೀಡಬೇಕು. ದಾಖಲಾಗುವ ಎಫ್‌ಐಆರ್ ಮತ್ತು ಅವುಗಳ ತನಿಖೆಗಳ ಮೇಲ್ವಿಚಾರಣೆ ನಡೆಸಲು ಹಿರಿಯ ಅಧಿಕಾರಿಗಳ ತಂಡಗಳನ್ನು ರಚಿಸಬೇಕು' ಎಂದು ಪೀಠ ನಿರ್ದೇಶನ ನೀಡಿತು.

'ಕಾಯ್ದೆಯಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಪೊಲೀಸರು ಹಿಂಜರಿದರೆ ಸರ್ಕಾರ ಅದನ್ನು ಸಹಿಸಬಾರದು. ಈ ಆದೇಶ ಪಾಲನೆ ಮಾಡಿರುವ ಬಗ್ಗೆ ಅನುಸರಣಾ ವರದಿಯನ್ನು ಮುಂದಿನ ವಿಚಾರಣೆ ವೇಳೆ ಸಲ್ಲಿಸಬೇಕು' ಎಂದು ತಿಳಿಸಿದ ಪೀಠ, ಏ.22ಕ್ಕೆ ವಿಚಾರಣೆ ಮುಂದೂಡಿತು.

'ವೈದ್ಯಕೀಯ ಆಮ್ಲಜನಕ ವ್ಯರ್ಥ ಬೇಡ'

ದೇಶದಲ್ಲಿ ಪ್ರತಿ ದಿನ 7127 ಮೆಟ್ರಿಕ್ ಟನ್ ಉತ್ಪಾದನೆ



ನವದಹೆಲಿ (ಪಿಟಿಐ): ವೈದ್ಯಕೀಯ ಆಮ್ಲಜನಕವನ್ನು ವ್ಯರ್ಥ ಮಾಡದೆ ತರ್ಕಬದ್ಧವಾಗಿ ಬಳಸಬೇಕು ಎಂದು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ.

ದೇಶದಲ್ಲಿ ಆಮ್ಲಜನಕದ ಕೊರತೆ ಇಲ್ಲ. ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಿಡಲಾಗಿದೆ. ಉತ್ಪಾದನೆಯನ್ನೂ ಹೆಚ್ಚಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸ್ಪಷ್ಟಪಡಿಸಿದೆ.

ಕೋವಿಡ್–19 ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ವೈದ್ಯಕೀಯ ಆಮ್ಲಜನಕ ಅಗತ್ಯವಾಗಿದೆ. ಅಗತ್ಯಕ್ಕೆ ತಕ್ಕಂತೆ ಜಿಲ್ಲೆಗಳಿಗೆ ಸುಗಮವಾಗಿ ಆಮ್ಲಜನಕ ಪೂರೈಸಲು ಅನುಕೂಲವಾಗುವಂತೆ 'ನಿಯಂತ್ರಣಾ ಕೊಠಡಿ'ಗಳನ್ನು ಸ್ಥಾಪಿಸಬೇಕು. ಸಿಲಿಂಡರ್‌ಗಳ ಅಗತ್ಯವನ್ನು ನಿತ್ಯ ಪರಿಶೀಲಿಸಬೇಕು ಎಂದು ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಪ್ರತಿ ದಿನ 7127 ಮೆಟ್ರಿಕ್ ಟನ್‌ನಷ್ಟು ಆಮ್ಲಜನಕ ಉತ್ಪಾದಿಸುವ ಸಾಮರ್ಥ್ಯ ಇದೆ. ಕಳೆದ ಎರಡು ದಿನಗಳಿಂದ ಶೇ 100ರಷ್ಟು ಉತ್ಪಾದನೆಯಾಗುತ್ತಿದೆ. ಜತೆಗೆ, ಅಗತ್ಯಕ್ಕೆ ತಕ್ಕಂತೆ ಉಕ್ಕು ಕಾರ್ಖಾನೆಗಳಿಂದಲೂ ಹೆಚ್ಚುವರಿಯಾಗಿ ಆಮ್ಲಜನಕ ಲಭ್ಯವಾಗುವಂತೆ ಪೂರಕ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದೆ.

ಏಪ್ರಿಲ್ 12ರಂದು ದೇಶದಲ್ಲಿ 3842 ಮೆಟ್ರಿಕ್ ಟನ್‌ಗಳಷ್ಟು ವೈದ್ಯಕೀಯ ಆಮ್ಲಜನಕ ಬಳಕೆ ಮಾಡಲಾಗಿತ್ತು. ಅಂದರೆ, ಪ್ರತಿ ದಿನ ಉತ್ಪಾದನೆಯಾಗುವ ಆಮ್ಲಜನಕದಲ್ಲಿ ಶೇಕಡ 54ರಷ್ಟು ಬಳಕೆ ಮಾಡಲಾಗಿತ್ತು ಎಂದರು.

ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಉತ್ತರ ಪ್ರದೇಶ, ಕರ್ನಾಟಕ ತಮಿಳುನಾಡು, ದೆಹಲಿ, ಛತ್ತೀಸಗಡ, ಪಂಜಾಬ್, ರಾಜಸ್ಥಾನದಲ್ಲಿ ಅತಿ ಹೆಚ್ಚು ವೈದ್ಯಕೀಯ ಆಮ್ಲಜನಕ ಬಳಕೆಯಾಗುತ್ತಿದೆ. ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ವೈದ್ಯಕೀಯ ಆಮ್ಲಜನಕದ ಸಂಗ್ರಹ ಮಾಡಿಕೊಳ್ಳುವುದು ಅಗತ್ಯವಾಗಿದೆ. ದೇಶದಲ್ಲಿ ಈಗ ತಯಾರಿಕಾ ಘಟಕಗಳಲ್ಲಿರುವ ಕೈಗಾರಿಕಾ ಆಮ್ಲಜನಕವು ಸೇರಿದಂತೆ ಒಟ್ಟಾರೆಯಾಗಿ 50 ಸಾವಿರ ಮೆಟ್ರಿಕ್ ಟನ್ ಆಮ್ಲಜನಕ ಸಂಗ್ರಹವಿದೆ ಎಂದು ತಿಳಿಸಿದೆ.

ಅಗತ್ಯವಿರುವ ರಾಜ್ಯಗಳಿಗೆ ಸಕಾಲಕ್ಕೆ ಆಮ್ಲಜನಕ ಪೂರೈಸಲು ವಿವರವಾದ ಯೋಜನೆ ಸಿದ್ಧಪಡಿಸಲಾಗುತ್ತಿದೆ. ಆಮ್ಲಜನಕದ ಸಾಗಾಣಿಕೆಯೂ ಸದ್ಯದ ಪ್ರಮುಖ ಸವಾಲಾಗಿದೆ. ಹೀಗಾಗಿ, ವೈದ್ಯಕೀಯ ಆಮ್ಲಜನಕವನ್ನು ಕೈಗಾರಿಕೆ ಸಿಲಿಂಡರ್‌ಗಳಲ್ಲಿ ಸಾಗಿಸಲು ಅವಕಾಶ ನೀಡಲಾಗಿದೆ ಎಂದು ಸಚಿವಾಲಯ ಹೇಳಿದೆ.

ಕೋವಿಡ್: ಕೆಲ ಖಾಸಗಿ ಆಸ್ಪತ್ರೆಗಳಿಂದ ನಕಲಿ ಚುಚ್ಚುಮದ್ದು

ಬಸವಕಲ್ಯಾಣ (ಬೀದರ್ ಜಿಲ್ಲೆ): 'ಚಿಕಿತ್ಸೆಗೆ ದಾಖಲಾಗುವ ಕೋವಿಡ್ ಪೀಡಿತರಿಗೆ ಕೆಲ ಖಾಸಗಿ ಆಸ್ಪತ್ರೆಗಳು ರೋಗ ನಿರೋಧಕದ ನಕಲಿ ಚುಚ್ಚು ಮದ್ದು ನೀಡುತ್ತಿರುವುದು ಗೊತ್ತಾಗಿದೆ. ರೋಗದ ಭಯಾನಕತೆ ತೋರಿಸಿ ರೋಗಿಗಳ ಸಂಬಂಧಿಗಳಿಂದ ಹಣ ಸುಲಿಗೆ ಮಾಡಲಾಗುತ್ತಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

'ಕೋವಿಡ್ ನಿಯಮಾವಳಿ ಜಾರಿಗೊಳಿಸಿದ ಬಿಜೆಪಿಯವರೇ ಚುನಾವಣೆಯ ದೊಡ್ಡ ದೊಡ್ಡ ಸಭೆಗಳನ್ನು ಆಯೋಜಿಸುತ್ತಿದ್ದಾರೆ' ಎಂದು ಗುರುವಾರ ಮಾಧ್ಯಮಗೋಷ್ಠಿಯಲ್ಲಿ ಆಪಾದಿಸಿದರು.

ನ್ಯಾಯಮೂರ್ತಿ ನಿವಾಸದ ಸಿಬ್ಬಂದಿಗೆ ಕೋವಿಡ್

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎಂ.ಆರ್. ಷಾ ಅವರ ಅಧಿಕೃತ ನಿವಾಸದಲ್ಲಿರುವ ಎಲ್ಲ ಸಿಬ್ಬಂದಿಗೂ ಕೋವಿಡ್–19 ದೃಢಪಟ್ಟಿದೆ ಎಂದು ನ್ಯಾಯಮೂರ್ತಿ ಅವರು ಪ್ರಕರಣವೊಂದರ ವಿಚಾರಣೆ ವೇಳೆ ತಿಳಿಸಿದ್ದಾರೆ.

ನ್ಯಾಯಮೂರ್ತಿ ಡಿ. ವೈ. ಚಂದ್ರಚೂಡ್ ನೇತೃತ್ವದ ಪೀಠದಲ್ಲಿ ಇರುವ ನ್ಯಾಯಮೂರ್ತಿ ಷಾ ಅವರು ಅಧಿಕೃತ ನಿವಾಸದಲ್ಲಿರುವ ಎಲ್ಲ ಸಿಬ್ಬಂದಿಗೆ ಸೋಂಕು ತಗುಲಿದೆ ಎಂದು ವಕೀಲರ ಎದುರೇ ತಿಳಿಸಿದರು.

'ಸದ್ಯದ ಪರಿಸ್ಥಿತಿ ನಿಭಾಯಿಸಲು ನ್ಯಾಯಾಲಯಕ್ಕೂ ಸಮಯ ಹಿಡಿಯಲಿದೆ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಹೇಳಿದರು.

ಕೆಲ ದಿನಗಳ ಹಿಂದೆ ಸುಪ್ರೀಂ ಕೋರ್ಟ್‌ನ 40 ಸಿಬ್ಬಂದಿಗೆ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿತ್ತು.

ಕೋವಿಡ್: ಕಾಂಗ್ರೆಸ್ ಅಭ್ಯರ್ಥಿ ಸಾವು

ಕೋಲ್ಕತ್ತ (ಪಿಟಿಐ): ಕೊರೊನಾ ಸೋಂಕು ಇರುವುದು ದೃಢಪಟ್ಟ ನಂತರ, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪಶ್ಚಿಮ ಬಂಗಾಳದ ಸಂಶೇರ್‌ಗಂಜ್ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರೆಜೌಲ್ ಹಕ್ ಗುರುವಾರ ಮುಂಜಾನೆ ಮೃತಪಟ್ಟಿರುವುದಾಗಿ ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ರೆಜೌಲ್ ಹಕ್ ಕಣಕ್ಕಿಳಿದಿದ್ದರು.

ಬುಧವಾರ ಅವರು ಜಂಗಿಪುರದ ಖಾಸಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಆರೋಗ್ಯ ಸ್ಥಿತಿ ಗಂಭೀರವಾದ ನಂತರ ಕೋಲ್ಕತ್ತದ ಆಸ್ಪತ್ರೆಗೆ ದಾಖಲಿಸಲಾಯಿತು.

ಚಿಕಿತ್ಸೆಗೆ ಸ್ಪಂದಿಸದೇ, ಗುರುವಾರ ಮುಂಜಾನೆ 5 ಗಂಟೆ ವೇಳೆಗೆ ನಿಧನರಾದರು ಎಂದು ಮೂಲಗಳು ತಿಳಿಸಿವೆ.

ಹರಿಯಾಣ: 10ನೇ ತರಗತಿ ಪರೀಕ್ಷೆ ರದ್ದು, 12ನೇ ತರಗತಿ ಪರೀಕ್ಷೆ ಮುಂದೂಡಿಕೆ

ಚಂಡೀಗಢ (ಪಿಟಿಐ): ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಹರಿಯಾಣ ಸರ್ಕಾರವು 10ನೇ ತರಗತಿಯ ಪರೀಕ್ಷೆಗಳನ್ನು ಗುರುವಾರ ರದ್ದುಗೊಳಿಸಿದ್ದು, 12ನೇ ತರಗತಿಯ ಪರೀಕ್ಷೆಗಳನ್ನು ಮುಂದೂಡಿದೆ.

'ಹರಿಯಾಣದಲ್ಲಿ ಕೋವಿಡ್ ಪ್ರಕರಣ ಸಂಖ್ಯೆ ಹೆಚ್ಚುತ್ತಿದೆ. ಹಾಗಾಗಿ, ಸಿಬಿಎಸ್‌ಸಿಯ ಕೈಗೊಂಡ ನಿರ್ಧಾರವನ್ನು ಹರಿಯಾಣ ಸರ್ಕಾರವೂ ಅನುಸರಿಸಿದೆ' ಎಂದು ಶಿಕ್ಷಣ ಸಚಿವ ಕನ್ವರ್ ಪಾಲ್ ತಿಳಿಸಿದ್ದಾರೆ.

'ಆಂತರಿಕ ಮೌಲ್ಯಮಾಪನದ ಆಧಾರದಲ್ಲಿ 10ನೇ ತರಗತಿಯ ಫಲಿತಾಂಶ ಪ್ರಕಟಿಸಲಾಗುವುದು' ಎಂದರು.

ಇಲ್ಲಿ ಪರೀಕ್ಷೆಗಳು ಏಪ್ರಿಲ್‌ನಲ್ಲಿ ಶುರುವಾಗಿ ಮೇ ತಿಂಗಳ ಮಧ್ಯಭಾಗದಲ್ಲಿ ಮುಕ್ತಾಯವಾಗಬೇಕಿತ್ತು.

ಪಂಜಾಬ್‌ನಲ್ಲೂ ಪರೀಕ್ಷೆ ರದ್ದು

ನವದೆಹಲಿ: ಪಂಜಾಬ್‌ನಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ರದ್ದು ಮಾಡಿರುವುದಾಗಿ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ಪ್ರಕಟಿಸಿದ್ದಾರೆ. 5, 8ನೇ ಹಾಗೂ 10ನೇ ತರಗತಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯದೆಯೇ ಮುಂದಿನ ಹಂತಕ್ಕೆ ತೇರ್ಗಡೆ ಮಾಡಲಾಗುತ್ತದೆ.

ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿರುವ ಬೆನ್ನಲ್ಲೇ ಪಂಜಾಬ್ ಸರ್ಕಾರ ಈ ನಿರ್ಧಾರ ಪ್ರಕಟಿಸಿದೆ. 12ನೇ ತರಗತಿಯ ಪಿಎಸ್‌ಇಬಿ ಪರೀಕ್ಷೆಗಳನ್ನು ಈಗಾಗಲೇ ಮುಂದೂಡಲಾಗಿದ್ದು, ಮುಂದಿನ ದಿನಗಳಲ್ಲಿ ಪರಿಸ್ಥಿತಿ ಅವಲೋಕಿಸಿದ ಬಳಿಕ ಪರೀಕ್ಷೆ ನಡೆಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ಮುಖ್ಯಮಂತ್ರಿ ಕಾರ್ಯಾಲಯ ಪ್ರಕಟಿಸಿದೆ.

ಪತ್ರಕರ್ತರಿಗೆ ಆದ್ಯತೆಯ ಮೇರೆಗೆ ಲಸಿಕೆ ನೀಡಿ: ಸಂಪಾದಕರ ಕೂಟ ಆಗ್ರಹ

ನವದೆಹಲಿ (ಪಿಟಿಐ): ಪತ್ರಕರ್ತರವನ್ನು ಮುಂಚೂಣಿ ಕೆಲಸಗಾರರು ಎಂದು ಘೋಷಿಸಿ, ಆದ್ಯತೆ ಮೇರೆಗೆ ಕೋವಿಡ್–19ರ ಲಸಿಕೆ ನೀಡಬೇಕು ಎಂದು ಭಾರತೀಯ ಸಂಪಾದಕರ ಕೂಟವು (ಇಜಿಐ) ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

ಸಾಂಕ್ರಾಮಿಕ ರೋಗ, ಚುನಾವಣೆ ಮತ್ತು ಇತರ ಪ್ರಚಲಿತ ವಿದ್ಯಮಾನಗಳ ಕುರಿತು ಸುದ್ದಿ ಸಂಸ್ಥೆಗಳು ಬಿಡುವಿಲ್ಲದೆ ಸುದ್ದಿ ಮತ್ತು ಮಾಹಿತಿಯನ್ನು ಓದುಗರಿಗೆ ತಲುಪಿಸುವ ಕಾರ್ಯದಲ್ಲಿ ನಿರತವಾಗಿವೆ ಎಂದು ಕೂಟ ಪ್ರಕಟಣೆಯಲ್ಲಿ ತಿಳಿಸಿದೆ.

ಸುದ್ದಿ ಮಾಧ್ಯಮವನ್ನು ಅಗತ್ಯ ಸೇವೆಗಳ ವ್ಯಾಪ್ತಿಯಲ್ಲಿ ಸೇರಿಸಲಾಗಿದೆ. ಕೊರೊನಾ ಸೋಂಕು ವ್ಯಾಪಕವಾಗಿ ಹರಡುತ್ತಿರುವ ಈ ಸಂದರ್ಭದಲ್ಲಿ ಪತ್ರಕರ್ತರಿಗೆ ಲಸಿಕೆ ನೀಡುವುದರ ಮೂಲಕ ರಕ್ಷಣೆಯ ಹೊದಿಕೆ ನೀಡುವುದು ನ್ಯಾಯೋಚಿತ ಎಂದು ಇಜಿಐ ಪ್ರತಿಪಾದಿಸಿದೆ.

ಲಸಿಕೆಯ ರಕ್ಷಣೆ ಇಲ್ಲದೆ, ಪತ್ರಕರ್ತರು ತಮ್ಮ ವೃತ್ತಿಪರ ಜವಾಬ್ದಾರಿಗಳನ್ನು ನಿರ್ವಹಿಸುವುದು ಕಷ್ಟಕರವಾಗಿದೆ. ಹಾಗಾಗಿ ಕೇಂದ್ರ ಸರ್ಕಾರ ಎಲ್ಲ ಪತ್ರಕರ್ತರಿಗೂ (ವಯೋಮಿತಿ ಹೇರದೆ) ಲಸಿಕೆ ನೀಡಬೇಕು ಎಂದು ಕೂಟ ಮನವಿ ಮಾಡಿದೆ.

ನಮಾಜು: ಹೈಕೋರ್ಟ್‌ಗೆ ಕೇಂದ್ರದ ಮನವಿ

ನವದೆಹಲಿ (ಪಿಟಿಐ): ಕೋವಿಡ್ ನಿಯಮಗಳ ಪಾಲನೆಯೊಂದಿಗೆ ದೆಹಲಿಯ ನಿಜಾಮುದ್ದೀನ್ ಮರ್ಕಜ್‌ನ ಮಸೀದಿ ನೆಲಮಹಡಿಯಲ್ಲಿ ನಮಾಜು ಮಾಡಲು, ಸೂಕ್ತ ವ್ಯಕ್ತಿಗಳಿಗೆ ದೆಹಲಿ ಹೈಕೋರ್ಟ್ ತನ್ನ ವಿವೇಚನೆಯಡಿ ಅನುಮತಿ ನೀಡಬಹುದಾಗಿದೆ ಎಂದು ಕೇಂದ್ರ ಸರ್ಕಾರ ಕೋರ್ಟ್‌ಗೆ ಸಲ್ಲಿಸಿದ ತನ್ನ ವರದಿಯಲ್ಲಿ ಹೇಳಿದೆ.

ಅದರಂತೆ ಮರ್ಕಜ್‌ನಲ್ಲಿ 50 ಮಂದಿ ಮಾತ್ರ ನಮಾಜು ಮಾಡಲು ನ್ಯಾಯಾಲಯ ಅನುಮತಿ ನೀಡಿದೆ.

ಕೇಂದ್ರ ತನ್ನ ವರದಿಯಲ್ಲಿ ಎಲ್ಲ ಪ್ರಾರ್ಥನಾ ಸ್ಥಳಗಳನ್ನು ಮುಚ್ಚಲಾಗಿದೆಯೇ ಎಂದು ಸ್ಪಷ್ಟವಾಗಿ ತಿಳಿಸಿಲ್ಲ. ಕೋವಿಡ್ ಹಿನ್ನೆಲೆಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚಿನ ಜನಸಂದಣಿ ಸೇರುವುದನ್ನು ನಿರ್ಬಂಧಿಸಿ ಆದೇಶಿಸ ಲಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಲಜಪತ್ ನಗರ ಉಪ ವಿಭಾಗದ ಎಸಿಪಿ ಅವರ ವರದಿ ಅವಲೋಕನೆ ಬಳಿಕ ನ್ಯಾಯಮೂರ್ತಿ ಮುಕ್ತಾ ಗುಪ್ತಾ ಅವರು, 'ಇತರೆ ಧಾರ್ಮಿಕ ಸ್ಥಳಗಳು ತೆರೆದಿರುವ ಕುರಿತು ನಿಮ್ಮ ವರದಿಯಲ್ಲಿ ಸ್ಪಷ್ಟತೆ ಇಲ್ಲ. ನಾವು ಗಮನಿಸಿದಂತೆ ಬಹುತೇಕ ಧಾರ್ಮಿಕ ಸ್ಥಳಗಳು ತೆರೆದಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕೋವಿಡ್: ಪ್ರಕರಣಗಳ ಹೆಚ್ಚಳದ ಹಿನ್ನೆಲೆಯಲ್ಲಿ ಸರ್ಕಾರದ ನಿರ್ಧಾರ

ಉತ್ತರ ಪ್ರದೇಶ: 10 ಜಿಲ್ಲೆಗಳಲ್ಲಿ ರಾತ್ರಿ ಕರ್ಫ್ಯೂ

ಲಖನೌ (ಪಿಟಿಐ): ಕೋವಿಡ್ 19 ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದಲ್ಲಿ 12ನೇ ತರಗತಿವರೆಗಿನ ಎಲ್ಲ ಶಾಲೆಗಳನ್ನು ಮೇ 15ರವರೆಗೆ ಮುಚ್ಚುವಂತೆ ಹಾಗೂ 10 ಮತ್ತು 12ನೇ ತರಗತಿಗೆ ನಡೆಯಬೇಕಿದ್ದ ಪರೀಕ್ಷೆಗಳನ್ನು ಮೇ 20ಕ್ಕೆ ಮುಂದೂಡಿ ಸರ್ಕಾರ ಗುರುವಾರ ಆದೇಶಿಸಿದೆ.

ಉತ್ತರ ಪ್ರದೇಶ ಪರೀಕ್ಷಾ ಮಂಡಳಿ ನಡೆಸುವ 10 ಮತ್ತು 12ನೇ ತರಗತಿ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಪರೀಕ್ಷೆಯ ಹೊಸ ವೇಳಾಪಟ್ಟಿಯನ್ನು ಮೇ ಮೊದಲ ವಾರದಲ್ಲಿ ಪ್ರಕಟಿಸಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಹಿಂದೆ ನಿಗದಿಪಡಿಸಿದ ವೇಳಾಪಟ್ಟಿಯಂತೆ ಉತ್ತರ ಪ್ರದೇಶ ಶಿಕ್ಷಣ ಮಂಡಳಿಯ ಎಲ್ಲ ಪರೀಕ್ಷೆಗಳು ಮೇ 8ರಿಂದ ಆರಂಭವಾಗಬೇಕಿತ್ತು. ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣದಿಂದ ಪರೀಕ್ಷೆಗಳನ್ನು ಮುಂದೂಡಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಸದ್ಯ ಉತ್ತರ ಪ್ರದೇಶದ ಹತ್ತು ಜಿಲ್ಲೆಗಳಲ್ಲಿ ರಾತ್ರಿ 8 ರಿಂದ ಬೆಳಿಗ್ಗೆ 7ರವರೆಗೆ ರಾತ್ರಿ ಕರ್ಫ್ಯೂ ವಿಧಿಸಲಾಗಿದೆ. ಸದ್ಯ ರಾಜ್ಯದಲ್ಲಿ 2 ಸಾವಿರ ಸಕ್ರಿಯ ಕೋವಿಡ್ ಪ್ರಕರಣಗಳಿವೆ. ಕೋವಿಡ್ ಪ್ರಕರಣಗಳು ಹೆಚ್ಚಿರುವ ಲಖನೌ, ಅಲಹಾಬಾದ್, ವಾರಾಣಸಿ, ಕಾನ್ಪುರ, ಗೌತಮ ಬುದ್ಧ ನಗರ, ಗಾಜಿಯಾಬಾದ್, ಮೀರತ್ ಮತ್ತು ಗೋರಖ್‌ಪುರದಲ್ಲಿ ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗಿದೆ.



ಜೈದೇವ್ ಉನದ್ಕತ್ ಉತ್ತಮ ದಾಳಿ; ಮಿಂಚಿದ ಮೊರಿಸ್

ರಾಯಲ್ಸ್ ಜಯಭೇರಿ

ಮುಂಬೈ (ಪಿಟಿಐ): ಮೊದಲ ಪಂದ್ಯದಲ್ಲಿ ಜಯದ ಸನಿಹದಲ್ಲಿ ಮುಗ್ಗರಿಸಿದ ರಾಜಸ್ಥಾನ ರಾಯಲ್ಸ್ ತಂಡ ಎರಡನೇ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ರಾಯಲ್ಸ್ ಮೂರು ವಿಕೆಟ್‌ಗಳಿಂದ ಮಣಿಸಿತು.


148 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ರಾಯಲ್ಸ್ 42ಕ್ಕೆ ಐದು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಡೇವಿಡ್ ಮಿಲ್ಲರ್ (62; 43 ಎಸೆತ, 7 ಬೌಂಡರಿ, 2 ಸಿಕ್ಸರ್) ಆಸರೆಯಾದರು. ಕೊನೆಯ ಓವರ್‌ಗಳಲ್ಲಿ ಕ್ರಿಸ್ ಮೊರಿಸ್ (36; 18 ಎ, 4 ಸಿ) ಮತ್ತು ಜೈದೇವ್ ಉನದ್ಕತ್ 46 ರನ್‌ಗಳ ಜೊತೆಯಾಟದ ಮೂಲಕ ತಂಡವನ್ನು ದಡ ಸೇರಿಸಿದರು. ಇನ್ನೂ ಎರಡು ಎಸೆತ ಉಳಿದಿರುವಾಗ ತಂಡ ಏಳು ವಿಕೆಟ್‌ಗಳಿಗೆ 150 ರನ್ ಗಳಿಸಿ ಜಯದ ನಗೆ ಸೂಸಿತು.

ಉನದ್ಕತ್ ಪ್ರಬಲ ದಾಳಿ: ಟಾಸ್ ಸೋತು ಬ್ಯಾಟಿಂಗ್ ಮಾಡಿದ ಡೆಲ್ಲಿ ತಂಡ ಎಡಗೈ ಮಧ್ಯಮವೇಗಿ ಜೈದೇವ್ ಉನದ್ಕತ್ ಅವರ ದಾಳಿಗೆ ಕುಸಿಯಿತು. ರಿಷಭ್ ಪಂತ್ (51; 32 ಎ, 9 ಬೌಂ) ಏಕಾಂಗಿ ಹೋರಾಟ ನಡೆಸಿದರು.

ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿಯೇ ಪೃಥ್ವಿ ಶಾ ವಿಕೆಟ್ ಗಳಿಸಿ ಜೈದೇವ್ ಉನದ್ಕತ್ ಡೆಲ್ಲಿಗೆ ಪೆಟ್ಟುಕೊಟ್ಟರು. ಉನದ್ಕತ್ ಹಾಕಿದ ಇನ್ನೊಂದು ಓವರ್‌ನಲ್ಲಿ ಶಿಖರ್ ಧವನ್ ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್‌ಗೆ ಕ್ಯಾಚಿತ್ತರು. ಆರನೇ ಓವರ್‌ನಲ್ಲಿ ತಮ್ಮದೇ ಎಸೆತದಲ್ಲಿ ಅಜಿಂಕ್ಯ ರಹಾನೆ ಕ್ಯಾಚ್ ಪಡೆದ ಉನದ್ಕತ್ ಸಂಭ್ರಮಿಸಿದರು. ಇದರಿಂದಾಗಿ ಡೆಲ್ಲಿ ತಂಡವು ಕೇವಲ 36 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು.

ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ರಿಷಭ್ ಪಂತ್ ಆಟಕ್ಕೆ ಕುದುರಿಕೊಂಡು ರನ್ ಸೇರಿಸಿದರು. 13ನೇ ಓವರ್‌ನಲ್ಲಿ ರನ್ ಗಳಿಕೆಗೆ ವೇಗ ನೀಡುವ ಭರದಲ್ಲಿದ್ದ ರಿಷಭ್ ರನ್‌ಔಟ್ ಆಗಿ ಮರಳಿದರು. ನಂತರ ಟಾಮ್ ಕರನ್ (21; 16 ಎ, 2 ಬೌಂ) ಮತ್ತು ಕ್ರಿಸ್ ವೋಕ್ಸ್ (15; 11 ಎ, 2 ಬೌಂ)ಅಲ್ಪ ಕಾಣಿಕೆ ನೀಡಿದರು.

ತಂಡದ ಇನಿಂಗ್ಸ್‌ನಲ್ಲಿ ಒಂದೇ ಒಂದು ಸಿಕ್ಸರ್ ಇರಲಿಲ್ಲ. ರಾಜಸ್ಥಾನ ಏಳು ಸಿಕ್ಸರ್ ಗಳಿಸಿತು.



ಡೇವಿಡ್ ಮಿಲ್ಲರ್ ಬ್ಯಾಟಿಂಗ್ ಶೈಲಿ –ಪಿಟಿಐ ಚಿತ್ರ

ಸ್ಕೋರ್‌ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 8ಕ್ಕೆ 147 (20 ಓವರ್‌ಗಳಲ್ಲಿ)

ಪೃಥ್ವಿ ಶಾ ಸಿ ಡೇವಿಡ್ ಮಿಲ್ಲರ್ ಬಿ ಜೈದೇವ್ ಉನದ್ಕತ್	2
ಶಿಖರ್ ಧವನ್ ಸಿ ಸಂಜು ಸ್ಯಾಮ್ಸನ್ ಬಿ ಜೈದೇವ್ ಉನದ್ಕತ್	9
ಅಜಿಂಕ್ಯ ರಹಾನೆ ಸಿ ಮತ್ತು ಜೈದೇವ್ ಉನದ್ಕತ್	8
ರಿಷಭ್ ಪಂತ್ ರನ್ ಔಟ್ (ರಿಯಾನ್ ಪರಾಗ್)	51
ಮಾರ್ಕಸ್ ಸ್ಟೊಯಿನಿಸ್ ಸಿ ಜೋಸ್ ಬಟ್ಲರ್ ಬಿ ಮುಸ್ತಫಿಜುರ್	0
ಲಲಿತ್ ಯಾದವ್ ಸಿ ತೇವಾಥಿಯಾ ಬಿ ಕ್ರಿಸ್ ಮೊರಿಸ್	20
ಟಾಮ್ ಕರನ್ ಬಿ ಮುಸ್ತಫಿಜುರ್ ರಹಿಮಾನ್	21
ಕ್ರಿಸ್ ವೋಕ್ಸ್ ಔಟಾಗದೆ	15
ರವಿಚಂದ್ರನ್ ಅಶ್ವಿನ್ ರನ್ ಔಟ್ (ಡೇವಿಡ್ ಮಿಲ್ಲರ್/ಸಂಜು ಸ್ಯಾಮ್ಸನ್)	7
ಕಗಿಸೊ ರಬಾಡ ಔಟಾಗದೆ	9
ಇತರೆ (ವೈಡ್ 5)	5

ವಿಕೆಟ್ ಪತನ: 1-5 (ಪೃಥ್ವಿ ಶಾ, 1.6), 2-16 (ಶಿಖರ್ ಧವನ್, 3.1), 3-36 (ಅಜಿಂಕ್ಯ ರಹಾನೆ, 5.5), 4-37 (ಮಾರ್ಕಸ್ ಸ್ಟೋಯಿನಿಸ್, 6.5), 5-88 (ರಿಷಭ್ ಪಂತ್, 12.4), 6-100 (ಲಲಿತ್ ಯಾದವ್, 14.5), 7-128 (ಟಾಮ್ ಕರನ್, 18.2), 8-136 (ರವಿಚಂದ್ರನ್ ಅಶ್ವಿನ್, 18.6)

ಬೌಲಿಂಗ್: ಚೇತನ್ ಸಕಾರಿಯಾ 4–0–33–0, ಜೈದೇವ್ ಉನದ್ಕತ್ ಉನದ್ಕತ್ 4–0–15–3, ಕ್ರಿಸ್ ಮೊರಿಸ್ 3–0–27–1, ಮುಸ್ತಫಿಜುರ್ ರಹಿಮಾನ್ 4–0–29–2, ರಿಯಾನ್ ಪರಾಗ್ 2–0–16–0, ರಾಹುಲ್ ತೆವಾಥಿಯಾ 3–0–27–0

ರಾಜಸ್ಥಾನ ರಾಯಲ್ಸ್ 7ಕ್ಕೆ 150 (19.4 ಓವರ್‌ಗಳಲ್ಲಿ)

ಜೋಸ್ ಬಟ್ಲರ್ ಸಿ ರಿಷಭ್ ಪಂತ್ ಬಿ ಕ್ರಿಸ್ ವೋಕ್ಸ್	2
ಮನನ್ ವೊಹ್ರಾ ಸಿ ಕಗಿಸೊ ರಬಾಡ ಬಿ ಕ್ರಿಸ್ ವೋಕ್ಸ್	9
ಸಂಜು ಸ್ಯಾಮ್ಸನ್ ಸಿ ಶಿಖರ್ ಧವನ್ ಬಿ ಕಗಿಸೊ ರಬಾಡ	4
ಶಿವಂ ದುಬೆ ಸಿ ಶಿಖರ್ ಧವನ್ ಬಿ ಆವೇಶ್ ಖಾನ್	2
ಡೇವಿಡ್ ಮಿಲ್ಲರ್ ಸಿ ಲಲಿತ್ ಯಾಧವ್ ಬಿ ಆವೇಶ್ ಖಾನ್	62
ರಿಯಾನ್ ಪರಾಗ್ ಸಿ ಶಿಖರ್ ಧವನ್ ಬಿ ಆವೇಶ್ ಖಾನ್	2
ರಾಹುಲ್ ತೆವಾಥಿಯಾ ಸಿ ಲಲಿತ್ ಯಾಧವ್ ಬಿ ಕಗಿಸೊ ರಬಾಡ	19
ಕ್ರಿಸ್ ಮೊರಿಸ್ ಔಟಾಗದೆ	36
ಜೈದೇವ್ ಉನದ್ಕತ್ ಔಟಾಗದೆ	11
ಇತರೆ (ಲೆಗ್ ಬೈ 2, ವೈಡ್ 1)	3

ವಿಕೆಟ್ ಪತನ: 1–13 (ಮನನ್ ವೊಹ್ರಾ, 2.4), 2–13 (ಜೋಸ್ ಬಟ್ಲರ್, 2.6), 3–17 (ಸಂಜು ಸ್ಯಾಮ್ಸನ್, 3.3), 4–36 (ಶಿವಂ ದುಬೆ, 7.4), 5–42 (ರಿಯಾನ್ ಪರಾಗ್, 9.2), 6–90 (ರಾಹುಲ್ ತೆವಾಥಿಯಾ, 14.5), 7–104 (ಡೇವಿಡ್ ಮಿಲ್ಲರ್, 15.5)

ಬೌಲಿಂಗ್: ಕ್ರಿಸ್ ವೋಕ್ಸ್ 4–0–22–2, ಆವೇಶ್ ಖಾನ್ 4–0–32–3, ಕಗಿಸೊ ರಬಾಡ 4–0–30–2, ರವಿಚಂದ್ರನ್ ಅಶ್ವಿನ್ 3–0–14–0, ಟಾಮ್ ಕರನ್ 3.4–0–35–0, ಮಾರ್ಕಸ್ ಸ್ಟೋಯಿನಿಸ್ 1–0–15–0

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 3 ವಿಕೆಟ್‌ಗಳ ಜಯ

ಪಂಜಾಬ್ ಕಿಂಗ್ಸ್‌ಗೆ ಸೂಪರ್ ಸವಾಲು

ಮುಂಬೈ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಎರಡನೇ ಜಯದ ಕನಸಿನೊಂದಿಗೆ ಶುಕ್ರವಾರ ಕಣಕ್ಕಿಳಿಯಲಿದೆ. ಮಹೇಂದ್ರ ಸಿಂಗ್ ಧೋನಿಯ ಚೆನ್ನೈ ಸೂಪರ್ ಕಿಂಗ್ಸ್ ಬಳಗದ ಸವಾಲು ಎದುರಿಸಲಿದೆ.

ವಾಂಖೆಡೆ ಕ್ರೀಡಾಂಗಣದಲ್ಲಿ ತನ್ನ ಮೊದಲ ಪಂದ್ಯದಲ್ಲಿ ರಾಹುಲ್ ಬಳಗವು ರಾಜಸ್ಥಾನ ರಾಯಲ್ಸ್ ಎದುರು ರೋಚಕ ಜಯ ಸಾಧಿಸಿತ್ತು. ರಾಹುಲ್ ಆ ಪಂದ್ಯದಲ್ಲಿ ಒಂಬತ್ತು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡಿದ್ದರು. ದೀಪಕ್ ಹೂಡಾ ಮತ್ತು ಕ್ರಿಸ್ ಗೇಲ್ ಅವರ ಉತ್ತಮ ಬ್ಯಾಟಿಂಗ್ ಬಲದಿಂದ ತಂಡವು 221 ರನ್‌ಗಳ ದೊಡ್ಡ ಮೊತ್ತ ದಾಖಲಿಸಿತ್ತು.

ಕಿಂಗ್ಸ್ ತಂಡವು ಬ್ಯಾಟಿಂಗ್ ಮತ್ತು ಬೌಲಿಂಗ್ ವಿಭಾಗಗಳಲ್ಲಿ ಉತ್ತಮ ಆಟಗಾರರನ್ನು ಹೊಂದಿದೆ. ಆದರೆ, ಫೀಲ್ಡಿಂಗ್ ಗುಣಮಟ್ಟ ಕಳಪೆಯಾಗಿದೆ. ಮೊದಲ ಪಂದ್ಯದಲ್ಲಿ ಕೈಚೆಲ್ಲಿದ ಕ್ಯಾಚುಗಳಿಂದಾಗಿಯೇ ಪಂಜಾಬ್ ತಂಡವು ಜಯಿಸಲು ಕಠಿಣ ಹಾದಿ ಸವೆಸಬೇಕಾಯಿತು. ಮಯಂಕ್ ಅಗರವಾಲ್, ನಿಕೊಲಸ್ ಪೂರನ್ ತಮ್ಮ ಎಂದಿನ ಲಯಕ್ಕೆ ಮರಳಿದರೆ ಬ್ಯಾಟಿಂಗ್ ಇನ್ನಷ್ಟು ಬಲಗೊಳ್ಳುತ್ತದೆ. ಮೊಹಮ್ಮದ್ ಶಮಿ, ಜೇ ರಿಚರ್ಡ್ಸನ್ ಮತ್ತು ಅರ್ಷದೀಪ್ ಸಿಂಗ್ ಅವರು ವಿಕೆಟ್‌ಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಆದರೆ ಇವರೂ ಸೇರಿದಂತೆ ಎಲ್ಲ ಬೌಲರ್‌ಗಳೂ ದುಬಾರಿಯಾಗಿದ್ದರು.

ಆದರೆ ಚೆನ್ನೈ ತಂಡವು ತನ್ನ ಮೊದಲ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಸೋತಿತ್ತು. ಆ ಪಂದ್ಯದಲ್ಲಿಅನುಭವಿ ಆಲ್‌ರೌಂಡರ್ ಸುರೇಶ್ ರೈನಾ, ಅಂಬಟಿ ರಾಯುಡು ಮತ್ತು ಕೊನೆಯ ಹಂತದಲ್ಲಿ ಸ್ಯಾಮ್ ಕರನ್, ರವೀಂದ್ರ ಜಡೇಜ ರನ್‌ಗಳ ಕಾಣಿಕೆ ನೀಡಿದ್ದರಿಂದ ಹೋರಾಟದ ಮೊತ್ತ ಗಳಿಸಿತ್ತು. ಆದರೆ ಧೋನಿ ಸೊನ್ನೆಗೆ ಔಟಾಗಿದ್ದರು. ಫಫ್ ಡುಪ್ಲೆಸಿ ಕೂಡ ವೈಫಲ್ಯ ಅನುಭವಿಸಿದ್ದರು. ಕನ್ನಡಿಗ ರಾಬಿನ್ ಉತ್ತಪ್ಪ ಮತ್ತು ಕೃಷ್ಣಪ್ಪ ಗೌತಮ್ ಅವರಿಗೆ ಆ ಪಂದ್ಯದಲ್ಲಿ ಅವಕಾಶ ನೀಡಿರಲಿಲ್ಲ. ಪಂಜಾಬ್ ಎದುರು ರಾಬಿನ್ ಕಣಕ್ಕಿಳಿಯುವ ಸಾಧ್ಯತೆ ಇದೆ. ಬೌಲಿಂಗ್ ಕೂಡ ಪರಿಣಾಮಕಾರಿಯಾಗಿರಲಿಲ್ಲ. ಪಂಜಾಬ್ ಬ್ಯಾಟಿಂಗ್ ಬಲವನ್ನು ಕಟ್ಟಿಹಾಕಲು ಧೋನಿ ಯಾವ ರೀತಿಯಲ್ಲಿ ರಣತಂತ್ರ ಮಾಡುವರು ಎಂಬ ಕುತೂಹಲವೂ ಗರಿಗೆದರಿದೆ.

ಹೋದ ವರ್ಷದ ಟೂರ್ನಿಯಲ್ಲಿ ಚೆನ್ನೈ ತಂಡವು ಪ್ಲೇ ಆಫ್ ಹಂತಕ್ಕೇರುವಲ್ಲಿ ವಿಫಲವಾಗಿತ್ತು. ಈ ಸಲ ಜಯದ ಶುಭಾರಂಭ ಪಡೆಯುವಲ್ಲಿ ಸಫಲವಾಗಿಲ್ಲ. ಎರಡನೇ ಪಂದ್ಯದಲ್ಲಿ ಪುಟದೇಳುವ ವಿಶ್ವಾಸದಲ್ಲಿದೆ.



ಕೆ.ಎಲ್. ರಾಹುಲ್



ಸುರೇಶ್ ರೈನಾ

ಮುಖಾಮುಖಿ ಪಂದ್ಯಗಳು 23

ಚೆನ್ನೈಗೆಲುವು 14
ಪಂಜಾಬ್‌ಜಯ 9

	ಗರಿಷ್ಠ ಮೊತ್ತ	ಕನಿಷ್ಠ ಮೊತ್ತ
ಚೆನ್ನೈ	240	120
ಪಂಜಾಬ್	231	92

ಕೊಹ್ಲಿಗೆ ವಿಸ್ಡನ್ ಅಲ್‌ಮನ್ಯಾಕ್ ಗೌರವ

ಲಂಡನ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ, ವಿಸ್ಡನ್ ಅಲ್‌ಮನ್ಯಾಕ್ ದಶಕದ ಏಕದಿನ ಮಾದರಿಯ ಕ್ರಿಕೆಟಿಗ ಗೌರವಕ್ಕೆ ಪಾತ್ರರಾಗಿದ್ದಾರೆ.

ಕ್ರಿಕೆಟ್ ಕ್ಷೇತ್ರದ ಐತಿಹಾಸಿಕ ಘಟನೆಗಳನ್ನು ದಾಖಲಿಸುವ ಪ್ರತಿಷ್ಠಿತ ವಾರ್ಷಿಕ ಪುಸ್ತಕ ಇದಾಗಿದೆ. 2008ರಲ್ಲಿ ಕೊಹ್ಲಿ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. 32 ವರ್ಷದ ಕೊಹ್ಲಿ ಅವರು 254 ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಅದರಲ್ಲಿ 12,169 ರನ್‌ಗಳನ್ನು ಗಳಿಸಿದ್ದಾರೆ.


‘ಮೊಟ್ಟಮೊದಲ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್ ಪಂದ್ಯದ ಸುವರ್ಣಮಹೋತ್ಸವದ ಅಂಗವಾಗಿ ಐವರು ಶ್ರೇಷ್ಠ ಕ್ರಿಕೆಟಿಗರ ಕುರಿತು 2021ರ ಕೃತಿಯಲ್ಲಿ ಪ್ರಕಟಿಸಲಾಗಿದೆ. ಆ ಮೂಲಕ ಅವರಿಗೆ ಗೌರವ ನೀಡಲಾಗಿದೆ‘ ಎಂದು ವಿಸ್ಡನ್ ತಿಳಿಸಿದೆ.

2011ರ ಏಕದಿನ ವಿಶ್ವಕಪ್ ವಿಜೇತ ಭಾರತ ತಂಡವನ್ನು ಕೊಹ್ಲಿ ಪ್ರತಿನಿಧಿಸಿದ್ದರು. ಅವರ ಖಾತೆಯಲ್ಲಿ 42 ಶತಕಗಳು ಇವೆ. 60 ಸರಾಸರಿಯಲ್ಲಿ ರನ್‌ಗಳನ್ನು ಕಲೆಹಾಕಿದ್ದಾರೆ.

1980ರಿಂದ ದಶಕದ ಕ್ರಿಕೆಟಿಗ ಗೌರವಕ್ಕೆ ಭಾರತ ತಂಡದ ಮಾಜಿ ನಾಯಕ ಕಪಿಲ್ ದೇವ್ ಅವರನ್ನು ಆಯ್ಕೆ ಮಾಡಲಾಗಿದೆ. 1983ರಲ್ಲಿ ವಿಶ್ವ ಕಪ್ ಗೆದ್ದ ಭಾರತ ತಂಡವನ್ನು ಕಪಿಲ್ ಮುನ್ನಡೆಸಿದ್ದರು.

1990ರ ದಶಕದ ಗೌರವವನ್ನು ದಿಗ್ಗಜ ಬ್ಯಾಟ್ಸ್‌ಮನ್ ಸಚಿನ್ ತೆಂಡೂಲ್ಕರ್ ಗಳಿಸಿದ್ದಾರೆ.

ಡಾಮ್ ಸಿಬ್ಲಿ, ಜ್ಯಾಕ್ ಕ್ರಾಲಿ, ವೆಸ್ಟ್ ಇಂಡೀಸ್‌ನ ಜೇಸನ್ ಹೋಲ್ಡರ್, ಮೊಹಮ್ಮದ್ ರಿಜ್ವಾನ್ ಮತ್ತು ಡರೆನ್ ಸ್ಟೀವನ್ಸ್ 2021ರ ಗೌರವಕ್ಕೆ ಪಾತ್ರರಾಗಿದ್ದಾರೆ. ಆಸ್ಟ್ರೇಲಿಯಾ ಮಹಿಳಾ ತಂಡದ ಬೆತ್ ಮೂನಿ, ವಿಶ್ವದ ಶ್ರೇಷ್ಠ ಕ್ರಿಕೆಟ್ ಆಟಗಾರ್ತಿಯಾಗಿದ್ದಾರೆ. ವಿಂಡೀಸ್ ಆಲ್‌ರೌಂಡರ್ ಕೀರನ್ ಪೊಲಾರ್ಡ್ ವರ್ಷದ ಟಿ20 ಮಾದರಿ ಕ್ರಿಕೆಟಿಗ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ.



ವಿರಾಟ್ ಕೊಹ್ಲಿ

ಮ್ಯಾಕ್ಸ್‌ವೆಲ್ ಪ್ರಬುದ್ಧರಾಗಿದ್ದಾರೆ: ಕ್ಯಾಟಿಚ್

ಚೆನ್ನೈ(ಪಿಟಿಐ): ರಾಯಲ್ ಚಾಲೆಂಜರ್ಸ್ ತಂಡವು ಬುಧವಾರ ಐಪಿಎಲ್ ಪಂದ್ಯದಲ್ಲಿ ಜಯಿಸಲು ಪ್ರಮುಖ ಪಾತ್ರ ವಹಿಸಿದ ಗ್ಲೆನ್ ಮ್ಯಾಕ್ಸ್‌ವೆಲ್ ಅವನ್ನು ತಂಡದ ಮುಖ್ಯ ಕೋಚ್ ಸೈಮನ್ ಕ್ಯಾಟಿಚ್ ಶ್ಲಾಘಿಸಿದ್ದಾರೆ.

‘ಅವರ ಆಟದಲ್ಲಿ ಪ್ರಬುದ್ಧತೆ ಇದೆ. ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಅವರ ಆಟವು ಅಮೋಘವಾಗಿತ್ತು. ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಆಡಿದರು. ತಮ್ಮ ಅನುಭವವನ್ನು ಚೆನ್ನಾಗಿ ಬಳಸಿಕೊಂಡ ಅವರು ಇನಿಂಗ್ಸ್‌ನ ಕೊನೆಯಲ್ಲಿ ಚುರುಕಾಗಿ ರನ್ ಗಳಿಸಿದರು‘ ಎಂದು ಕ್ಯಾಟಿಚ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸನ್‌ರೈಸರ್ಸ್ ವಿರುದ್ಧದ ಪಂದ್ಯದಲ್ಲಿ ಮ್ಯಾಕ್ಸ್‌ವೆಲ್ ಅರ್ಧಶತಕ ಹೊಡೆದಿದ್ದರು. ಹೋದ ವರ್ಷ ಪಂಜಾಬ್ ಕಿಂಗ್ಸ್ ತಂಡದಲ್ಲಿದ್ದ ಅವರು ಲಯ ಕಂಡುಕೊಳ್ಳಲು ಪರದಾಡಿದ್ದರು. ಆದ್ದರಿಂದಾಗಿ ಬಹಳಷ್ಟು ಟೀಕೆಗಳಿಗೂ ಒಳಗಾಗಿದ್ದರು. ಅವರನ್ನು ತಂಡವು ಕೈಬಿಟ್ಟಿತ್ತು. ಆದರೆ, ಹೋದ ಹರಾಜು ಪ್ರಕ್ರಿಯೆಯಲ್ಲಿ ಆರ್‌ಸಿಬಿಯು ಅವರನ್ನು ₹ 14.25 ಕೋಟಿಗೆ ಖರೀದಿಸಿತ್ತು.

‘ಗ್ಲೆನ್ ಸೇರ್ಪಡೆಯಿಂದಾಗಿ ತಂಡದ ಬಲ ಹೆಚ್ಚಾಗಿದೆ. ಅವರು ಫೀಲ್ಡಿಂಗ್ ಸಂಯೋಜನೆಯಲ್ಲಿಯೂ ವಿರಾಟ್‌ಗೆ ನೆರವಾಗುತ್ತಿದ್ದಾರೆ. ತಂಡದಲ್ಲಿರುವ ಯುವ ಆಟಗಾರರಿಗೆ ಕೌಶಲಗಳನ್ನು ಹೇಳಿಕೊಡುತ್ತ ಮಾರ್ಗದರ್ಶಕರಂತೆ ಕೆಲಸ ಮಾಡುತ್ತಿದ್ದಾರೆ. ಇದು ತಂಡದಲ್ಲಿ ಒಂದು ರೀತಿಯ ಉಲ್ಲಾಸವನ್ನು ಮೂಡಿಸಿದೆ‘ ಎಂದು ಹೇಳಿದರು.

ಕುರ್ಚಿ ಬೀಳಿಸಿದ ಕೊಹ್ಲಿಗೆ ವಾಗ್ದಂಡನೆ

ಚೆನ್ನೈ(ಪಿಟಿಐ): ಪಂದ್ಯದ ಸಂದರ್ಭದಲ್ಲಿ ಅತಿರೇಕದ ವರ್ತನೆ ತೋರಿದ್ದಕ್ಕಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ವಿರಾಟ್ ಕೊಹ್ಲಿಯವರಿಗೆ ರೆಫರಿ ಛೀಮಾರಿ ಹಾಕಿದ್ದಾರೆ.


ಇಂಡಿಯನ್ ಪ್ರೀಮಿಯರ್ ಲೀಗ್ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಬುಧವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಪಂದ್ಯ ನಡೆಯಿತು . ಅದರಲ್ಲಿ ಔಟ್ ಆಗಿ ಮರಳುವ ಸಂದರ್ಭದಲ್ಲಿ ವಿರಾಟ್, ಡಗೌಟ್‌ನಲ್ಲಿದ್ದ ಖಾಲಿ ಕುರ್ಚಿಗೆ ತಮ್ಮ ಕೈಯಲ್ಲಿದ್ದ ಬ್ಯಾಟ್‌ನಿಂದ ಹೊಡೆದಿದ್ದರು. ಅದಕ್ಕೂ ಮುನ್ನ ಬೌಂಡರಿ ಲೈನ್‌ನ ಹಗ್ಗಕ್ಕೂ ಬ್ಯಾಟ್ ಅಪ್ಪಳಿಸಿದ್ದರು

ಅವರ ಈ ನಡವಳಿಕೆಗೆ ಪಂದ್ಯ ರೆಫರಿ ನಾರಾಯಣನ್ ಕುಟ್ಟಿ ಅವರು ಛೀಮಾರಿ ಹಾಕಿದ್ದಾರೆ. ಮುಂದೆ ಈ ರೀತಿಯ ಅಶಿಸ್ತಿನ ವರ್ತನೆ ತೋರದಂತೆ ಎಚ್ಚರಿಕೆ ನೀಡಿದ್ದಾರೆ. ಐಸಿಸಿಯ ನೀತಿ ಸಂಹಿತೆಯ ಲೆವೆಲ್ 1 (2.2) ಉಲ್ಲಂಘನೆ ಇದಾಗಿದ್ದು ತಮ್ಮಿಂದ ಲೋಪವಾಗಿರುವುದನ್ನು ಕೊಹ್ಲಿ ಒಪ್ಪಿಕೊಂಡಿದ್ದಾರೆ ಎಂದು ಐಪಿಎಲ್ ಪ್ರಕಟಣೆಯಲ್ಲಿ ತಿಳಿಸಿದೆ. ಪಂದ್ಯದಲ್ಲಿ ಕೊಹ್ಲಿ 29 ಎಸೆತಗಳಲ್ಲಿ 33 ರನ್ ಗಳಿಸಿದ್ದರು.

ವಿರಾಟ್ ಕುರ್ಚಿ ಬೀಳಿಸಿದ ವಿಡಿಯೊ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಬಹಳಷ್ಟು ಜನರ ವಿರಾಟ್ ವರ್ತನೆಯನ್ನು ಟೀಕಿಸಿದ್ದರು.

ಷೇರುಪೇಟೆ ವಹಿವಾಟು

260



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,504
ಇಂದಿನ ಅಂತ್ಯ	14,581
▲	77
ದಿನದ ಗರಿಷ್ಠ	14,597

ವಿನಿಮಯ ದರ

$ ಡಾಲರ್	74.93
£ ಪೌಂಡ್	103.35
€ ಯುರೊ	89.77
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹56
ಮೈಸೂರು	
100 ಮೊಟ್ಟೆಗೆ	₹507

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1595)
ಸೋಯಾ (ರಿಫೈನ್ಡ್)	₹1365 (1347)
ಸೂರ್ಯಕಾಂತಿ (ರಿಫೈನ್ಡ್)	₹1690 (1670)
ಪಾಮೋಲಿನ್	₹1275 (1262)

ವಿಪ್ರೊ ಲಾಭ ₹ 2,972 ಕೋಟಿ

ನವದೆಹಲಿ (ಪಿಟಿಐ): ಐ.ಟಿ. ಉತ್ಪನ್ನ ಹಾಗೂ ಸೇವಾ ಕಂಪನಿ ವಿಪ್ರೊ ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ₹ 2,972 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇಕಡ 27.7ರಷ್ಟು ಹೆಚ್ಚಳ ಆಗಿದೆ.

ಈತ್ರೈಮಾಸಿಕದಲ್ಲಿಕಂಪನಿಯಆದಾಯದಲ್ಲಿ ಶೇ 3.4ರಷ್ಟು ಹೆಚ್ಚಳ ಆಗಿದೆ. 2020–21ನೆಯ ಹಣಕಾಸು ವರ್ಷದಲ್ಲಿ ಕಂಪನಿಯ ನಿವ್ವಳ ಲಾಭ ₹ 10,796 ಕೋಟಿ. 2019–20ನೆಯ ಸಾಲಿನಲ್ಲಿ ಕಂಪನಿಯು ಒಟ್ಟು ₹ 9,722 ಕೋಟಿ ಲಾಭ ಗಳಿಸಿತ್ತು. ಇದರಿಂದಾಗಿ ಹಣಕಾಸು ವರ್ಷದಲ್ಲಿ ಕಂಪನಿ ದಾಖಲಿಸಿದ ಲಾಭದಲ್ಲಿ ಶೇ 11ರಷ್ಟು ಏರಿಕೆ ಆದಂತಾಗಿದೆ. ‘ಹತ್ತು ವರ್ಷಗಳ ಅವಧಿಯಲ್ಲಿ ನಾಲ್ಕನೆಯ ತ್ರೈಮಾಸಿಕದಲ್ಲಿ ನಾವು ಘೋಷಿಸಿದ ಅತ್ಯುತ್ತಮ ಫಲಿತಾಂಶ ಇದು’ ಎಂದು ವಿಪ್ರೊ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಥಿಯರಿ ಡೆಲಾಪೋರ್ಟ್ ಹೇಳಿದ್ದಾರೆ.

ಕಂಪನಿಯ ಶೇಕಡ 80ರಷ್ಟು ನೌಕರರಿಗೆ ಅನ್ವಯವಾಗುವ ವೇತನ ಹೆಚ್ಚಳ, ಬಡ್ತಿ ಜನವರಿ 1ರಿಂದ ಜಾರಿಗೆ ಬಂದಿದೆ. ಹಿರಿಯ ಕಾರ್ಯನಿರ್ವಾಹಕ ಹುದ್ದೆಗಳಲ್ಲಿ ಇರುವವರ ವೇತನವನ್ನು ಜೂನ್‌ನಿಂದ ಹೆಚ್ಚಿಸಲಾಗುವುದು ಎಂದು ಡೆಲಾಪೋರ್ಟ್ ತಿಳಿಸಿದ್ದಾರೆ.



ಎಂಟು ವರ್ಷಗಳ ಗರಿಷ್ಠ ಮಟ್ಟಕ್ಕೆ ಸಗಟು ಹಣದುಬ್ಬರ

ನವದೆಹಲಿ (ಪಿಟಿಐ): ಸಗಟು ದರ ಆಧರಿಸಿದ ಹಣದುಬ್ಬರವು ಮಾರ್ಚ್‌ನಲ್ಲಿ ಶೇಕಡ 7.39ಕ್ಕೆ ಏರಿಕೆ ಆಗಿದೆ. ಇದು ಎಂಟು ವರ್ಷಗಳ ಗರಿಷ್ಠ ಮಟ್ಟವಾಗಿದೆ. ಈ ಹಿಂದೆ 2012ರ ಅಕ್ಟೋಬರ್ ತಿಂಗಳಿನಲ್ಲಿ ಸಗಟು ಹಣದುಬ್ಬರ ಶೇ 7.4ಕ್ಕೆ ತಲುಪಿತ್ತು.

ಕಚ್ಚಾ ತೈಲ ಮತ್ತು ಲೋಹ ದರ ಏರಿಕೆಯಿಂದಾಗಿ ಸಗಟು ಹಣದುಬ್ಬರ ಈ ಪ್ರಮಾಣದ ಏರಿಕೆ ಕಂಡಿದೆ. 2020ರ ಮಾರ್ಚ್‌ನಲ್ಲಿ ಸಗಟು ಹಣದುಬ್ಬರವು ಶೇ 0.42ರಷ್ಟಿತ್ತು. ಸಗಟು ದರ ಸೂಚ್ಯಂಕ (ಡಬ್ಲ್ಯುಪಿಐ) ಆಧರಿಸಿದ ಹಣದುಬ್ಬರವು ಸತತ ಮೂರನೇ ತಿಂಗಳಿನಲ್ಲಿಯೂ ಏರಿಕೆ ಕಂಡಂತಾಗಿದೆ.


ಬೇಳೆಕಾಳು, ಹಣ್ಣು ಮತ್ತು ಭತ್ತದ ದರ ಏರಿಕೆಯಿಂದಾಗಿ ಆಹಾರ ಉತ್ಪನ್ನಗಳ ಹಣದುಬ್ಬರ ಮಾರ್ಚ್‌ನಲ್ಲಿ ಶೇ 3.24ರಷ್ಟಾಗಿದೆ. ತರಕಾರಿ ದರ ಏರಿಕೆಯು ಫೆಬ್ರುವರಿ ತಿಂಗಳಲ್ಲಿ ಇದ್ದ ಶೇ (-) 2.90ಕ್ಕೆ ಹೋಲಿಸಿದರೆ ಮಾರ್ಚ್‌ನಲ್ಲಿ ಶೇ (-) 5.19ರಷ್ಟಾಗಿದೆ. ಬೇಳೆಕಾಳು ಹಣದುಬ್ಬರವು ಶೇ 13.14ರಷ್ಟಿದ್ದರೆ ಹಣ್ಣುಗಳ ಹಣದುಬ್ಬರವು ಶೇ 16.33ರಷ್ಟಿದೆ.

ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆಯಿಂದಾಗಿ ಇಂಧನ ಮತ್ತು ವಿದ್ಯುತ್ ದರ ಏರಿಕೆಯು ಶೇ 10.25ರಷ್ಟಾಗಿದೆ. ಇದು ಫೆಬ್ರುವರಿಯಲ್ಲಿ ಶೇ 0.58ರಷ್ಟಿತ್ತು.

ಕಚ್ಚಾ ತೈಲ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಲೋಹಗಳ ಬೆಲೆಯು 2020ರ ಮಾರ್ಚ್‌ಗೆ ಹೋಲಿಸಿದರೆ 2021ರ ಮಾರ್ಚ್‌ನಲ್ಲಿ ಏರಿಕೆ ಆಗಿದೆ. ರಾಷ್ಟ್ರವ್ಯಾಪಿ ಲಾಕ್‌ಡೌನ್‌ನಿಂದಾಗಿ 2020ರ ಮಾರ್ಚ್‌ನಲ್ಲಿ ಡಬ್ಲ್ಯುಪಿಐ ಸೂಚ್ಯಂಕವನ್ನು ತುಲನಾತ್ಮಕವಾಗಿ ಕಡಿಮೆ ಪ್ರತಿಕ್ರಿಯೆ ದರದೊಂದಿಗೆ ಲೆಕ್ಕಹಾಕಲಾಗಿದೆ ಎಂದು ವಾಣಿಜ್ಯ ಸಚಿವಾಲಯವು ಹೇಳಿದೆ.

ಕೋವಿಡ್–19 ಸಾಂಕ್ರಾಮಿಕ ನಿಯಂತ್ರಿಸಲು ಲಸಿಕೆ ನೀಡುವ ಕಾರ್ಯಕ್ರಮ ಜಾರಿಯಾಗುತ್ತಿದ್ದಂತೆಯೇ ಜಾಗತಿಕವಾಗಿ ಲೋಹ, ಜವಳಿ, ರಾಸಾಯನಿಕ ಮತ್ತು ರಬ್ಬರ್ ಸೇರಿದಂತೆ ಇನ್ನಿತರ ವಸ್ತುಗಳ ಬೆಲೆ ಗಣನೀಯ ಏರಿಕೆ ಕಾಣುತ್ತಿವೆ. ಈ ಕಾರಣಕ್ಕಾಗಿ ಡಬ್ಲ್ಯುಪಿಐ ಹಣದುಬ್ಬರ ತಿಂಗಳಿನಿಂದ ತಿಂಗಳಿಗೆ ಹೆಚ್ಚಾಗುತ್ತಲೇ ಇದೆ ಎಂದು ಐಸಿಆರ್‌ಎನ ಮುಖ್ಯ ಆರ್ಥಿಕ ತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

‘ಸದ್ಯದ ಪರಿಸ್ಥಿತಿಯಲ್ಲಿ ದೇಶದ ಆರ್ಥಿಕತೆಗೆ ವಿತ್ತೀಯ ಮತ್ತು ಹಣಕಾಸಿನ ಬೆಂಬಲಗಳೆರಡರ ಅಗತ್ಯವೂ ಇದೆ. 2021–22ರ ಬಹುಪಾಲು ಅವಧಿಯವರೆಗೆ ಬಡ್ಡಿದರಗಳು ಈಗಿರುವಂತೆಯೇ ಕನಿಷ್ಠ ಮಟ್ಟದಲ್ಲಿಯೇ ಇರಬೇಕು ಹಾಗೂ ಸಾಕಷ್ಟು ನಗದು ಲಭ್ಯವಿರಬೇಕು ಎಂಬುದು ನಮ್ಮ ನಿರೀಕ್ಷೆ’ ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್‌ನ ಮುಖ್ಯ ಆರ್ಥಿಕ ತಜ್ಞ ದೇವೇಂದ್ರ ಕುಮಾರ್ ಪಂತ್ ಅಭಿಪ್ರಾಯಪಟ್ಟಿದ್ದಾರೆ. ಈಚೆಗೆ ಸರ್ಕಾರ ನೀಡಿರುವ ಮಾಹಿತಿಯ ಪ್ರಕಾರ ಚಿಲ್ಲರೆ ಹಣದುಬ್ಬರವು ಮಾರ್ಚ್‌ನಲ್ಲಿ ಶೇ 5.52ರಷ್ಟಾಗಿದ್ದು ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.



ಗ್ರಾಹಕ ಬ್ಯಾಂಕಿಂಗ್ ಸೇವೆ ಸ್ಥಗಿತಕ್ಕೆ ಸಿಟಿಬ್ಯಾಂಕ್ ನಿರ್ಧಾರ

ಮುಂಬೈ (ಪಿಟಿಐ): ಅಮೆರಿಕದ ಬ್ಯಾಂಕಿಂಗ್ ಕಂಪನಿಯಾದ ‘ಸಿಟಿಬ್ಯಾಂಕ್’ ಭಾರತದಲ್ಲಿ ಗ್ರಾಹಕ ಬ್ಯಾಂಕಿಂಗ್ ಸೇವೆಗಳನ್ನು ಸ್ಥಗಿತಗೊಳಿಸುತ್ತಿರುವುದಾಗಿ ಗುರುವಾರ ಪ್ರಕಟಿಸಿದೆ. ಸಿಟಿ ಬ್ಯಾಂಕ್ ಭಾರತದಲ್ಲಿ ಕ್ರೆಡಿಟ್ ಕಾರ್ಡ್, ಗೃಹ ಸಾಲ, ಸಂಪತ್ತು ನಿರ್ವಹಣೆ ಸೇವೆಗಳನ್ನು ನೀಡುತ್ತಿದೆ.

ದೇಶದಲ್ಲಿ ಸಿಟಿ ಬ್ಯಾಂಕ್ ಒಟ್ಟು 35 ಶಾಖೆಗಳನ್ನು ಹೊಂದಿದೆ. ಸರಿಸುಮಾರು ನಾಲ್ಕು ಸಾವಿರ ನೌಕರರು ಸಂಸ್ಥೆಯ ಗ್ರಾಹಕ ಬ್ಯಾಂಕಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ.

ಗ್ರಾಹಕ ಬ್ಯಾಂಕಿಂಗ್ ಸೇವೆಗಳನ್ನು ಒಟ್ಟು 13 ದೇಶಗಳಲ್ಲಿ ಸ್ಥಗಿತಗೊಳಿಸುವ ತೀರ್ಮಾನವನ್ನು ಸಿಟಿಬ್ಯಾಂಕ್ ಕಂಪನಿ ಗುರುವಾರ ಪ್ರಕಟಿಸಿತು. ‘ಈ ದೇಶಗಳಲ್ಲಿ ನಾವು ಇತರರಿಗೆ ಸ್ಪರ್ಧೆ ನೀಡಲು ಅಗತ್ಯವಿರುವಷ್ಟು ಬೃಹತ್ ಆಗಿ ಬೆಳೆದಿಲ್ಲ’ ಎಂಬ ಕಾರಣಕ್ಕೆ ಸೇವೆಗಳನ್ನು ಸ್ಥಗಿತಗೊಳಿಸಲಾಗುತ್ತಿದೆ ಎಂದು ಸಿಟಿಬ್ಯಾಂಕ್‌ನ ಜಾಗತಿಕ ವಹಿವಾಟುಗಳ ಸಿಇಒ ಜೇನ್ ಫ್ರೇಸರ್ ಹೇಳಿದ್ದಾರೆ.

ಸಿಟಿಬ್ಯಾಂಕ್ ತನ್ನ ಸೇವೆಗಳನ್ನು ಸ್ಥಗಿತಗೊಳಿಸಲು ಕಾನೂನು ಜಾರಿ ಸಂಸ್ಥೆಗಳ ಅನುಮೋದನೆ ಅಗತ್ಯ. ‘ನಮ್ಮ ಚಟುವಟಿಕೆಗಳಲ್ಲಿ ತಕ್ಷಣಕ್ಕೆ ಯಾವುದೇ ಬದಲಾವಣೆ ಇಲ್ಲ. ಈಗ ಮಾಡಿರುವ ಘೋಷಣೆಯಿಂದಾಗಿ ಉದ್ಯೋಗಿಗಳ ಮೇಲೆ ತಕ್ಷಣಕ್ಕೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ. ನಾವು ಸದ್ಯಕ್ಕೆ ನಮ್ಮ ಗ್ರಾಹಕರಿಗೆ ಸೇವೆ ಒದಗಿಸುವುದನ್ನು ಮುಂದುವರಿಸುತ್ತೇವೆ’ ಎಂದು ಸಿಟಿ ಇಂಡಿಯಾದ ಮುಖ್ಯ ಕಾರ್ಯನಿರ್ವಾಹಕ ಅಶು ಖುಲ್ಲರ್ ಹೇಳಿದ್ದಾರೆ.

ಸಿಟಿ ಬ್ಯಾಂಕ್ 1985ರಿಂದ ಭಾರತದಲ್ಲಿ ಗ್ರಾಹಕ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುತ್ತಿದೆ. ಮುಂಬೈ, ಪುಣೆ, ಬೆಂಗಳೂರು, ಚೆನ್ನೈ ಮತ್ತು ಗುರುಗ್ರಾಮದಲ್ಲಿ ಇರುವ ತನ್ನ ಕೇಂದ್ರಗಳಿಂದ ಜಾಗತಿಕ ವಾಣಿಜ್ಯ ವಹಿವಾಟುಗಳಿಗೆ ಬೆಂಬಲ ನೀಡುವ ಕೆಲಸವನ್ನು ಕಂಪನಿ ಮುಂದುವರಿಸಲಿದೆ.



ಪೆಟ್ರೋಲ್, ಡೀಸೆಲ್ ದರ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಗುರುವಾರ ಇಂಧನ ದರ ಇಳಿಕೆ ಮಾಡಿವೆ. ಇದರಿಂದಾಗಿ ಮೂರು ವಾರಗಳಲ್ಲಿ ನಾಲ್ಕನೇ ಬಾರಿ ದರ ಇಳಿಕೆ ಮಾಡಿದಂತಾಗಿದೆ.

ಬೆಂಗಳೂರಿನಲ್ಲಿ ಪೆಟ್ರೋಲ್ ದರ ಪ್ರತಿ ಲೀಟರಿಗೆ 16 ಪೈಸೆ ಮತ್ತು ಡೀಸೆಲ್ ದರ 15 ಪೈಸೆ ಇಳಿಕೆ ಆಗಿದ್ದು, ಕ್ರಮವಾಗಿ ₹ 93.43 ಮತ್ತು ₹ 85.60ರಂತೆ ಮಾರಾಟವಾಗಿವೆ. ದೆಹಲಿಯಲ್ಲಿ ಪೆಟ್ರೋಲ್ ದರ 16 ಪೈಸೆ ಕಡಿಮೆಯಾಗಿ ₹ 90.40ಕ್ಕೆ ಹಾಗೂ ಡೀಸೆಲ್ ದರ 14 ಪೈಸೆ ಕಡಿಮೆಯಾಗಿ ₹ 80.73ಕ್ಕೆ ತಲುಪಿದೆ.

ಬ್ಯಾಂಕ್ ಖಾಸಗೀಕರಣ: ಹೆಸರು ಅಂತಿಮಗೊಳಿಸಲಿರುವ ನೀತಿ ಆಯೋಗ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಖಾಸಗಿಯವರಿಗೆ ಮಾರಾಟ ಆಗಲಿರುವ ಎರಡು ರಾಷ್ಟ್ರೀಕೃತ ಬ್ಯಾಂಕ್‌ಗಳ ಹೆಸರು ಅಂತಿಮಗೊಳಿಸುವುದಕ್ಕೆ ಸಂಬಂಧಿಸಿದ ಮಾತುಕತೆಗಳನ್ನು ನೀತಿ ಆಯೋಗ ಆರಂಭಿಸಿದೆ.

ಆಯೋಗವು ಕೇಂದ್ರ ಹಣಕಾಸು ಸಚಿವಾಲಯದ ಜೊತೆ ಸಮಾಲೋಚನೆ ನಡೆಸಿ ಎರಡು ಬ್ಯಾಂಕ್‌ಗಳ ಹೆಸರು ಅಂತಿಮಗೊಳಿಸಲಿದೆ. ಈ ವಿಚಾರವಾಗಿ ಎರಡು ಸಭೆಗಳನ್ನು ಕರೆದಿದೆ ಎಂದು ಮೂಲಗಳು ತಿಳಿಸಿವೆ.

ಆಯೋಗವು ಹೆಸರುಗಳನ್ನು ಶಿಫಾರಸು ಮಾಡಿದ ನಂತರ, ಸಂಪುಟ ಕಾರ್ಯದರ್ಶಿ ನೇತೃತ್ವದ ಸಮಿತಿಯು ಅದನ್ನು ಪರಿಶೀಲಿಸಲಿದೆ. ಅಂತಿಮ ತೀರ್ಮಾನವನ್ನು ಪ್ರಧಾನಿ ನೇತೃತ್ವದ ಸಚಿವ ಸಂಪುಟ ತೆಗೆದುಕೊಳ್ಳಲಿದೆ.ಸಂಪುಟದ ಅನುಮೋದನೆ ಸಿಕ್ಕ ನಂತರ, ಖಾಸಗಿಯವರಿಗೆ ಮಾರಾಟ ಮಾಡಲು ಅಗತ್ಯವಿರುವ ಕಾನೂನು ರೂಪಿಸುವ ಕೆಲಸಗಳು ಆರಂಭವಾಗಲಿವೆ.

ಬ್ಯಾಂಕ್, ಹಣಕಾಸು ಷೇರು ಖರೀದಿ; ಸೆನ್ಸೆಕ್ಸ್ ಏರಿಕೆ

ಮುಂಬೈ (ಪಿಟಿಐ): ಹೂಡಿಕೆದಾರರು ಬ್ಯಾಂಕಿಂಗ್, ಹಣಕಾಸು ಮತ್ತು ಐ.ಟಿ. ವಲಯದ ಷೇರುಗಳ ಖರೀದಿಗೆ ಹೆಚ್ಚಿನ ಗಮನ ನೀಡಿದ ಪರಿಣಾಮವಾಗಿ ಗುರುವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಏರಿಕೆ ಕಂಡವು. ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಚೇತರಿಕೆ ಕಂಡಿದ್ದು ಹಾಗೂ ಜಾಗತಿಕ ಮಟ್ಟದಲ್ಲಿ ಸಕಾರಾತ್ಮಕ ವಹಿವಾಟು ನಡೆದಿದ್ದು ಕೂಡ ಸೂಚ್ಯಂಕಗಳ ಏರಿಕೆಗೆ ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವಾದ ಸೆನ್ಸೆಕ್ಸ್ 259 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕವಾದ ನಿಫ್ಟಿ 76 ಅಂಶ ಏರಿಕೆ ಕಂಡವು.

ಟಿಸಿಎಸ್ ಕಂಪನಿಯ ಷೇರುಗಳು ಅತ್ಯಂತ ಹೆಚ್ಚಿನ ಗಳಿಕೆ (ಶೇ 3.67ರಷ್ಟು) ಕಂಡವು. ಒಎನ್‌ಜಿಸಿ, ಐಸಿಐಸಿಐ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಡಾ ರೆಡ್ಡೀಸ್, ಎಚ್‌ಡಿಎಫ್‌ಸಿ, ಎಕ್ಸಿಸ್ ಬ್ಯಾಂಕ್ ಮತ್ತು ಎಚ್‌ಸಿಎಲ್ ಟೆಕ್ ಕಂಪನಿಯ ಷೇರುಗಳು ಹೆಚ್ಚಿನ ಏರಿಕೆ ಕಂಡವು.

ಬುಧವಾರವಷ್ಟೇ ತ್ರೈಮಾಸಿಕ ಫಲಿತಾಂಶ ಘೋಷಿಸಿದ ಇನ್ಫೊಸಿಸ್ ಕಂಪನಿಯ ಷೇರು ಮೌಲ್ಯ ಶೇ 2.65ರಷ್ಟು ಇಳಿಕೆ ಕಂಡಿತು. ಕಂಪನಿಯ ಫಲಿತಾಂಶವು ಮಾರುಕಟ್ಟೆಯ ನಿರೀಕ್ಷೆಗೆ ತಕ್ಕಂತೆ ಇಲ್ಲದಿದ್ದುದು ಇಳಿಕೆಗೆ ಕಾರಣ ಎನ್ನಲಾಗಿದೆ. ಇಂಡಸ್‌ಇಂಡ್ ಬ್ಯಾಂಕ್, ಮಾರುತಿ, ನೆಸ್ಲೆ ಇಂಡಿಯಾ, ಬಜಾಜ್ ಫೈನಾನ್ಸ್ ಮತ್ತು ಅಲ್ಟ್ರಾ ಟೆಕ್ ಸಿಮೆಂಟ್ ಕಂಪನಿಯ ಷೇರುಗಳು ಇಳಿಕೆ ಕಂಡವು.

ಅಮೆರಿಕದ ಡಾಲರ್ ಎದುರು ತುಸು ಚೇತರಿಕೆ ದಾಖಲಿಸಿದ ರೂಪಾಯಿ, 12 ಪೈಸೆಯಷ್ಟು ಮೌಲ್ಯ ಹೆಚ್ಚಿಸಿಕೊಂಡಿತು.

ಅಫ್ಗನ್‌ನಿಂದ ಅಮೆರಿಕದ ಪಡೆಗಳು ನಿರ್ಗಮನ: ಭಾರತಕ್ಕೆ ಕಳವಳ

ವಾಷಿಂಗ್ಟನ್ (ಪಿಟಿಐ): ಅಫ್ಗಾನಿಸ್ತಾನದಲ್ಲಿರುವ ತನ್ನ ಎಲ್ಲಾ ಸೇನಾಪಡೆಗಳನ್ನು ಸೆಪ್ಟೆಂಬರ್ 11ರೊಳಗೆ ಹಿಂದಕ್ಕೆ ಕರೆಸಿಕೊಳ್ಳಲು ಅಮೆರಿಕ ಹಾಗೂ ನ್ಯಾಟೊ ನಿರ್ಧರಿಸಿವೆ. ಇದರಿಂದ ತಾಲಿಬಾನ್‌ನ ಬಲ ವೃದ್ಧಿಗೊಂಡು ಭಯೋತ್ಪಾದನೆ ಕೃತ್ಯಗಳು ಹೆಚ್ಚಬಹುದು ಎಂಬ ಕಳವಳವನ್ನು ತಜ್ಞರು ವ್ಯಕ್ತಪಡಿಸಿದ್ದಾರೆ.

ಇದೇ ವರ್ಷ ಸೆಪ್ಟೆಂಬರ್ 11ರ ವೇಳೆಗೆ ಅಮೆರಿಕದ ಎಲ್ಲ ಪಡೆಗಳನ್ನು ಅಫ್ಗಾನಿಸ್ತಾನದಿಂದ ಹಿಂದಕ್ಕೆ ಕರೆಸಿಕೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಬುಧವಾರ ಘೋಷಿಸಿದ್ದಾರೆ. ದೇಶದ ಸುದೀರ್ಘ ಯುದ್ಧವೊಂದು ಕೊನೆಯಾಗಲಿದೆ ಎಂದಿದ್ದಾರೆ.

'ಅಫ್ಗಾನಿಸ್ತಾನದಿಂದ ಅಮೆರಿಕ ತನ್ನ ಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳುತ್ತಿರುವುದು ಹಾಗೂ ದೇಶದಲ್ಲಿ ತಾಲಿಬಾಲ್ ಮತ್ತೆ ವ್ಯಾಪಿಸುವ ಸಾಧ್ಯತೆಯ ಬಗ್ಗೆ ನೆರೆಯ ರಾಷ್ಟ್ರಗಳು, ಅದರಲ್ಲೂ ಭಾರತಕ್ಕೆ ಕಳವಳವನ್ನು ಉಂಟು ಮಾಡಲಿದೆ' ಎಂದು ತಜ್ಞರಾದ ಲಿಸಾ ಕರ್ಟಿಸ್ ಹೇಳಿದ್ದಾರೆ. ಅವರು ಡೊನಾಲ್ಡ್ ಟ್ರಂಪ್ ಆಡಳಿತದಲ್ಲಿ ಅಧ್ಯಕ್ಷರ ಡೆಪ್ಯೂಟಿ ಅಸಿಸ್ಟೆಂಟ್ ಹಾಗೂ ದಕ್ಷಿಣ ಮತ್ತು ಮಧ್ಯ ಏಷ್ಯಾದ ಎನ್‌ಎಸ್‌ಸಿ ಹಿರಿಯ ನಿರ್ದೇಶಕಿಯಾಗಿ (2017–2021) ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಸೆಂಟರ್ ಫಾರ್ ಎ ನ್ಯೂ ಅಮೆರಿಕನ್ ಸೆಕ್ಯುರಿಟಿಯಲ್ಲಿ ಸೀನಿಯರ್ ಫೆಲೊ ಮತ್ತು ಇಂಡೊ–ಪೆಸಿಫಿಕ್ ಭದ್ರತಾ ಕಾರ್ಯಕ್ರಮದ ನಿರ್ದೇಶಕಿಯಾಗಿದ್ದಾರೆ.

'1990ರ ದಶಕದಲ್ಲಿ ತಾಲಿಬಾನ್ ನಿಯಂತ್ರಿತ ಅಫ್ಗಾನಿಸ್ತಾನವು ಎಲ್ಲ ಪ್ರದೇಶಗಳ ಭಯೋತ್ಪಾದಕರು ಹಾಗೂ ಉಗ್ರಗಾಮಿಗಳಿಗೆ ಆಹ್ವಾನ ನೀಡಿತ್ತು. ಉಗ್ರರ ತರಬೇತಿ, ನೇಮಕಾತಿ ಹಾಗೂ ಹಣ ಸಂಗ್ರಹದ ಕಾರ್ಯಗಳನ್ನು ಅಫ್ಗಾನಿಸ್ತಾನದಿಂದ ನಡೆಸಲಾಗುತ್ತಿತ್ತು. ಲಷ್ಕರ್–ಎ–ತೈಬಾ ಹಾಗೂ ಜೈಷ್–ಎ–ಮೊಹಮ್ಮದ್ ಸಂಘಟನೆಗಳ ಸದಸ್ಯರೂ ಸೇರಿದಂತೆ ಹಲವು ಉಗ್ರರು ಭಾರತದಲ್ಲಿ ಕಾರ್ಯಾಚರಣೆಗಾಗಿ ತರಬೇತಿ ಪಡೆದಿದ್ದರು. 2001ರಲ್ಲಿ ಭಾರತದ ಸಂಸತ್ತಿನ ಮೇಲಿನ ದಾಳಿ ಸೇರಿದಂತೆ ಹಲವು ವಿಧ್ವಂಸಕ ಕೃತ್ಯಗಳನ್ನು ನಡೆಸಿದ್ದಾರೆ' ಎಂದು ಕರ್ಟಿಸ್ ಹೇಳಿದ್ದಾರೆ.

2020ರ ಫೆಬ್ರುವರಿ 29ರಂದು ದೋಹಾದಲ್ಲಿ ಅಮೆರಿಕ ಮತ್ತು ತಾಲಿಬಾನ್ ಒಪ್ಪಂದಕ್ಕೆ ಸಹಿ ಹಾಕಿದ್ದು, 14 ತಿಂಗಳಲ್ಲಿ ಅಫ್ಗಾನಿಸ್ತಾನದಿಂದ ಅಮೆರಿಕದ ಎಲ್ಲ ಯೋಧರನ್ನು ಕರೆಸಿಕೊಳ್ಳಲು ಒಪ್ಪಿಗೆ ಸೂಚಿಸಲಾಗಿದೆ. 2001 ಸೆಪ್ಟೆಂಬರ್ 11ರ ದಾಳಿಯ ಬಳಿಕ ಅಮೆರಿಕವು ಅಫ್ಗಾನಿಸ್ತಾನದಲ್ಲಿ ಹೋರಾಟ ಹಾಗೂ ಪುನರ್‌ಸ್ಥಾಪನೆ ಕಾರ್ಯಗಳಿಗೆ ಒಂದು ಲಕ್ಷ ಕೋಟಿ ಡಾಲರ್‌ಗೂ ಹೆಚ್ಚು ವ್ಯಯಿಸಿದೆ.

ದೀರ್ಘ ಹೋರಾಟಗಳಲ್ಲಿ ಸುಮಾರು 2,400 ಅಮೆರಿಕದ ಯೋಧರು ಮೃತಪಟ್ಟಿದ್ದಾರೆ. ಸಾವಿರಾರು ಮಂದಿ ಅಫ್ಗನ್ ಸೇನೆಯ ಸಿಬ್ಬಂದಿ, ಅಫ್ಗನ್ ನಾಗರಿಕರು ಹಾಗೂ ತಾಲಿಬಾನ್ ಬಂಡುಕೋರರು ಹತರಾಗಿದ್ದಾರೆ.

ಮುಂಬೈ ಧಾರಣೆ

ಶೇಂಗಾ

15-4-2021

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	10000-11100
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1605)
ಒಂದು ವಾರದ ಡೆಲಿವರಿ	1605 (1600)
ಸೋಯಾ ಕಚ್ಚಾ	1350 (1322)
ಪಾಮ್ ವಾರದ ಡೆಲಿವರಿ	1275 (1260)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1630)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,750 (46,500)
ಬೆಳ್ಳಿ ಕೆ.ಜಿ 68,450 (67,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	375
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41000
ಹಳತು	42500-50500
ಚಿತ್ರದುರ್ಗ	
ಅಪಿ	42229-42669
ಬೆಟ್ಟೆ	33419-33899
ಕೆಂಪುಗೋಟು	29409-29810
ರಾಶಿ	41739-42189
ಕುಮಟ	
ಚಿಪ್ಪು	25899-31869
ಕೋಕ	17099-28690
ಹಳೆಚಾಲಿ	35199-42299
ಹೊಸಚಾಲಿ	35199-37149
ಸಿದ್ದಾಪುರ	
ಬಿಳಿಗೋಟು	24699-31099
ಚಾಲಿ	34269-36599
ಕೋಕ	18299-30699
ಕೆಂಪುಗೋಟು	23180-30509
ರಾಶಿ	38499-41099
ತಟ್ಟಿಬೆಟ್ಟೆ	29609-39989
ಯಲ್ಲಾಪುರ	
ಬಿಳಿಗೋಟು	26899-30580
ಚಾಲಿ	31499-39011
ಕೋಕ	18899-29499
ಕೆಂಪುಗೋಟು	26899-32899
ರಾಶಿ	39869-43998
ತಟ್ಟಿಬೆಟ್ಟೆ	33900-38880
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	42000-43200
ಗೊರಬಲು	17009-31510
ರಾಶಿ	37029-42500
ಸರಕು	47100-73496

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10000	10000	10000	132.10 ಸೆಂಟ್ಸ್
ಎಸಿ	3975	3900	3900	
ಆರ್‌ಪಿ	5100	5100	5150	
ಆರ್‌ಸಿ	2900	2900	2900	1365 ಡಾಲರ್ಸ್

ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್: ಕಂಚು ಗಳಿಸಿದ ಸೀಮಾ ಬಿಸ್ಲಾ, ಪೂಜಾ

ಸರಿತಾ ಮೋರ್‌ಗೆ ಚಿನ್ನದ ಪದಕ

ಅಲ್ಮಾಟಿ (ಪಿಟಿಐ): ಸೋಲಿನ ಸುಳಿಯಿಂದ ಮೇಲೆದ್ದು ಸತತ ಒಂಬತ್ತು ಪಾಯಿಂಟ್‌ಗಳನ್ನು ಕಲೆ ಹಾಕಿದ ಸರಿತಾ ಮೋರ್ ಅವರು ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ 59 ಕೆಜಿ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಗುರುವಾರ ಇಲ್ಲಿ ನಡೆದ ಚಾಂಪಿಯನ್‌ಷಿಪ್‌ನ 50 ಕೆಜಿ ವಿಭಾಗದಲ್ಲಿ ಸೀಮಾ ಬಿಸ್ಲಾ ಮತ್ತು 76 ಕೆಜಿ ವಿಭಾಗದಲ್ಲಿ ಪೂಜಾ ಕಂಚಿನ ಪದಕ ಗಳಿಸಿದರು.

ಕಳೆದ ವರ್ಷ ನವದೆಹಲಿಯಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದ ಸರಿತಾ ಮಂಗೋಲಿಯಾದ ಶೂವಡೊರ್ ಬಾಟರ್ಜವ್ ಎದುರಿನ ಫೈನಲ್ ಹಣಾಹಣಿಯಲ್ಲಿ 1–7ರ ಹಿನ್ನಡೆ ಅನುಭವಿಸಿದ್ದರು. ನಂತರ ಚೇತರಿಸಿಕೊಂಡು ಪ್ರಶಸ್ತಿ ಗೆದ್ದರು. 1–3ರ ಹಿನ್ನಡೆಯಲ್ಲಿದ್ದಾಗ ನಿಯಂತ್ರಣ ಕಳೆದುಕೊಂಡ ಸರಿತಾ ಎದುರಾಳಿಗೆ ಒಂದು ಪಾಯಿಂಟ್ ಬಿಟ್ಟುಕೊಟ್ಟರು. ಆದರೆ ಮಂಗೋಲಿಯಾದ ಕೋಚ್



ಸರಿತಾ ಮೋರ್ –ಟ್ವಿಟರ್ ಚಿತ್ರ

ತೀರ್ಪು ಮರುಪರಿಶೀಲನೆಗೆ ಮನವಿ ಸಲ್ಲಿಸಿದರು. ಇದರಿಂದ ಶೂವಡೊರ್‌ಗೆ ನಾಲ್ಕು ಪಾಯಿಂಟ್‌ಗಳು ಲಭಿಸಿದವು.

ನಂತರ ಸರಿತಾ ಅವರನ್ನು ನಿಯಂತ್ರಿಸಲು ಶೂವಡೊರ್‌ಗೆ ಸಾಧ್ಯವಾಗ‌ಲಿಲ್ಲ. 7–7ರ ಸಮಬಲ ಸಾಧಿಸಿದ್ದ ಸಂದರ್ಭದಲ್ಲಿ ತೀರ್ಪು ಮರುಪರಿಶೀಲನೆ ಮಾಡಿದ ಮಂಗೋಲಿಯಾ ಒಂದು ಅವಕಾಶವನ್ನು ಕಳೆದುಕೊಂಡಿದ್ದು ಮಾತ್ರವಲ್ಲ, ಸರಿತಾಗೆ ಹೆಚ್ಚುವರಿ ಪಾಯಿಂಟ್ ಕೂಡ ಕಾಣಿಕೆಯಾಗಿ ನೀಡಿತು. ಹೀಗಾಗಿ ಭಾರತದ ಮುನ್ನಡೆ 10–7ಕ್ಕೆ ಏರಿತು. ಮೊದಲ ಬೌಟ್‌ನಲ್ಲಿ ಮಂಗೋಲಿ ಯಾದ ಎದುರಾಳಿಗೆ 4–5ರಲ್ಲಿ ಮಣಿದಿದ್ದ ಸರಿತಾ ನಂತರ ಕಜಕಸ್ತಾನದ ಡಯಾನಾ ಕಯುಮೊವಾ ಎದುರು ಗೆಲುವು ಸಾಧಿಸಿದ್ದರು.

ಸೀಮಾ ಮೊದಲ ಸುತ್ತಿನಲ್ಲಿ ಕಜಕಸ್ತಾನದ ವ್ಯಾಲೆಂಟೀನಾ ಇವನೊವಾನಗೆ ಮಣಿದರು.

ಆದರೆ ಮುಂದಿನ ಸುತ್ತಿನಲ್ಲಿ ಮಂಗೋಲಿಯಾದ ಅನು ದಾರಿ ನಂದಿನ್ವೆಸ್ಟೆಗ್ ವಿರುದ್ಧ ಜಯ ಸಾಧಿಸಿದರು. ಸೆಮಿಫೈನಲ್‌ನಲ್ಲಿ ಉಜ್ಬೆಕಿಸ್ತಾನದ ಜಾಸ್ಮಿನಾ ಇಮಾವೆವಾಗೆ 2–3ರಲ್ಲಿ ಮಣಿದರು.

ಪೂಜಾ ಮೊದಲ ಬೌಟ್‌ನಲ್ಲಿ ಕೊರಿಯಾದ ಸಿಯೊಯೆನ್ ಜೊಂಗ್‌ಗೆ 2–0 ಅಂತರದಲ್ಲಿ ಸೋಲುಣಿಸಿದರು. ಸೆಮಿಫೈನಲ್‌ನಲ್ಲಿ ಕಜಕಸ್ತಾನದ ಎಲ್ಮಿರಾ ಸಿಡಿಕೊವಾ ಎದುರು ಸೋತರು. 68 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ನಿಶಾ ಆರಂಭದ ಎರಡು ಸುತ್ತಿನಲ್ಲೂ ಸೋತು ಹೊರಬಿದ್ದರು.

ಶ್ರೀಹರಿಗೆ ಚಿನ್ನ

ತಾಷ್ಕೆಂಟ್ (ಪಿಟಿಐ): ಕರ್ನಾಟಕದ ಶ್ರೀಹರಿ ನಟರಾಜ್ ಅವರು ಉಜ್ಬೆಕಿಸ್ತಾನ್ ಓಪನ್ ಈಜು ಚಾಂಪಿಯನ್‌ಷಿಪ್‌ನ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಚಿನ್ನ ಗಳಿಸಿದರು. ಆದರೆ ಒಲಿಂಪಿಕ್ಸ್‌ಗೆ 'ಎ' ದರ್ಜೆಯಲ್ಲಿ ಅರ್ಹತೆ ಪಡೆಯಲು ವಿಫಲರಾದರು. ಒಲಿಂಪಿಕ್ಸ್‌ಗೆ 'ಬಿ' ದರ್ಜೆಯಲ್ಲಿ ಕಳೆದ ವರ್ಷವೇ ಶ್ರೀಹರಿ ಅರ್ಹತೆ ಗಳಿಸಿದ್ದರು. ಗುರುವಾರ ನಡೆದ ಸ್ಪರ್ಧೆಯಲ್ಲಿ 54.10 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅವರು ವೈಯಕ್ತಿಕ ಗರಿಷ್ಠ ಸಾಧನೆ ಮಾಡಿದರು. ಮಹಿಳೆಯರ 100 ಮೀ ಬ್ಯಾಕ್‌ಸ್ಟ್ರೋಕ್‌ನಲ್ಲಿ ಮಾನಾ ಪಟೇಲ್ ಚಿನ್ನ ಗಳಿಸಿದರು. ಸುವನಾ ಭಾಸ್ಕರ್ ಬೆಳ್ಳಿ ಗೆದ್ದುಕೊಂಡರು.

ಕೇಂದ್ರೀಯ ಗುತ್ತಿಗೆ: ಹಾರ್ದಿಕ್ ಪಾಂಡ್ಯಗೆ ಬಡ್ತಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಮತ್ತು ಮಧ್ಯಮವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕೇಂದ್ರೀಯ ಗುತ್ತಿಗೆಯ ಎ ಪ್ಲಸ್ ಗ್ರೇಡ್ ಉಳಿಸಿಕೊಂಡಿದ್ದಾರೆ.

ಈ ಮೂವರು ಆಟಗಾರರೂ ತಲಾ ₹ 7 ಕೋಟಿ ಮೌಲ್ಯ ಪಡೆಯಲಿದ್ದಾರೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಬಿ ಗುಂಪಿನಿಂದ ಎ ಗ್ರೇಡ್‌ಗೆ ಬಡ್ತಿ ಪಡೆದಿದ್ದಾರೆ.

ಈ ವರ್ಷ ಅವರು ಗಾಯದ ಸಮಸ್ಯೆಯಿಂದ ಹೆಚ್ಚು ಪಂದ್ಯ ಗಳಲ್ಲಿ ಆಡಿರಲಿಲ್ಲ. ಗುರುವಾರ ಪ್ರಕಟಿಸಿರುವ ಗುತ್ತಿಗೆ ಪಟ್ಟಿಯಲ್ಲಿ ಒಟ್ಟು 28 ಆಟಗಾರರು ಸ್ಥಾನ ಪಡೆದಿದ್ದಾರೆ. ಅದರಲ್ಲಿ ಯುವ ಬ್ಯಾಟ್ಸ್‌ಮನ್ ಶುಭಮನ್ ಗಿಲ್ ಮತ್ತು ಮಧ್ಯಮವೇಗಿ ಮೊಹಮ್ಮದ್ ಸಿರಾಜ್ ಅವರು ಇದೇ ಮೊದಲ ಸಲ ಸ್ಥಾನ ಪಡೆದುಕೊಂಡಿದ್ದಾರೆ. ಕನ್ನಡಿಗ ಕೆ.ಎಲ್. ರಾಹುಲ್ ಎ ಗ್ರೇಡ್ ಮತ್ತು ಮಯಂಕ್ ಅಗರವಾಲ್ ಬಿ ಗ್ರೇಡ್‌ನಲ್ಲಿದ್ದಾರೆ. ಇವರಿಬ್ಬರೂ ಕ್ರಮವಾಗಿ ಐದು ಮತ್ತು ಮೂರು ಕೋಟಿ ಪಡೆಯುವರು.

ಗ್ರೇಡ್‌ಗಳು: ಎ ಪ್ಲಸ್ (₹ 7 ಕೋಟಿ): ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಜಸ್‌ಪ್ರೀತ್ ಬೂಮ್ರಾ. ಎ (₹ 5 ಕೋಟಿ): ಆರ್. ಅಶ್ವಿನ್, ರವೀಂದ್ರ ಜಡೇಜ, ಚೇತೇಶ್ವರ್ ಪೂಜಾರ, ಅಜಿಂಕ್ಯ ರಹಾನೆ, ಶಿಖರ್ ಧವನ್, ಕೆ.ಎಲ್. ರಾಹುಲ್, ಮೊಹಮ್ಮದ್ ಶಮಿ, ಇಶಾಂತ್ ಶರ್ಮಾ, ರಿಷಭ್ ಪಂತ್, ಹಾರ್ದಿಕ್ ಪಾಂಡ್ಯ. ಬಿ (₹ 3 ಕೋಟಿ): ವೃದ್ಧಿಮಾನ್ ಸಹಾ, ಉಮೇಶ್ ಯಾದವ್, ಭುವನೇಶ್ವರ್ ಕುಮಾರ್, ಶಾರ್ದೂಲ್ ಠಾಕೂರ್, ಮಯಂಕ್ ಅಗರವಾಲ್ ಸಿ (₹ 1 ಕೋಟಿ): ಕುಲದೀಪ್ ಯಾದವ್, ನವದೀಪ್ ಸೈನಿ, ದೀಪಕ್ ಚಾಹರ್, ಶುಭಮನ್ ಗಿಲ್, ಹನುಮವಿಹಾರಿ, ಅಕ್ಷರ್ ಪಟೇಲ್, ಶ್ರೇಯಸ್ ಅಯ್ಯರ್, ವಾಷಿಂಗ್ಟನ್ ಸುಂದರ್, ಯಜುವೇಂದ್ರ ಚಾಹಲ್, ಮೊಹಮ್ಮದ್ ಸಿರಾಜ್.


ಅಂಕಿತಾ ರೈನಾ –ಎಎಫ್‌ಪಿ ಚಿತ್ರ

ಟೆನಿಸ್: ಭಾರತಕ್ಕೆ ಲಾಟ್ವಿಯಾ ಸವಾಲು

ಜುರ್ಮಾಲ, ಲಾಟ್ವಿಯಾ (ಪಿಟಿಐ): ಭಾರತದ ಟೆನಿಸ್ ಪಟುಗಳು ಶುಕ್ರವಾರ ಇಲ್ಲಿ ಆರಂಭವಾಗಲಿರುವ ಬಿಲಿ ಜೀನ್ ಕಿಂಗ್ ಕಪ್ ವಿಶ್ವ ಗುಂಪಿನ ಪ್ಲೇ ಆಫ್‌ನಲ್ಲಿ ಲಾಟ್ವಿಯಾದ ಕಠಿಣ ಸವಾಲು ಎದುರಿಸಲಿದ್ದಾರೆ. ಖ್ಯಾತ ಆಟಗಾರ್ತಿ ಜೆಲೆನಾ ಒಸ್ತಪೆಂಕೊ ಸೇರಿದಂತೆ ಪ್ರಮುಖರು ಲಾಟ್ವಿಯಾ ತಂಡದಲ್ಲಿದ್ದಾರೆ.

ಭಾರತದ ಪ್ರಮುಖರಲ್ಲಿ ಅಂಕಿತಾ ರೈನಾ ಒಳಗೊಂಡಿದ್ದು ಅವರು ಮೊದಲ ಪಂದ್ಯದಲ್ಲಿ ಜೆಲೆನಾ ವಿರುದ್ಧ ಸೆಣಸ ಲಿದ್ದಾರೆ. ಕರ್ಮನ್ ಕೌರ್ ಥಾಂಡಿ ಅವರು ಅನಸ್ತೇಸಿಜಾ ಸೆವಸ್ತೋವಾ ಅವರನ್ನು ಎದುರಿಸುವರು.

ಮೊದಲ ದಿನ ಅಂಕಿತಾ ಮತ್ತು ಕರ್ಮನ್ ಕೌರ್ ಪಂದ್ಯಗಳು ಮಾತ್ರವಿದ್ದು ಶನಿವಾರ ಸಾನಿಯಾ ಮಿರ್ಜಾ ಮತ್ತು ಅಂಕಿತಾ ಜೋಡಿ ಡಯಾನಾ ಮರ್ಸಿಂಕೆವಿಚಾ ಮತ್ತು ಡ್ಯಾನಿಯೆಲಾ ವಿಸ್ಮನೆ ಜೋಡಿಯನ್ನು ಎದುರಿಸುವರು. ಶುಕ್ರವಾರದ ಪಂದ್ಯಗಳು ರಾತ್ರಿ 8.30ಕ್ಕೆ ಆರಂಭವಾಗಲಿದ್ದು ಶನಿವಾರ 4.30ಕ್ಕೆ ಪಂದ್ಯಗಳು ನಡೆಯಲಿವೆ. ಯೂರೊಸ್ಪೋರ್ಟ್ಸ್‌ನಲ್ಲಿ ನೇರ ಪ್ರಸಾರವಿದೆ.

ಕ್ರಿಕೆಟ್: ಭ್ರಷ್ಟಾಚಾರಕ್ಕೆ ಬಿಟ್‌ಕಾಯಿನ್ ಬಳಕೆ

ನವದೆಹಲಿ (ಪಿಟಿಐ): ಕ್ರಿಕೆಟ್ ಭ್ರಷ್ಟಾಚಾರದಲ್ಲಿ ಬಿಟ್ ಕಾಯಿನ್ ಬಳಕೆಯಾಗುತ್ತಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಭ್ರಷ್ಟಾಚಾರ ತಡೆ ಘಟಕವು ಬಹಿರಂಗಪಡಿಸಿದೆ.

ಜಿಂಬಾಬ್ವೆ ತಂಡದ ಮಾಜಿ ನಾಯಕ ಹೀತ್ ಸ್ಟ್ರೀಕ್ ಅವರನ್ನು ಭ್ರಷ್ಟಾಚಾರದ ಆರೋಪದಲ್ಲಿ ಐಸಿಸಿಯು ಎಂಟು ವರ್ಷಗಳ ಅವಧಿಗೆ ನಿಷೇಧಿಸಿದೆ. ಅವರು ಜಿಂಬಾಬ್ವೆ, ಬಾಂಗ್ಲಾದೇಶ, ಐಪಿಎಲ್ ಮತ್ತು ಅಫ್ಗಾನಿಸ್ತಾನ ಪ್ರೀಮಿಯರ್ ಲೀಗ್ ನಲ್ಲಿ ಕೋಚ್ ಆಗಿ ಕಾರ್ಯನಿರ್ವಹಿಸುವಾಗ ಬುಕ್ಕಿಗಳಿಗೆ ಮಾಹಿತಿ ನೀಡುತ್ತಿದ್ದರು.

ಈ ಪ್ರಕರಣದ ತನಿಖೆ ನಡೆಸುವ ಸಂದರ್ಭದಲ್ಲಿ ಐಸಿಸಿಯ ಎಸಿಯುಗೆ ಹಲವು ಅಚ್ಚರಿಯ ಮಾಹಿತಿಗಳು ಲಭಿಸಿವೆ. ಅದರಲ್ಲಿ ಬಿಟ್‌ಕಾಯಿನ್ ವಿಷಯವೂ ಒಂದಾಗಿದೆ.

ಬುಕ್ಕಿಗಳು ನಗದು ವ್ಯವಹಾರಕ್ಕೆ ಒತ್ತುಕೊಡುತ್ತಿದ್ದರು. ಅಲ್ಲದೇ ಆಮಿಷಗಳ ರೂಪದಲ್ಲಿ ಕಾರು, ದುಬಾರಿ ಆಭರಣಗಳು ಮತ್ತು ದುಬಾರಿ ಫೋನ್‌ಗಳನ್ನು ನೀಡುತ್ತಿದ್ದರು. ಆದರೆ ಇದೀಗ ಅವರು ಕ್ರಿಪ್ಟೊಕರೆನ್ಸಿ ಬಳಕೆ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

2018ರಲ್ಲಿ ಹೀತ್ ಸ್ಟ್ರೀಕ್ 35 ಸಾವಿರ ಡಾಲರ್ ಮೌಲ್ಯದ ಎರಡು ಬಿಟ್‌ಕಾಯಿನ್‌ಗಳನ್ನು ಪಡೆದಿದ್ದರು.

'ಇದೊಂದು ಹೊಸ ರೀತಿಯ ತಂತ್ರದ ಅರಿವು ನಮಗಾಗಿದೆ. ಆದರೆ ನಮ್ಮ ತನಿಖಾ ತಂಡವೂ ಇಂತಹ ಹೊಸ ದುರ್ಮಾರ್ಗಗಳನ್ನು ಪತ್ತೆಹಚ್ಚುವಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸಿದೆ. ಹವಾಲಾ ಮಾದರಿಯಲ್ಲಿಯೇ ಬಿಟ್‌ಕಾಯಿನ್ ವ್ಯವಹಾರವನ್ನು ಪತ್ತೆ ಹಚ್ಚುವುದೂ ಸವಾಲಿನದ್ದಾಗಿದೆ' ಎಂದು ಐಸಿಸಿಯ ಎಸಿಯು ಪ್ರಧಾನ ವ್ಯವಸ್ಥಾಪಕ ಅಲೆಕ್ಸ್ ಮಾರ್ಷಲ್ ಹೇಳಿದ್ದಾರೆ.

ರಾಜ್ಯ ಚೆಸ್ ಸಂಸ್ಥೆ ಕಾರ್ಯದರ್ಶಿ ಹನುಮಂತ ನಿಧನ

ಬೆಂಗಳೂರು: ಯುನೈಟೆಡ್ ಕರ್ನಾಟಕ ಚೆಸ್ ಸಂಸ್ಥೆಯ (ಯುಕೆಸಿಎ) ಕಾರ್ಯದರ್ಶಿ, ನಗರದ ಹನುಮಂತನಗರ ನಿವಾಸಿ ಹನುಮಂತ ರಾಮಣ್ಣ (61) ಅವರು ಕೋವಿಡ್‌ನಿಂದ ಗುರುವಾರ ಮೃತ ಪಟ್ಟರು ಎಂದು ಯುಕೆಸಿಎ ತಿಳಿಸಿದೆ. ಅವರಿಗೆ ಪತ್ನಿ ಮತ್ತು ಪುತ್ರ ಇದ್ದಾರೆ.


ಹನುಮಂತ

ಎಲ್‌ಐಸಿ ಉದ್ಯೋಗಿಯಾಗಿದ್ದ ಅವರು ಸ್ವಯಂ ನಿವೃತ್ತಿ ತೆಗೆದುಕೊಂಡ ನಂತರ ಚೆಸ್ ಸಂಘಟನೆಯ ಕಡೆಗೆ ಹೆಚ್ಚು ಗಮನ ನೀಡಿದರು. 25 ವರ್ಷ ಯುಕೆಸಿಎ ಪದಾಧಿಕಾರಿಯಾಗಿದ್ದರು.

2006ರಲ್ಲಿ ಅವರು ಯುಕೆಸಿಎ ಕಾರ್ಯದರ್ಶಿಯಾದ ಸಂದರ್ಭದಲ್ಲಿ ರಾಜ್ಯದಲ್ಲಿ ಫಿಡೆ ರೇಟೆಡ್ ಆಟಗಾರರ ಸಂಖ್ಯೆ 40 ಮಾತ್ರ ಇತ್ತು. ಈಗ ಅದು ಎರಡು ಸಾವಿರಕ್ಕೂ ಅಧಿಕವಾಗಿದೆ ಎಂದು ತಿಳಿಸಲಾಗಿದೆ.